TEXT PROBLEM
WITHIN THE
BOOK ONLY

UNIVERSAL LIBRARY
OU_202313
UNIVERSAL LIBRARY

| | | |
|---|---|---|
| ಜಯ ಹಿಂದ್ | ೩ | ೦ |
| ರಾಷ್ಟ್ರೀಯ ಶಿಕ್ಷಣ | ೦ | ೮ |
| ಅಸ್ಪೃಶ್ಯತಾ ನಿವಾರಣೆ | ೦ | ೧೨ |
| ಪ್ರಾಂತಭಾಷೆ ರಾಷ್ಟ್ರಭಾಷೆ | ೦ | ೬ |
| ಖಾದಿ | ೦ | ೮ |
| ಕಾಂಗ್ರೆಸ್ಸೂ ಸ್ವಯಂಸೇವಕ ದಲವೂ | ೦ | ೧೦ |
| ಕರ್ನಾಟಕ ಏಕೀಕರಣ | ೦ | ೧೨ |
| ಹಿಂದೀ ಸಂಸ್ಥಾನಗಳ ಸ್ವರೂಪ ಮತ್ತು ಭವಿತವ್ಯ | ೧ | ೦ |
| ಏಕತಂತ್ರ ಕರ್ನಾಟಕ | ೦ | ೮ |
| ಮಹಿಳೆಯರಿಗೆ | ೦ | ೬ |
| ಮೈಸೂರು ಕಾರಾಗ್ರಹಗಳಲ್ಲೇನು | ೦ | ೨ |
| ನಮ್ಮ ಸೈನ್ಯ | ೦ | ೨ |
| ಮದ್ಯಪಾನದ ದುಷ್ಪರಿಣಾಮ | ೦ | ೧ |

**ಸಾಹಿತ್ಯ ಭಂಡಾರ**
ಕೊಪ್ಪೀಕರ ಬೀದಿ, ಹುಬ್ಬ

ಇಪ್ಪತ್ತನೆಯ ಪ್ರಕಟನೆ

# ವರ್ಧಾ ಶಿಕ್ಷಣ ಯೋಜನೆ

**ಝಾಕೀರ್ ಹುಸೇನ್ ಮಂಡಲದ ವರದಿ**

●

ವಿಸ್ತೃತ ಪ್ರಸ್ತಾವನೆಯೊಂದಿಗೆ

೧೯೪೭

●

**ಸಾಹಿತ್ಯ ಭಾಂಡಾರ, ಹುಬ್ಬಳ್ಳಿ**

ಪ್ರಕಾಶಕರು:
ಮಂಗಳೂರು ಗೋವಿಂದರಾಯರು
ಸಾಹಿತ್ಯ ಭಾಂಡಾರ, ಹುಬ್ಬಳ್ಳಿ

ಮೊದಲನೆಯ ಮುದ್ರಣ ೧೯೩೮
ಎರಡನೆಯ ಮುದ್ರಣ ೧೯೪೬

ಬೆಲೆ: ೦-೧೨-೦

ಮುದ್ರಕರು:
ಎಚ್. ಬಿ. ನವಲೂರ
ಹಿಂದಮಾತಾ ಮುದ್ರಣಾಲಯ
ಧಾರವಾಡ.

# ನಮ್ಮ ಮಾತು

ಹಿಂದುಸ್ಥಾನದಲ್ಲಿನ ಸದ್ಯದ ಶಿಕ್ಷಣಪದ್ಧತಿ ವಿದೇಶೀಯರಿಂದ ಹೇರಲ್ಪಟ್ಟಿದ್ದು, ಬ್ರಿಟಿಷ್ ಸತ್ತೆಯನ್ನು ಬೆಳೆಸುವಂತಹದು ಎಂಬುದು ಪ್ರತಿಯೊಬ್ಬ ಹಿಂದೀಯನಿಗೂ ಗೊತ್ತಿದ್ದ ಮಾತು. ಬ್ರಿಟಿಷರು ಈ ದೇಶದಲ್ಲಿ ಕಾಲಿಟ್ಟು ತಮ್ಮ ಸಾಮ್ರಾಜ್ಯವನ್ನು ಇಲ್ಲಿ ಹೂಡಿ ದೇಶವನ್ನಾಳಲು ಪ್ರಾರಂಭಿಸಿದಾಗ ಅವರಿಗೆ, ತಮ್ಮ ಭಾಷೆಯನ್ನು ಕಲಿತು ಸ್ವಜನರನ್ನು ಬ್ರಿಟಿಷರ ಅಂಕಿತದಲ್ಲಿಡುವ ಕಾರ್ಯದಲ್ಲಿ ನೆರವಾಗುವ ಹಿಂದೀ ಶಿಕ್ಷಕವರ್ಗವು ಬೇಕಾಯಿತು. ತಮ್ಮ ಸಾಮ್ರಾಜ್ಯ ರಕ್ಷಣೆಗೆ ಅನುವಾಗಲೆಂದೇ ಈ ಶಿಕ್ಷಣಪದ್ಧತಿಯನ್ನು ಪಕ್ರಮಿಸಿ ದೇಶದಲ್ಲಿ ಸ್ವತಂತ್ರ ವೃತ್ತಿಯೂ, ದೇಶಾಭಿಮಾನವೂ ರಾಷ್ಟ್ರೀಯ ಜಾಗ್ರತಿಯೂ ಉತ್ಪನ್ನವಾಗದ ಹಾಗೆ ವ್ಯವಸ್ಥೆ ಮಾಡಿದರು. ಈ ಶಿಕ್ಷಣವು ಬರಿಯ ಪುಸ್ತಕ ಜ್ಞಾನವನ್ನು ಒದಗಿಸಿಕೊಡುವದು ಮಾತ್ರವಲ್ಲದೆ ಜೀವನದಲ್ಲಿ ಕಾರ್ಯತಃ ಯಾವ ರೀತಿಯಿಂದಲೂ ಉಪಯೋಗವಾಗುವದಿಲ್ಲ. ಪುಸ್ತಕಜ್ಞಾನವಿದ್ದ ಮಾತ್ರದಿಂದಲೇ ಯಾರೂ ಉತ್ತಮ ನಾಗರಿಕರೂ ಸುಶಿಕ್ಷಿತರೂ ಆಗಲಾರರು. ವಿದ್ಯಾರ್ಥಿಗಳನ್ನು ಆಧುನಿಕ ನಾಗರಿಕತೆಯ ಹೊರ ಆಡಂಬರದ ಮಬ್ಬಿಗೆ ತೊಡಗಿಸಿ ಈ ಪದ್ಧತಿಯು ಅವರನ್ನು ದಾಸ್ಯ ಪ್ರವೃತ್ತಿಗೆ ಎಳೆಯುತ್ತದೆ. ಪ್ರಚಲಿತ ಶಿಕ್ಷಣದಿಂದ ಜನರಲ್ಲಿನ ಸ್ವಾತಂತ್ರ್ಯಬುದ್ಧಿ ಹಾಗು ಸ್ಥಿರತೆಯು ನಾಶವಾಗಿ ಸಂಬಳಕ್ಕಾಗಿ ಜೀವತೊರೆದು ಪ್ರಯತ್ನಪಡುವ ಒಂದು ಸೇವಕವೃತ್ತಿಯ ತಂಡ ಉತ್ಪನ್ನವಾಗಿದೆ. ಶಿಕ್ಷಣ ಹೊಂದಿದವರ ಆದರ್ಶವೆಂದರೆ ಸರಕಾರದ ಕೆಲಸ. ಅದಕ್ಕಿಂತ ಹೆಚ್ಚಿನ ವಿಚಾರವೇ ಅವರ ತಲೆಯಲ್ಲಿ ಮೂಡುವದಿಲ್ಲ. ಹೀಗಾಗಿ ಪ್ರಾಥಮಿಕ ವಿದ್ಯಾಭ್ಯಾಸದಿಂದ ಮೊದಲುಗೊಂಡು ಕೊನೆಯ ವರೆಗೂ ಯೋಗ್ಯ ಮಾನಸಿಕ ಶಾರೀರಕ ಬೆಳವಣಿಗೆಗೆ ಆಸ್ಪದ ಕೊಡದೆ ಪುಸ್ತಕೀಯ ಶಿಕ್ಷಣ ಕೊಟ್ಟು ಅವರನ್ನು ಸತ್ವಹೀನರನ್ನಾಗಿ ಮಾಡುತ್ತಾ ಬಂದಿದೆ.

ಈ ವಿಷಯದಲ್ಲಿ ಕಳೆದ ೨೦-೨೫ ವರ್ಷಗಳಿಂದ ದೇಶದಲ್ಲಿ ಜಾಗ್ರತಿಯಾಗಿ, ಹಿಂದೀಯರ ಗಮನವು ಶಿಕ್ಷಣದ ಕಡೆಗಾದರೂ ಹೋಗಲಾರಂಭಿಸಿದೆ. ಇದರ ಪರಿಣಾಮವಾಗಿ ೧೯೦೬ ಮತ್ತು ೧೯೨೧ರಲ್ಲಿ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸುವ ಪ್ರಯತ್ನ ಅಲ್ಲಲ್ಲಿ ನಡೆಯಿತು. ಆದರೆ ಆಗ ಸ್ಥಾಪಿಸಿದ ಶಾಲೆಗಳು ಚಿರಕಾಲ ಉಳಿಯಲಿಲ್ಲ. ದೇಶದ ಸ್ವಾತಂತ್ರ್ಯಸಮರದಲ್ಲಿ ಯುಕ್ತರೀತಿಯಿಂದ ಪಾಲುಗೊಳ್ಳಲು ಹಾಗು ದೇಶದ ಏಳಿಗೆಗಾಗಿಯೇ ಕೆಲಸ ಮಾಡುವ ಕಾರ್ಯಕರ್ತರನ್ನು ತಯಾರಿಸಲು ಈ ಶಾಲೆಗಳು ಉಪಯೋಗವಾದವು. ಈ ಉಪಕ್ರಮಗಳು ಒಂದು ರೀತಿಯಿಂದ ಯುದ್ಧಕಾಲದ ಶಿಕ್ಷಣಶಿಬಿರಗಳಾಗಿದ್ದುವೇ ಹೊರತು ಭಾರತದ ಸುಪ್ರಜೆಗಳನ್ನು ತಯಾರಿಸುವ ಅಂಗಗಳಾಗಿ ಪರಿಣಮಿಸಲಿಲ್ಲ. ಹಾಗು ಸರಕಾರದವರು ಅವುಗಳನ್ನು ಅಷ್ಟು ದೀರ್ಘಕಾಲ ಬಾಳಗೊಡಲೂ ಇಲ್ಲ.

ಈಗ ಹಿಂದುಸ್ತಾನದ ಏಳು ಪ್ರಾಂತಗಳಲ್ಲಿ ಕಾಂಗ್ರೆಸ್ಸು ಅಧಿಕಾರಾರೂಢವಾಗಿದ್ದು, ಹಿಂದೀಯರ ಉದ್ದೇಶ ಆಶೆ-ಆಕಾಂಕ್ಷೆಗಳನ್ನು ಕಾರ್ಯರೂಪದಲ್ಲಿ ತರಲು ಸ್ವಲ್ಪ ಮಟ್ಟಿಗಾದರೂ ಅವಕಾಶ ದೊರೆತಿರುವದು. ಹಿಂದೀಯರ ಜೀವನದ ಪ್ರತಿಯೊಂದು ಅಂಗ ಪ್ರತ್ಯಂಗದಲ್ಲಿಯೂ ೧೫೦ ವರ್ಷಗಳಿಂದ ಪರಕೀಯರು ಹೇರಿರುವ ರಚನೆಯನ್ನು ಕಿತ್ತುಹಾಕಿ ಆ ಸ್ಥಳದಲ್ಲಿ ಹಿಂದೀ ಸಂಸ್ಕೃತಿ ಸಮಾಜಗಳಿಗೆ ಪೋಷಕವಾದ ರಾಷ್ಟ್ರೀಯ ರಚನೆಯನ್ನು ತರಬೇಕೆಂದು ಕಾಂಗ್ರೆಸ್ಸಾದರೂ ಇಚ್ಛಿಸುವದು. ಎಲ್ಲ ಬದಲಾವಣೆಗಳ ಮೂಲವಾಗಿ, ಮೊದಲು ಶಿಕ್ಷಣಕ್ರಮವು ಬದಲಾಗಬೇಕು. ಶಿಕ್ಷಣಕ್ರಾಂತಿಯ ಅಡಿಗಲ್ಲ ಮೇಲೆಯೇ ಇಡಿಯ ಸಮಾಜದ, ದೇಶದ ಕ್ರಾಂತಿಯು ಅವಲಂಬಿಸಿರುವದು. ಶಿಕ್ಷಣದ ಹಾಗೂ ಶಿಕ್ಷಣ ಕ್ರಮದ ಈ ಮಹತ್ವವನ್ನರಿತೇ ಒಬ್ಬ ಪ್ರಸಿದ್ಧ ವ್ಯಕ್ತಿ 'ದೇಶದ ಶಿಕ್ಷಣಕ್ರಮವನ್ನು ನನ್ನ ಕಡೆಗೆ ಒಪ್ಪಿಸಿದರೆ ಸಾಕು; ದೇಶವನ್ನು ಬೇಕಾದವರು ಆಳಲಿ' [Give me the teaching of the country in my hands; I do not care who rules the land] ಎಂದಿರುವನು. ೧೯೧೭ರಲ್ಲಿ ತಮ್ಮ ಝಾರನನ್ನು ಓಡಿಸಿ ಕಾರ್ಮಿಕ ಸರಕಾರವನ್ನು ಸ್ಥಾಪಿಸಿದ ಸೋವಿಯೆಟ್ ರಶಿಯದಲ್ಲಿ ಕೂಡ ಶಿಕ್ಷಣದ ಕಡೆಗೆ ಎಲ್ಲಕ್ಕಿಂತ ಹೆಚ್ಚು ಗಮನ ಕೊಡಲಾಗುತ್ತದೆ ಶಿಕ್ಷಣ ಪದ್ಧತಿಯ ಈ ಮಹತ್ವವನ್ನರಿತೇ

ಗಾಂಧೀಜಿಯವರೂ ಈ ವಿಷಯವಾಗಿ ಪೂರ್ಣ ಯೋಚಿಸಿ ದೇಶದ ಇತಿಹಾಸ ಸಂಸ್ಕೃತಿಗಳಿಗೆ ಅನ್ವಯಿಸುವ, ಸದ್ಯದ ಪರಿಸ್ಥಿತಿಗನುಸರಿಸಿದ ಶಿಕ್ಷಣಕ್ರಮವು ಅತ್ಯಗತ್ಯವೆಂದು ಈಗ 'ವರ್ಧಾಯೋಜನೆ' ಯನ್ನು ತಯಾರಿಸಿ ಜನರ ಮುಂದಿಟ್ಟಿದ್ದಾರೆ.

ದೇಶದ ಹಲವು ಭಾಗಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ಸ್ಥಾಪಿತ ವಾಗಿದ್ದರೂ ಆಳರಸರು, ಈ ಮಂತ್ರಿಮಂಡಲಗಳಿಂದ ಹೆಚ್ಚು ದೇಶಹಿತ ಕಾರ್ಯಗಳಾಗದಂತೆ ವ್ಯವಸ್ಥೆ ಮಾಡಿಬಿಟ್ಟಿರುವರು. ಸರಕಾರದ ಆಡಳಿತವನ್ನು ನಡಿಸುವುದಕ್ಕಾಗಿಯೇ ಪ್ರಾಂತಗಳಲ್ಲಿನ ಉತ್ಪನ್ನದ ಬಹುಭಾಗವು ವಿನಿಯೋಗವಾಗಿ ಸುಧಾರಣೆಯ ಯೋಜನೆಗಳಿಗೆ ಅನುವಿಲ್ಲದಂತಾಗಿದೆ. ವೆಚ್ಚದ ಪಾಲನ್ನು ಕಡಿಮೆಮಾಡುವ ಅಧಿಕಾರ ನಮ್ಮ ಕಡೆಗಿಲ್ಲ. ಅಥವಾ ಹೆಚ್ಚು ತೆರಿಗೆಯ ಭಾರವನ್ನು ಹೊರಲು ಜನರೂ ಶಕ್ತರಿಲ್ಲ. ಈಗಿನ ತೆರಿಗೆಯ ಪ್ರಮಾಣವೇ ಹೆಚ್ಚಿದ್ದು ಅವರು ಪರಿಹಾರ ಬೇಡುತ್ತಿರುವರು. ಹೀಗಾಗಿ ಈಗ ಕೊಡಲಾಗುತ್ತಿರುವ ಅಲ್ಪಹಣದಿಂದ ಶಿಕ್ಷಣವನ್ನು ಸಾರ್ವತ್ರಿಕವಾಗಿಯೂ, ಒತ್ತಾಯದಿಂದಲೂ ಕಾರ್ಯರೂಪದಲ್ಲಿ ತರುವದಶಕ್ಯ. ಈ ಯೋಜನೆಯನ್ನು ತಯಾರಿಸುವಾಗ ಗಾಂಧೀಜಿಯವರು ಇದನ್ನೂ ಗಮನದಲ್ಲಿಟ್ಟಿರುವರು.

ಈ ಪುಸ್ತಕದಲ್ಲಿ ವರ್ಧಾಯೋಜನೆಯನ್ನು ಪೂರ್ಣರೀತಿಯಿಂದ ವಿವೇಚಿಸ ಲಾಗಿದೆ. ಯೋಜನೆಯ ಉದ್ದೇಶ, ಕಾರ್ಯಕ್ರಮ, ಅದನ್ನು ಬಳಿಕೆಗೆ ತರುವ ಮಾರ್ಗ ಮುಂತಾದ ವಿಷಯವನ್ನೆಲ್ಲಿಯೂ ಇದರಲ್ಲಿ ವಿವರವಾಗಿ ಬರೆಯ ಲಾಗಿದೆ. ಆದರೂ ಸಹ ಈ ಯೋಜನೆಯ ಮುಖ್ಯ ವಿಷಯಗಳು ಮತ್ತು ಇವುಗಳ ವಿಮರ್ಶಾತ್ಮಕ ಟೀಕೆಗಳ ಬಗೆಗೆ ಇಲ್ಲಿ ಸ್ವಲ್ಪ ಚರ್ಚಿಸುವುದು ಅನವ ಶ್ಯಕವಾಗಲಾರದು.

ಈ ವರ್ಧಾ ಯೋಜನೆ, ಬಾಲಕನಿಗೆ ಏಳನೇ ವರ್ಷದಿಂದ ಪ್ರಾರಂಭಿಸಿ ೧೪ನೇ ವರ್ಷದ ವರೆಗೆ ಶಿಕ್ಷಣ ಕೊಡಲು ಯತ್ನಿಸುತ್ತದೆ. ಮಕ್ಕಳ ಏಳನೇ ವರ್ಷದಿಂದಲೇ ಈ ಯೋಜನೆಯನ್ನು ಪ್ರಾರಂಭಿಸಬೇಕೆಂಬುದರ ಕಾರಣವು ಹಣದ ಹಾಗು ಯೋಗ್ಯ ಶಿಕ್ಷಕರ ಅಭಾವವಾಗಿದೆ. ಏಳು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ತಾಯಿತಂದೆಗಳು ಶಿಕ್ಷಣ ಕೊಡುವದು ವಿಹಿತ. ಆ ಅವಧಿಯಲ್ಲಿ ಮಕ್ಕಳು ತಮ್ಮ ಪ್ರತಿಯೊಂದು ಕಾರ್ಯಕ್ಕೂ ದೊಡ್ಡವರನ್ನು

ಅವಲಂಬಿಸಿರುತ್ತವೆ. ಅವರಿಗೆ ತಮ್ಮ ಉಡಿಗೆತೊಡಿಗೆಗಳನ್ನು ತೊಟ್ಟುಕೊಳ್ಳು ವಷ್ಟಾದರೂ ಜ್ಞಾನವಿರುವದಿಲ್ಲ ಮತ್ತು ಸ್ವಬುದ್ಧಿಯಿಂದ ಎಷ್ಟೇ ಸಣ್ಣ ದಾಗಲೀ ಕೆಲಸವನ್ನು ಮಾಡಲು ಅಶಕ್ತವಿರುವವಲ್ಲದೆ ಅವುಗಳ ಗ್ರಹಣಶಕ್ತಿ ಯಾದರೂ ತೀರ ಕಡಿಮೆ ಇರುತ್ತದೆ. ಮಾಂಟಿಸೆರಿ ಪದ್ಧತಿಯ ಶಿಕ್ಷಣಕ್ರಮವು ಈ ಎಳೆವಯಸ್ಸಿನ ಮಕ್ಕಳಿಗಾಗಿಯೇ ಪ್ರಚಲಿತವಿದ್ದರೂ ಅದನ್ನು ಸಾರ್ವತ್ರಿಕವಾಗಿ ಕಾರ್ಯರಂಗದಲ್ಲಿ ತರುವಷ್ಟು ಹಣದ ಪೂರೈಕೆ ನಮ್ಮಲ್ಲಿಲ್ಲ. ಹಾಗು ಶಿಕ್ಷಕ ರಾದರೂ ಸದ್ಯದಲ್ಲಿ ಅಷ್ಟು ಹೆಚ್ಚು ಪ್ರಮಾಣದಿಂದ ದೊರೆಯುವದು ಕಷ್ಟಸಾಧ್ಯ. ಇದರಂತೆ ೧೪ ವರ್ಷದ ಮೇಲಿನ ಹುಡುಗರನ್ನು ತಯಾರುಮಾಡುವದು ಅಗತ್ಯ ವಿದ್ದರೂ ಈಗಿನ ಮಟ್ಟಿಗೆ ಸಾಧ್ಯವಿಲ್ಲ. ಅದೂ ಅಲ್ಲದೆ ಕೈಗಾರಿಕೆ ಉದ್ಯೋಗ ಗಳನ್ನು ಕಲಿಸುವ ಅನೇಕ ಶಾಲೆಗಳು ದೇಶದಲ್ಲಿರುವವು. ಸದ್ಯಕ್ಕೆ ಅವುಗಳನ್ನು ಉಪಯೋಗಿಸಿಕೊಳ್ಳಬಹುದು. ಇದೆಲ್ಲವನ್ನು ನೋಡಿ ಹಾಗು ಸಾಧಾರಣವಾಗಿ ಏಳು ವರ್ಷದ ಬಾಲಕನು ತನ್ನ ಊಟ-ಉಡಿಗೆಗಳ ಮಟ್ಟಿಗಾದರೂ ಸ್ವತಂತ್ರ ವಾಗಿ ಬಿಡಲು ಯೋಗ್ಯನಾಗಿರುವದರಿಂದಲೂ ಕಲಿಸಿಕೊಟ್ಟ ವಿಷಯಗಳನ್ನು ಗ್ರಹಣಮಾಡುವ ಶಕ್ತಿ ಅವನಿಗೆ ಬಂದಿರುವದರಿಂದಲೂ ಏನಾದರೊಂದು ಚಿಕ್ಕ ಶಾರೀರಕ ಕೆಲಸವನ್ನು ಮಾಡಲು ಅವನು ಸಿದ್ಧನಿರುವದರಿಂದಲೂ ಈ ವಯಸ್ಕರನ್ನೇ ಯೋಜನೆಯು ಆರಿಸಿದೆ. ಸದ್ಯಕ್ಕೆ ಶಿಶುವರ್ಗದಿಂದ ಮೊದಲು ಗೊಂಡು ಮೆಟ್ರಿಕ್ ವರೆಗೆ ಕಲಿಯುವ ಪ್ರತಿಯೊಬ್ಬನಿಗೆ ಕನ್ನಡಕ್ಕೆ ೫ ವರ್ಷ ಹಾಗು ಇಂಗ್ಲಿಷ್ ಸಾಲೆಯಲ್ಲಿ ಏಳು ವರ್ಷ ಹೀಗೆ ೧೨ ವರ್ಷಗಳು ಸಾಲೆಗೆ ಹೋಗಬೇಕಾಗುವದು. ಆದರೆ ಇಷ್ಟು ಶಿಕ್ಷಣವು ವರ್ಧಾಯೋಜನೆಯ ಪ್ರಕಾರ ಏಳು ವರ್ಷಗಳಲ್ಲಿ ಮುಗಿಯುವುದು. ಇಂಗ್ಲಿಷ್‌ಭಾಷಾಜ್ಞಾನವೊಂದನ್ನುಳಿದು ಮಿಕ್ಕೆಲ್ಲ ವಿಧದಿಂದಲೂ ವರ್ಧಾ ಯೋಜನೆಯ ಶಿಕ್ಷಣವು ಸದ್ಯದ ಮೆಟ್ರಿಕ್ ಶಿಕ್ಷಣದ ಸರಿಸಮಾನವಿರುವದು.

ವರ್ಧಾ ಯೋಜನೆಯ ಎರಡನೆಯ ಮುಖ್ಯ ಸಂಗತಿಯೆಂದರೆ ಈಗಿನಂತೆ ಪುಸ್ತಕ ಶಿಕ್ಷಣ ಕೊಡದೆ ಅದರ ಬದಲು ಬಾಲಕನಿಗೆ ಒಂದು ಉದ್ಯೋಗ ಕಲಿಸಿ ಆ ಕೈಗಾರಿಕೆಗೆ ಸಂಬಂಧಿಸಿದಂತೆ ಉಳಿದ ಎಲ್ಲ ವಿಷಯಗಳನ್ನು ತಿಳಿಸುವದು. ಇದರಿಂದ ವಿದ್ಯಾರ್ಥಿಯು ಸುಶಿಕ್ಷಿತನಾಗುವನಲ್ಲದೆ ಸ್ವಾವಲಂಬಿಯೂ ಆಗು ವನು ಶಿಕ್ಷಣ ಮುಗಿದ ಕೂಡಲೆ ಅವನು ನೌಕರಿಗಾಗಿ ಹಾತೊರೆಯಬೇಕಾಗಿಲ್ಲ.

ಮೂರನೆಯದಾಗಿ ಈ ಯೋಜನೆಯ ಮೂಲಕ ಕೊಡಲ್ಪಡುವ ಶಿಕ್ಷಣವು ಬಾಲಕರ ತಾಯ್ನುಡಿಯಲ್ಲಿಯೇ ಕೊಡಲಾಗುವದು. ವಿಷಯಜ್ಞಾನಕ್ಕಿಂತ ಭಾಷಾಜ್ಞಾನಕ್ಕೆ ಹೆಚ್ಚು ಮಹತ್ವ ಕೊಡುವ ಈಗಿನ ಪದ್ಧತಿಯನ್ನು ಬಿಟ್ಟು ಎಲ್ಲ ವಿಷಯಗಳನ್ನೂ ಬಾಲಕನಿಗೆ ಚೆನ್ನಾಗಿ, ಸುಲಭವಾಗಿ ಮನದಟ್ಟಾಗುವ ಮಾತೃಭಾಷೆಯಲ್ಲಿಯೇ ತಿಳಿಸಲ್ಪಡುವದು. ಇದರಿಂದ ಪರಕೀಯ ಭಾಷೆಯನ್ನು ಕಲಿಯಲು ಹಾಗು ಆ ಭಾಷೆಯ ಮೂಲಕ ವಿಷಯಗ್ರಹಣ ಮಾಡಲು ತಗಲುವ ಕಾಲ ಬುದ್ಧಿ ವ್ಯಯಗಳು ಕಡಿಮೆಯಾಗುವವು

ವರ್ಧಾ ಯೋಜನೆಯು ಸ್ವಾವಲಂಬಿಯಾದುದೆಂಬುದು ಇದರ ಇನ್ನೊಂದು ಮುಖ್ಯ ವೈಶಿಷ್ಟ್ಯ. ಶಾಲೆಯ ಕಟ್ಟಡ ಮತ್ತು ಯೋಗ್ಯ ಶಿಕ್ಷಣ ಸಾಮಗ್ರಿಗಳನ್ನು ಒದಗಿಸಿಕೊಟ್ಟರೆ ಸಾಕು. ಶಿಕ್ಷಕರ ಸಂಬಳ ಮೊದಲಾದ ವರ್ಷಂಪ್ರತಿಯ ವೆಚ್ಚಕ್ಕಾಗಿ ಏನೂ ಯೋಚಿಸಬೇಕಾಗಿಲ್ಲ ಬಾಲಕರು ಪ್ರತಿ ದಿನ ಕೈಗಾರಿಕೆಯನ್ನು ಕಲಿಯುವದಕ್ಕೋಸುಗ ಇರುವ ವೇಳೆಯಲ್ಲಿ ಅವರು ಸಿದ್ಧಪಡಿಸುವ ವಸ್ತುಗಳಿಂದ, ಸಹಜವಾಗಿ ಈ ಎಲ್ಲ ವೆಚ್ಚಗಳು ತುಂಬಿಬರುವವು. ಆದುದರಿಂದ ಹಣದ ಅಭಾವವನ್ನು ತೋರಿಸಿ ಈ ಯೋಜನೆಯನ್ನು ಮುಂದೆಹಾಕುವ ಕಾರಣವಿಲ್ಲ.

ಕೊನೆಯದಾಗಿ ಸತ್ಯ, ಅಹಿಂಸಾತತ್ವದ ಧ್ಯೇಯವನ್ನು ಎದುರಿಗಿಟ್ಟು, ಈಗ ಎಲ್ಲೆಲ್ಲಿಯೂ ಯುದ್ಧವಾಸನೆಯಿಂದ ಉನ್ಮತ್ತವಾದ ರಾಷ್ಟ್ರಗಳ ನಡುವಿನ ಈ ಅಶಾಂತಿ ವಾತಾವರಣದಲ್ಲಿ ವಿಶ್ವಶಾಂತಿಗೋಸುಗ ಪ್ರಯತ್ನಿಸುವ ಯೋಗ್ಯ ಶಾಂತಿಯೋಧರನ್ನು ಸಿದ್ಧಗೊಳಿಸುವುದೇ ಈ ಯೋಜನೆಯ ಹೆಗ್ಗುರಿ.

ಇವು ವರ್ಧಾ ಶಿಕ್ಷಣಕ್ರಮದ ಮುಖ್ಯ ಉದ್ದೇಶ ಧ್ಯೇಯ ಕಾರ್ಯಕ್ರಮಗಳು. ಮಹಾತ್ಮಾಜಿಯವರು ಈ ಯೋಜನೆಯನ್ನು ಒಂದು ನಿಶ್ಚಿತರೂಪದಲ್ಲಿ ಹಿಂದೀ ಜನತೆಯ ಮುಂದಿಟ್ಟು ಕೆಲವು ತಿಂಗಳಾದವು. ಯೋಜನೆಯ ಸಂಬಂಧವಾಗಿ ಅನೇಕ ತರವ ಟೀಕೆ ವಿಮರ್ಶೆಗಳೂ, ಸಲಹೆ ಸೂಚನೆಗಳೂ ಹೊರಬಿದ್ದಿವೆ. ಇದರ ಬಗೆಗೆ ವಿಮರ್ಶಾತ್ಮಕ ಚರ್ಚೆಮಾಡಲೋಸುಗವೇ ಮೊನ್ನೆ ಮೊನ್ನೆ ವಾರ್ಧಾದಲ್ಲಿ ಶೈಕ್ಷಣಿಕ ಪರಿಷತ್ತು ಕರೆಯಲ್ಪಟ್ಟು ಅದರಲ್ಲಿ ಎಲ್ಲ ಕಾಂಗ್ರೆಸ್ ಪ್ರಾಂತಗಳ ಶಿಕ್ಷಣ ಮಂತ್ರಿಗಳೂ ದೇಶದ ಪ್ರಸಿದ್ಧ ಶಿಕ್ಷಣತಜ್ಞರೂ

ಪಾಲುಗೊಂಡಿದ್ದರು. ಆಗ ಯೋಜನೆಯ ಸಾಧಕ ಬಾಧಕಗಳನ್ನು ಚೆನ್ನಾಗಿ ಚರ್ಚಿಸಲಾಯಿತು.

ಇಲ್ಲಿನ ವರೆಗೂ ಬಂದ ಟೀಕೆಗಳಲ್ಲಿ ಯೋಜನೆಯ ಸ್ವಾವಲಂಬನೆಯ ಬಗೆಗೆ ಸಂದೇಹ ಪಡುವ, ಹಾಗು ಸಾವಲಂಬನೆಗೆ ಅಷ್ಟು ಮಹತ್ವ ಕೊಡಬಾರದೆನ್ನುವ ಟೀಕೆಗಳೇ ಬಹಳ ಹೆಚ್ಚು. ಬಾಲಕನ ಶಿಕ್ಷಣಕ್ಕೂ ಹಣಕ್ಕೂ ಯಾವ ಸಂಬಂಧವನ್ನೂ ಜೋಡಿಸಬಾರದೆಂದೂ, ಶಿಕ್ಷಣಕ್ಕೆ ಬೇಕಾದ ಹಣವನ್ನು ಪೂರೈಸುವದು ಸರಕಾರದ ಆದ್ಯ ಕರ್ತವ್ಯಗಳಲ್ಲೊಂದೆಂದೂ, ಹಣ ಒದಗಿಸುವ ಕಾರ್ಯಕ್ಕೆ ಹೆಚ್ಚು ಗಮನಕೊಟ್ಟು ಶಿಕ್ಷಣಕ್ಕೆ ಭಂಗ ತರಬಾರದೆಂದೂ ಅಭಿಪ್ರಾಯಪಡುವವರದೊಂದು ಗುಂಪು. ಇನ್ನು ಈ ವಾರ್ಧಾಯೋಜನೆಯು ಸ್ವಾವಲಂಬಿಯಾಗುವದು ಶಕ್ಯವೇ ಇಲ್ಲವೆಂದು ವಾದಿಸುವವರದು ಇನ್ನೊಂದು ಗುಂಪು.

ಮೊದಲನೆಯ ಮತದ ಅನುಸಾರವಾಗಿ ಈಗ ಶಿಕ್ಷಣದ ಸುಧಾರಣೆ ಸಾಧ್ಯವೇ ಇಲ್ಲ. ಇದಕ್ಕೆ ಮೇಲೆಯೇ ಹೇಳಿರುವಂತೆ ಶಿಕ್ಷಣಖಾತೆಗೆ ಈಗಿರುವದಕ್ಕಿಂತ ಹೆಚ್ಚು ಹಣ ದೊರೆಯುವ ಸಂಭವವಿಲ್ಲದಿರುವದೇ ಕಾರಣ. ಹೊಸ ಸುಧಾರಣೆಗಳು ಅದು ಸ್ವಾವಲಂಬಿಯಾದರೆ ಮಾತ್ರ ಸಾಧ್ಯವೇ ಹೊರತು ಪರಾವಲಂಬಿಯಾದರೆ ಅಸಾಧ್ಯವೆಂಬುದು ನಿಶ್ಚಿತ. ಆದಕಾರಣ, ಶಿಕ್ಷಣಕ್ಕೆ ಎಳ್ಳಷ್ಟೂ ಪೆಟ್ಟು ಬೀಳದಂತೆ, ಮಾನಸಿಕ ಶಿಕ್ಷಣದ ಜೊತೆಗೆ ಬಾಲಕನಿಗೆ ಒಂದು ಉದ್ಯೋಗವನ್ನು ಕಲಿಸಿಕೊಟ್ಟು, ಆತನು ಕಲಿಯುತ್ತಿರುವಾಗ ಈ ಏಳು ವರ್ಷದ ಅವಧಿಯಲ್ಲಿ ಸಹಜವಾಗಿ ತಯಾರಿಸುವ ಸರಕಿನ ಲಾಭವನ್ನು ತೆಗೆದುಕೊಂಡು, ಸ್ವಾವಲಂಬಿಯಾಗಬಹುದೆಂದು ವಾರ್ಧಾ ಯೋಜನೆಯು ಹೇಳುತ್ತಿರುವಾಗ ಹೀಗೆ ಶಂಕೆಪಡುವುದು ಯೋಗ್ಯವಲ್ಲ.

ಇನ್ನು ಈ ಯೋಜನೆಯ ಸ್ವಾವಲಂಬತೆಯ ವಿಷಯವಾಗಿ ಸಂಶಯ ಪಡುವವರು ಯೋಜನೆಯನ್ನು ಪೂರ್ಣ ಯೋಚಿಸಿದಂತೆ ಕಾಣುವದಿಲ್ಲ. ಉದ್ದೇಶಗಳಲ್ಲಿ ಆಗಲೇ ಹೇಳಿರುವಂತೆ ಈ ಯೋಜನೆ ವರ್ಷಂಪ್ರತಿ ತಗಲುವ ವೆಚ್ಚಕ್ಕೆ ಮಾತ್ರ ಹೊಣೆ. ಪ್ರಾರಂಭದಲ್ಲಿ ಕಟ್ಟಡದ ಸಲುವಾಗಿ, ಶಿಕ್ಷಣ ಸಾಮುಗ್ರಿಗಳ ಸಲುವಾಗಿ ತಗಲುವ ವೆಚ್ಚವನ್ನು ಈ ಯೋಜನೆ ಹೊರಲು ಶಕ್ಯವಿಲ್ಲ. ಅವನ್ನು ಸರಕಾರವಾಗಲೀ ಇತರ ಶಿಕ್ಷಣಪ್ರೇಮಿಗಳಾಗಲೀ ಪೂರೈಸಿಕೊಡಬೇಕು. ಸ್ವಾವ

ಲಂಬತೆಯು ಪ್ರತಿವರ್ಷದ ವೆಚ್ಚವ ಮಟ್ಟಿಗಾದರೂ ಹೇಗೆ ಸಾಧ್ಯವೆಂಬುದನ್ನು ತೋರಿಸಲು ನೂಲುವ ಮತ್ತು ನೇಯುವ ಉದ್ಯೋಗವನ್ನು ಒಂದು ಮಾದರಿ ಕೈಗಾರಿಕೆಯನ್ನಾಗಿ ತಿಳಿದುಕೊಂಡು ಆ ಮೂಲಕವಾಗುವ ಆಯವ್ಯಯದ ಅಂಕೆಗಳನ್ನು ಕೊಟ್ಟು ನಿದರ್ಶಿಸಿರುವರು. ಆ ಅಂಕೆಗಳನ್ನು ಈ ಪುಸ್ತಕದ ಪರಿಶಿಷ್ಟದಲ್ಲಿ ಕೊಟ್ಟಿದೆ. ಈ ಮಾದರಿಯ ಅಂಕೆಗಳನ್ನು ಕೊಡುವಾಗ ಪ್ರತಿ ೩೦ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕನೆಂದು ಮತ್ತು ಶಿಕ್ಷಕನ ಸಂಬಳ ತಿಂಗಳಿಗೆ ೨೫ ರೂಪಾಯಿಗಳೆಂದು ನಿರ್ಧರಿಸಲಾಗಿದೆ. ಮತ್ತು 'ಆಯ'ದ ವಿಷಯದಲ್ಲಿ ಈಗ ಅಖಿಲ ಭಾರತ ಚರಕಾ ಸಂಘದ ಮಹಾರಾಷ್ಟ್ರ ಶಾಖೆಯಲ್ಲಿ ಪ್ರಚಲಿತ ವಿರುವ ದರಗಳನ್ನೇ ಮುಂದಿಟ್ಟುಕೊಂಡು ಲೆಕ್ಕ ಮಾಡಲಾಗಿದೆ. ಕೆಲವರು, ಶಿಕ್ಷಕನಿಗೆ ಕೊಡುವ ೨೫ ರೂಪಾಯಿ ಮಾಸಿಕ ವೇತನ ತೀರ ಸ್ವಲ್ಪವೆನ್ನ ಬಹುದು. ಆದರೆ ಆ ಆಕ್ಷೇಪಣೆಯನ್ನು ತರುವವರು ತಮ್ಮ ಕಣ್ಣು ಮುಂದೆ ಪಾಶ್ಚಿಮಾತ್ಯರ ಜೀವನಮಟ್ಟ (Western standard of life) ವನ್ನಿಟ್ಟು ಕೊಂಡಿರುವರೇ ಹೊರತು ಅವರಿಗೆ ಭಾರತದ, ಭಾರತೀಯರ ವಸ್ತುಸ್ಥಿತಿಯ ಅರಿವಿಲ್ಲ. ನಮ್ಮ ದೇಶದ ಜೀವನಮಟ್ಟದ ಮಾನದಿಂದ ನೋಡಿದರೆ ಈ ಸಂಬಳ ಸಾಧಾರಣ, ಸರಳ ಜೀವನಕ್ಕೆ ಸಾಕೆಂಬುದು ಅನುಭವಕ್ಕೆ ಬರುವುದು. ಅದೂ ಅಲ್ಲದೆ ಈ ೨೫ ರೂಪಾಯಿಗಳು ಕನಿಷ್ಟ ಪ್ರಮಾಣವೇ (Minimum pay) ಹೊರತು ಸಾಧ್ಯವಿದ್ದಲ್ಲಿ ಇದಕ್ಕಿಂತ ಹೆಚ್ಚು ಸಂಬಳ ಕೊಡಬಾರದೆಂದು ಅರ್ಥವಲ್ಲ. ಈಗ ಉದಾಹರಣೆಗೋಸುಗ ತೆಗೆದುಕೊಂಡಿರುವ ಅ. ಭಾ. ಚ. ಸಂ. ಮಹಾರಾಷ್ಟ್ರ ಶಾಖೆಯು ನೂಲುವ, ನೇಯುವ ಕೂಲಿಯ ಪ್ರಮಾಣವು ಉಳಿದ ಅನೇಕ ಪ್ರಾಂತಗಳಲ್ಲಿನ ಕೂಲಿಗಿಂತ ಕಡಿಮೆಯಿರುವದು. ಅಖಿಲ ಭಾರತ ಚರಖಾ ಸಂಘದವರು ತರಬೇಕೆಂದಿರುವ ಕೂಲಿಯ ಯೋಜನೆಯ ಹೊಸ ಪ್ರಮಾಣವು ಈಗಿನಕಿಂತ ಹೆಚ್ಚಿದ್ದು ಅದು ಕಾರ್ಯರೂಪದಲ್ಲಿ ಬಂದರೆ ಅದರಂತೆ ಯೋಜನೆಯ ಉತ್ಪನ್ನವಾದರೂ ಹೆಚ್ಚಾಗಿ ಶಿಕ್ಷಕರಿಗೆ ೨೫ ರೂಪಾಯಿ ಗಳಿಗಿಂತ ಹೆಚ್ಚು ಸಂಬಳ ಕೊಡಲು ಸಾಧ್ಯವಾಗುವುದು. ಕೈಗಾರಿಕೆಯನ್ನು ಕಲಿಸುವಾಗ ಹಾಗು ಮುಂದೆ ಆಗಬಹುದಾದ ನಾಶ(Wastage)ಕ್ಕೆ ನೂರಕ್ಕೆ ೨೦ರಷ್ಟು ಅವಕಾಶ ಕೊಟ್ಟು, ದರ ಹಾಕಲಾಗಿದೆ; ಹಾಗು ಏಳು ವರ್ಷಗಳಲ್ಲಿ ಕೆಲಸ ಮಾಡದಿರುವ ದಿನಗಳು, ಬಿಡುವಿನ ದಿನಗಳು, ಮುಂತಾ

ದವುಗಳಿಗಾದರೂ ಪೂರ್ಣ ಗಮನವಿಟ್ಟು ಈ ಅಂಕೆಗಳ ಟಿಪ್ಪಣಿಯನ್ನು ತಯಾರಿಸಲಾಗಿದೆ. ಏಳು ವರ್ಷಗಳ ಅವಧಿಯಲ್ಲಿ ಮೊದಲಿನ ಕೆಲವು ವರ್ಷಗಳ ವರೆಗೆ, ವಿದ್ಯಾರ್ಥಿಯು ಇನ್ನೂ ಉದ್ಯೋಗವನ್ನು ಕಲಿಯುತ್ತಿರುವುದರಿಂದ ಆಗ ಆತನಿಂದಾಗುವ ಹುಟ್ಟುವಳಿಗಿಂತ ಹೆಚ್ಚು ವೆಚ್ಚ ಅಥವಾ ವೆಚ್ಚಕ್ಕಿಂತ ತೀರ ಕಡಿಮೆ ಉತ್ಪತ್ತಿಯಾಗಬಹುದು. ಇದು ಸಹಜವಾದದ್ದು. ಆದರೆ ಈ ನ್ಯೂನತೆಯು ಕೊನೆಯ ವರ್ಷಗಳಲ್ಲಿ ವಿದ್ಯಾರ್ಥಿಯು ತನ್ನ ಕೈಗಾರಿಕೆಯಲ್ಲಿ ಪೂರ್ಣ ನುರಿತು ಅದಕ್ಕೆ ತಕ್ಕಂತೆ ತನ್ನ ಸಂಪಾದನಾಶಕ್ತಿಯನ್ನಾದರೂ ಬೆಳೆಸಿದಾಗ ಸರಿಹೋಗುವದು. ಕೊಟ್ಟಿರುವ ಅಂಕಗಳು ಯಾವುದೇ ಒಂದು ವರ್ಷಕ್ಕೆ ಸಂಬಂಧಿಸದೆ ಏಳೂ ವರ್ಷಗಳ ಸರಾಸರಿ ಅಂಕೆಗಳಾ(Average figures)ಗಿರುವವರಿಂದ ಈ ಸಂಬಂಧವಾದ ಆಕ್ಷೇಪಕ್ಕೆ ಎಡೆಯಿಲ್ಲ.

ಹೀಗೆ ಸಿದ್ಧವಾದ ಸಾಮಾನುಗಳನ್ನು ಕೊಳ್ಳುವವರಾರು ? ಕೊಳ್ಳುವವರಿಲ್ಲದೆ ಸಾಮಾನು ಕೊಳೆಯುವದಿಲ್ಲವೆ ? ಶಿಕ್ಷಕರು ಶಿಕ್ಷಣದ ಕೆಲಸವನ್ನು ಬಿಟ್ಟು ಈ ಸಾಮಾನುಗಳನ್ನು ಮಾರಾಟ ಮಾಡಬೇಕೆ ? ಎಂಬ ಹಲವು ಪ್ರಶ್ನೆಗಳು ಇಲ್ಲಿ ತಲೆದೋರುವವು. ಶಿಕ್ಷಕನು ಸಾಮಾನು ಮಾರಾಟ ಮಾಡುವ ವ್ಯಾಪಾರಸ್ಥನಾಗಲು ಎಂದಿಗೂ ಸಾಧ್ಯವಿಲ್ಲ. ಅವನು ಹಾಗೆ ಆಗಲೂ ಬಾರದು ಶಿಕ್ಷಕನ ಪೂರ್ಣ ಗಮನ ಕೈಗಾರಿಕೆಯನ್ನು ಚೆನ್ನಾಗಿ ಕಲಿಸುವದರಲ್ಲಿರಬೇಕೇ ಹೊರತು ಆ ಸಾಮಾನಿನ ಮಾರಾಟದಲ್ಲಿಲ್ಲ. ಈ ವಿದ್ಯಾಲಯಗಳಲ್ಲಿ ತಯಾರಾದ ಸಾಮಾನುಗಳ ಮಾರಾಟದ ಪೂರ್ಣ ಹೊಣೆಯನ್ನು ಸರಕಾರವು ಹೊರಲು ಸಿದ್ಧವಿರಬೇಕು. ಸಿದ್ಧವಸ್ತುಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ತನ್ನ ವಿವಿಧ ಖಾತೆಗಳಿಗೆ ಬೇಕಾದ ಸಾಮಾನುಗಳ ಅವಶ್ಯಕತೆಯನ್ನು ಇದರಿಂದ ಪೂರೈಸಿಕೊಳ್ಳಬೇಕು. ಸಾಮಾನು ಇನ್ನೂ ಉಳಿದರೆ ಅದನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಮಾರಲಿಡಬೇಕು.

“ ಹೀಗೆ ವಿದ್ಯಾರ್ಥಿಗಳಿಗೆ ಕೈಗಾರಿಕೆಯನ್ನು ಕಲಿಸಿ ಸಾಮಾನು ತಯಾರಿಸತೊಡಗಿದರೆ ಜನರ ಬೇಡಿಕೆಗಿಂತ ಹೆಚ್ಚು ಸಾಮಾನು ತಯಾರಾಗಿ ಪೇಟೆಯಲ್ಲಿನ ವ್ಯಾಪಾರವು ಬಿದ್ದು ಹೋಗುವು” ದೆಂಬ ಮತವನ್ನು ಹಲವರು ಪ್ರಕಟಿಸಿರುವರು. ವಸ್ತುಸ್ಥಿತಿ ಇದನ್ನು ಅನುಮೋದಿಸುವದಿಲ್ಲ. ಈಗ ಮಾದರಿಗಾಗಿ ತೆಗೆದುಕೊಂಡಿರುವ ನೂಲುವ ಮತ್ತು ನೇಯಿಗೆಯ ಉದ್ಯೋಗದ ಸೃಷ್ಟಿ

ಯಿಂದಲೇ ಈ ಸಂದೇಹದ ಪೂರ್ವಾಪರಗಳನ್ನು ಚರ್ಚಿಸೋಣ. ಸದ್ಯಕ್ಕೆ ನಮ್ಮ ದೇಶಕ್ಕೆ ಬಟ್ಟೆಯ ಪೂರೈಕೆಯಾಗುವದು ವಿದೇಶೀ ಗಿರಣಿಗಳು, ದೇಶೀ ಗಿರಣಿಗಳು ಮತ್ತು ಅಖಿಲ ಭಾರತ ಚರಖಾಸಂಘ ಈ ಮೂರು ಮಾರ್ಗಗಳಿಂದ. ಆದರೂ ದೇಶದ ಬಹು ಜನರು ಸಾಕಷ್ಟು ಬಟ್ಟೆ ಇಲ್ಲದೆ ಇರುವರು. ಪ್ರಸ್ತುತದಲ್ಲಿ ಪ್ರತಿಯೊಬ್ಬ ಹಿಂದೀಯನಿಗೆ ಸಿಗುವ ಸರಾಸರಿ ಪ್ರಮಾಣ ೧೪ ಗಜಗಳಷ್ಟು ಬಟ್ಟೆ. ಉಡುವ ತೊಡುವ ಹಾಸಿ-ಹೊದೆಯುವ ಮುಂತಾದ ಎಲ್ಲ ವಿಧದ ವಸ್ತ್ರವೂ ಇದರಲ್ಲಿ ಸೇರಿತು. ಎಂದರೆ ಹೆಂಗಸರಿಗೆ ಬಹಳವೆಂದರೆ ೨ ಸೀರೆ, ಗಂಡಸರಿಗೆ ಒಂದು ಜೊತೆ ಪಂಚೆ, ಎರಡು ಟೊಪ್ಪಿಗೆ, ಎರಡು ಅಂಗಿಗಳಿಗೆ ಸಾಲುವಷ್ಟು ಮಾತ್ರ. ಆದೇ, ಇಂಗ್ಲಂಡಿನಲ್ಲಿ ದೊರೆಯುವ ಪ್ರಮಾಣ ೬೦ ಗಜಗಳಷ್ಟು. ಇಂಗ್ಲಂಡು ಶೀತ ದೇಶವಿದ್ದು ಅದಕ್ಕೆ ಹೆಚ್ಚು ಬಟ್ಟೆಯ ಅವಶ್ಯಕತೆ ಇದೆ ಯೆನ್ನುವುದಾದರೆ ನಮ್ಮಲ್ಲಿ ಪ್ರತಿಯೊಬ್ಬ ಹಿಂದೀಯನಿಗೆ ಸರಾಸರಿ ೪೦ ಗಜದಷ್ಟಾದರೂ ದೊರೆಯಬೇಕು. ಎಂದರೆ ಈಗಿನ ಮುಮ್ಮಡಿ ಬಟ್ಟೆಯ ಅವಶ್ಯಕತೆಯಿದೆಯೆಂಬುದು ಸ್ಪಷ್ಟವಾದಂತಾಯಿತು ಇಲ್ಲಿ ಗಮನದಲ್ಲಿಡಬೇಕಾದ ಇನ್ನೊಂದು ಸಂಗತಿಯೆಂದರೆ, ಭಾರತೀಯನ ಈಗಿನ ಜೀವನಮಟ್ಟ ತೀರ ಕಡಿಮೆಯಿದ್ದರೂ ಶಿಕ್ಷಣ ಪ್ರಸಾರದಿಂದ ಅದು ಬೆಳೆಯುವದು, ಉಡಿಗೆ-ತೊಡಿಗೆ ಆಹಾರ, ಸ್ವಚ್ಛ ಹವೆ ಮತ್ತು ಜೀವನದ ಕಡೆಗೆ ಹೆಚ್ಚು ಗಮನ ಕೊಡಲಾರಂಭಿಸುವನು. ಅದರಂತೆ ಅವನ ಅವಶ್ಯಕತೆಯು ಪ್ರಮಾಣವಾದರೂ ಬೆಳೆಯುವದು. ಹೀಗೆ ಬೆಳೆಯುವ ಅವಶ್ಯಕತೆಯನ್ನು ವಾರ್ಧಾಯೋಜನೆಯ ಶಾಲೆಗಳು ದೂರಮಾಡಲು ಯತ್ನಿಸಿದರೆ ಅದರಲ್ಲಿ ಬಾಧಕವೇನೂ ಇಲ್ಲ. ಮೇಲಿನ ಲೆಕ್ಕದಂತೆ ಬೇಕಾಗುವ ಬಟ್ಟೆಯನ್ನು ಕೈಮಗ್ಗದಿಂದ ತಯಾರಿಸತೊಡಗಿದರೆ, ಅದರಿಂದ ದೇಶಕ್ಕೆ ಬಟ್ಟೆ ಒದಗುವದಲ್ಲದೆ ದೇಶದ ಕೈಗಾರಿಕೆಗಳಾದರೂ ಬೆಳೆಯುವವು. ಹೀಗೆ ನರಕನ್ನು ಸಿದ್ಧಪಡಿಸುವುದರಿಂದ ದೇಶ ವಿದೇಶದ ಗಿರಣಿಗಳು ಮುಚ್ಚುವ ಸಂದರ್ಭ ಬಂದರೆ ಒಳಿತೇ ಆಯಿತು ಕೈಯಿಂದ ಉತ್ತಮವಾಗಿಯೂ ಸುಲಭವಾಗಿಯೂ ಮಾಡಬಹುದಾದ ವಸ್ತುವನ್ನು ಗಿರಣಿಯಲ್ಲಿ ಹುಟ್ಟಿಸುವದರಲ್ಲಿ ಅರ್ಥವಿಲ್ಲ ಇದೇ ದೃಷ್ಟಿಯಿಂದ ದೇಶದ ಸಣ್ಣಪುಟ್ಟ ಕೈಗಾರಿಕೆಗಳನ್ನೂ ಗ್ರಾಮೋದ್ಯೋಗಗಳನ್ನೂ ಅನುಸರಿಸಿ ಹೊಸ ರೀತಿಯಿಂದ ನಮ್ಮ ಸಂಸ್ಕೃತಿಗೆ ಯೋಗ್ಯವಾದ ಸಮಾಜರಚನೆಯನ್ನು ಮಾಡಬೇಕೆಂದು ಈ

ಯೋಜನೆಯ ಬಯಕೆ. ಆದರೆ ಆ ಕಾಲ ಇನ್ನೂ ದೂರದಲ್ಲಿದೆ ೧೯೨೦ರಲ್ಲಿ ದೇಶದಲ್ಲಿ ಪರದೇಶದ ವಸ್ತ್ರ ಬಹಿಷ್ಕಾರ ಚಳವಳವು ತೀವ್ರವಾಗಿ ಎದ್ದಿದ್ದಾಗ ಸರಕಾರವು ಒಂದು ಪ್ರಕಟನೆಯನ್ನು ಹೊರಡಿಸಿತು. ಅದರಲ್ಲಿ ಒಬ್ಬ ಮನುಷ್ಯನಿಗೆ ಸಹಜವಾಗಿ ಬೇಕಾಗುವ ಬಟ್ಟೆಯ ತೀರ ಕನಿಷ್ಟ ಪ್ರಮಾಣ, ಆ ಪ್ರಮಾಣದಲ್ಲಿ ಇಡೀ ದೇಶಕ್ಕೆ ಬೇಕಾಗುವ ಬಟ್ಟೆಯ ಪರಿಮಾಣ, ವಿದೇಶದಿಂದ ಬರುತ್ತಿರುವ ಬಟ್ಟೆಯ ಹಾಗು ದೇಶೀ ಗಿರಣಿ ಮತ್ತು ಕೈಮಗ್ಗಗಳ ಬಟ್ಟೆಯ ಪರಿಮಾಣದ ಸೂಚಕ ಸಂಖ್ಯೆಗಳನ್ನು ಕೊಟ್ಟು ಹಿಂದೀಯರು ವಿದೇಶೀ ವಸ್ತ್ರ ಬಹಿಷ್ಕಾರ ಹಾಕಿದರೆ ದೇಶದಲ್ಲಿ ಅಗತ್ಯವಿದ್ದಷ್ಟು ತಯಾರಾಗುವದು ಅಶಕ್ಯವಾಗಿ ಬೆತ್ತಲೆ ಇರಬೇಕಾಗುವದೆಂದು ಪ್ರಸಿದ್ಧಿಸಿರುವರು. ಆ ಸಮಯದಲ್ಲಿ ಅನೇಕ ಅರ್ಥಶಾಸ್ತ್ರ ಪ್ರವೀಣರ ಅಭಿಪ್ರಾಯವೂ ಹೀಗೆಯೇ ಇತ್ತು. ಇದು ನಡೆದ ಹತ್ತಾರು ವರ್ಷಗಳ ಮೇಲೆ ಈಗ ಕಂಡುಬರುವದಾದರೂ ಏನು? ಜನರು ಬೆತ್ತಲೆ ತಿರುಗಾಡುತ್ತಲೂ ಇಲ್ಲ, ಪೂರ್ಣರೀತಿಯ ಬಹಿಷ್ಕಾರ ಸಾಗಲೂ ಇಲ್ಲ. ಈ ಉದಾಹರಣೆಯನ್ನು ಕೊಟ್ಟ ಉದ್ದೇಶವಿಷ್ಟೇ—ಯಾವುದಾದರೂ ಧ್ಯೇಯವು ಪೂರ್ಣರೀತಿಯಿಂದ ಕೃತಿಯಲ್ಲಿ ಬರಬೇಕಾದರೆ ಬಹುಕಾಲ ಬೇಕು. ಕಾರ್ಯದಲ್ಲಿ ಅನೇಕ ಅಡತಡೆಗಳಾಗುವವೆಂದು ಧ್ಯೇಯದ ಬಗೆಗೆ ಸಂಶಯಪಡುವದು ಸಾಧುವಲ್ಲ. ಕಾರ್ಯಕ್ಕೆ ಅದರ ಧ್ಯೇಯ ಮುಖ್ಯ. ಇಡೀ ಕಾರ್ಯವು ಧ್ಯೇಯದ ಮೇಲೆಯೇ ರೂಪುಗೊಂಡು ಕಾರ್ಯರಂಗಕ್ಕೆ ಬರುವುದು. ಒಂದು ಧ್ಯೇಯವನ್ನಿಟ್ಟುಕೊಂಡ ಕೂಡಲೇ ಮುಂದಿನ ಕಾರ್ಯಗಳೆಲ್ಲವೂ ಸುಸೂತ್ರವಾಗಿ ನಡೆಯುವವೆಂದು ಯಾರೂ ನಂಬಕೂಡದು. ವರ್ಧಾಯೋಜನೆಯ ವಿದ್ಯಾಲಯಗಳಲ್ಲಿ ತಯಾರಾಗುವ ಸಾಮಾನು ಇಡಿಯ ದೇಶದ ಪೇಟೆಗಳನ್ನು ತುಂಬಿ ವ್ಯಾಪಾರವನ್ನು ಮುಗ್ಗಿಸುವ ಕಾಲ ಬಹುದೂರವಿದೆ. ಅದಕ್ಕೆ ಈಗಿನಿಂದಲೇ ಹೆದರಿ ಕಾರ್ಯಪ್ರಾರಂಭಿಸದಿರುವವನು ಹುಚ್ಚುತನ. ನಮ್ಮ ಧ್ಯೇಯವು ಸರಿ ಇದ್ದು ಯೋಗ್ಯ ಮಾರ್ಗದಲ್ಲಿ ಕಾರ್ಯ ಸಾಗಿಸಿದರೆ, ಬರುವ ತೊಂದರೆಗಳನ್ನು ನಿವಾರಿಸಲು ಸೂಕ್ತವಾದ ಮಾರ್ಗವು ತೋರುವದಲ್ಲದೆ ಅದರಂತೆ ಕಾರ್ಯವಾದರೂ ಆಗುವದರಲ್ಲಿ ಸಂದೇಹವಿಲ್ಲ

ವಾರ್ಧಾಯೋಜನೆಯ ಬಗೆಗೆ ಎರಡನೆಯ ದೊಡ್ಡ ಆಕ್ಷೇಪ ಈ ಶಿಕ್ಷಣವನ್ನು ಕಲಿಸುವ ಪದ್ಧತಿಯ ವಿಷಯವಾಗಿ ಈಗಿನ ಯೋಜನೆಯಲ್ಲಿ ಕಲಿಸಲ್ಪ

ಡುವ ಮೂಲ ಉದ್ಯೋಗಕ್ಕೆ ಪ್ರತಿನಿತ್ಯ ೩ ಗಂಟೆ ೨೦ ನಿಮಿಷಗಳ ಅವಧಿ ಮೀಸಲಾಗಿದೆ. ಇದರಿಂದ ಬೌದ್ಧಿಕ ಶಿಕ್ಷಣಕ್ಕೆ ಸಾಕಷ್ಟು ವೇಳೆ ದೊರೆಯುವದಿಲ್ಲವೆಂದೂ ಬಾಲಕರು ಬಹು ಬೇಗ ಆಯಾಸ ಹೊಂದುವರೆಂದೂ ಇವರ ಆಕ್ಷೇಪಣೆ. ಕೈಗಾರಿಕೆಗೆ ದಿನವೂ ೩ ಗಂಟೆ ೨೦ ನಿಮಿಷಗಳಿಷ್ಟಿದ್ದರೂ ಕೈ-ಗಾರಿಕೆಯು ಈ ಶಿಕ್ಷಣ ಒಂದೇ ಸಮನೆ ಅಷ್ಟು ವೇಳೆ ನಡೆಯುವದಿಲ್ಲ. ಸ್ವಲ್ಪ ಕೆಲಸ, ನಂತರ ಅದರ ಬಗ್ಗೆ ಕೆಲವು ಸಂಗತಿಗಳ ಸ್ಪಷ್ಟೀಕರಣ, ಆ ಮೇಲೆ ಇನ್ನಾವುದಾದರೂ ಪಾಠ ಅಥವಾ ವಿಶ್ರಾಂತಿ – ಹೀಗೆ ಮೂಲ ಕೈಗಾರಿಕೆ, ಆಟ, ಬೌದ್ಧಿಕ ಶಿಕ್ಷಣ, ಇವುಗಳ ಸಮಾವೇಶ ಮಾಡಿ ಬಾಲಕನ ಮನಸ್ಸನ್ನು ಸದಾ ಉತ್ಸಾಹದಲ್ಲಿಟ್ಟಿರಲು ಈ ಯೋಜನೆ ಯತ್ನಿಸುವದು. ಬಾಲಕನು ಶಕ್ತಿ ಮೀರಿ ದುಡಿದು ಆಯಾಸ ಹೊಂದಿ ಬೌದ್ಧಿಕ ಶಿಕ್ಷಣಕ್ಕೆ ಅಯೋಗ್ಯನಾಗುವನೆಂದು ಹೆದರುವ ಕಾರಣವಿಲ್ಲ. ಅದರಂತೆ ಈ ಯೋಜನೆಯಲ್ಲಿ ಬೌದ್ಧಿಕ ಶಿಕ್ಷಣಕ್ಕೆ ಕಡಿಮೆ ಮಹತ್ವ ಕೊಡಲಾಗುವುದೆಂದು ತಿಳಿದುಕೊಳ್ಳಲು ಎಳ್ಳಷ್ಟು ಆಸ್ಪದವಿಲ್ಲ. ಇಂಗ್ಲಿಷ್ ಭಾಷೆಯೊಂದನ್ನುಳಿದು ಉಳಿದೆಲ್ಲ ವಿಷಯಗಳಲ್ಲಿ ಈ ಯೋಜನೆ ನಮ್ಮಗ ಮೆಟ್ರಿಕ್ ಪರೀಕ್ಷೆಗೆ ಸಮವೆನಿಸುವುದೆಂದು ಮೊದಲೇ ಹೇಳಿದೆ. ಇದಲ್ಲದೆ ಈಗ ಕಲಿಸದಿರುವ, ಆದರೆ ಬಹು ಮುಖ್ಯವಾದ ಪೌರನೀತಿ [Civics] ಯೇ ಮೊದಲಾದ ವಿಷಯಗಳೂ ಕಲಿಸಲ್ಪಡುವವು. ಇವನ್ನೆಲ್ಲ ಮಾತೃಭಾಷೆಯ ಮೂಲಕ ಕಲಿಸುವುದರಿಂದ ಬಾಲಕರು ಸುಲಭವಾಗಿಯೂ ಕಡಿಮೆ ಅವಧಿಯಲ್ಲಿಯೂ ಚೆನ್ನಾಗಿ ಮನನಮಾಡಿಕೊಳ್ಳಬಲ್ಲರೆಂದು ಹೇಳಬೇಕಾಗಿಲ್ಲ.

ಮೂರನೆಯದಾಗಿ ಈ ವರ್ಧಾ ಯೋಜನೆಯು ಸತ್ಯ, ಅಹಿಂಸಾ ಪ್ರಚಾರದ ಹೆಗ್ಗುರಿಯ ಬಗೆಗೆ ಅನೇಕರು ಟೀಕಿಸಿರುವರು. ಪ್ರಪಂಚದಲ್ಲಿ ಎಲ್ಲೆಡೆಯಲ್ಲಿಯೂ ಯುದ್ಧದ ವಾತಾವರಣವು ಮಿತಿಮೀರಿ ಹಬ್ಬಿದ್ದು ಎಲ್ಲ ರಾಷ್ಟ್ರಗಳೂ ಯುದ್ಧದ ತಯಾರಿಯನ್ನು ಅತಿ ವೇಗದಿಂದ ಮಾಡುತ್ತಿರುವವು. ತಮ್ಮ ದೇಶದ ಪ್ರಜೆಗಳಲ್ಲಿ–ಯುವಕರಲ್ಲಿ– ಶಿಕ್ಷಣದ ಮೂಲಕ ಯುದ್ಧಪ್ರವೃತ್ತಿಯನ್ನು ಬೆಳಿಸಿ ಸಮರ ಸನ್ನದ್ಧರಾಗುತ್ತಿರುವವು. ಯುದ್ಧತಯಾರಿಕೆಯ ಈ ಸ್ಪರ್ಧೆಯಲ್ಲಿ ಹಿಂದುಳಿದ ನಿಶ್ಶಕ್ತ ದೇಶಗಳು ಉಳಿದ ಪ್ರಬಲ ರಾಷ್ಟ್ರಗಳಿಗೆ ತುತ್ತಾಗುತ್ತಿರುವವು ಇಂತಹ ವೇಳೆಯಲ್ಲಿ ಅಹಿಂಸಾತತ್ವದ ಪ್ರಚಾರ ಯೋಜನೆ

ಯನ್ನು ಕೈಕೊಳ್ಳುವದು ಹುಚ್ಚುತನ, ಭ್ರಾಂತಿ, ಎಂದು ಇವರ ನಿಶ್ಚಿತ ಮತ. ಅಹಿಂಸಾತತ್ವದ ಹೆಗ್ಗುರಿಯು ಭಾವನಾವಶವಾದ ಒಂದು ಗುರಿಯೇ ಹೊರತು ವ್ಯಾವಹಾರಿಕ ವಿಷಯವಲ್ಲವೆಂದು ಇವರ ಅಭಿಪ್ರಾಯ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸದ್ಯಕ್ಕೆ ಹಿಂಸಾಪ್ರವೃತ್ತಿಯು ಬಹಳ ಹೆಚ್ಚಿರುವದು ನಿಜವಾದರೂ ಅದು ತಪ್ಪೆಂದು ಇವರಾದರೂ ಒಪ್ಪುವರು. ಅಲ್ಲಿನ ಅನೇಕ ಮುಖಂಡರು, ಜ್ಞಾನಿಗಳು ತಮ್ಮ ರಾಷ್ಟ್ರಗಳು ಯುದ್ಧತೃಷ್ಣೆಯಿಂದ ಅಧೋಗತಿಗಿಳಿದು ವಿಶ್ವಶಾಂತಿ ಸೌಹಾರ್ದಗಳಿಗೆ ಭಂಗತರುತ್ತಿರುವವೆಂದು ಸ್ಪಷ್ಟವಾಗಿ ಹೇಳಿರುವರು. ಎಂದಮೇಲೆ ಪ್ರಪಂಚಕ್ಕೆ ಒದಗಿರುವ ಈ ಘೋರ ಕುತ್ತನ್ನು ನಿವಾರಿಸಲು ಯಾವುದಾದರೂ ರಾಷ್ಟ್ರವು ಸಿದ್ಧವಾಗಿ ಮುಂದೆಬರಲೇ ಬೇಕು. ಹಿಂಸೆಯಿಂದ ಹಿಂಸೆಯು ಎಂದೂ ಕೊನೆಗಾಣುವುದಿಲ್ಲ. ಹಿಂಸಾತ್ಮಕ ಪ್ರವೃತ್ತಿಯ ಸಮೂಲ ನಾಶಕ್ಕೆ ಅಹಿಂಸೆಯೇ ನಿಜವಾದ ಸಾಧನ. ಈ ಪ್ರಯೋಗವನ್ನು ಯಶಸ್ವಿಯನ್ನಾಗಿ ಮಾಡಲು ಹಿಂದುಸ್ತಾನಕ್ಕೆ ಜಗತ್ತಿನಲ್ಲಿ ಒಂದು ವಿಶಿಷ್ಟ ಸ್ಥಾನವಿರುವದು. ಬುದ್ಧನು ಜನ್ಮತಾಳಿ ಅಹಿಂಸಾತತ್ವವನ್ನು ಮೊದಲು ಪ್ರತಿಪಾದಿಸಿದ್ದು ನಮ್ಮ ದೇಶದಲ್ಲಿಯೇ. ಸದ್ಯದ ಗಾಂಧೀಯುಗದಲ್ಲಿ ಕೂಡ ದೇಶದ ರಾಜಕಾರಣವೂ ಸ್ವಾತಂತ್ರ್ಯ ಹೋರಾಟವೂ ಅಹಿಂಸಾತತ್ವದ ಮೇಲೆಯೇ ನಡೆಯುತ್ತಿರುವದು. ದೇಶದಲ್ಲಿ ಹೋರಾಟವು ಸ್ವಲ್ಪ ಪ್ರಮಾಣದಲ್ಲಿ ಮಾತ್ರ ನಡೆಯಿತು, ಮತ್ತು ದೇಶದ ತೀರ ಸ್ವಲ್ಪ ಜನರು ಮಾತ್ರ ಇದರಲ್ಲಿ ಹೆಚ್ಚು ಆಸಕ್ತಿಗೊಂಡಿದ್ದರು ಆದರೂ ಅದರ ಯಶಸ್ಸು ಹಿಂದುಸ್ತಾನಕ್ಕೂ ಜಗತ್ತಿಗೂ ಅಹಿಂಸಾತತ್ವದ ಮಹತ್ವವನ್ನು ತೋರಿಸಿಕೊಟ್ಟಿದೆ. ಹೀಗಿರುವಾಗ ಅಹಿಂಸಾತತ್ವದಲ್ಲಿ ಪೂರ್ಣ ವಿಶ್ವಾಸವುಳ್ಳ ಹಿಂದೂಸ್ತಾನದ ಇಡೀ ಜನತೆಯೇ ವಿಶ್ವಶಾಂತಿಗಾಗಿ ಪ್ರಯತ್ನಿಸಿದರೆ ಅದರ ವರ್ಚಸ್ಸು ಇಡಿಯ ವಿಶ್ವದಮೇಲೆ ಬಹು ಮಟ್ಟಿಗೆ ಬೀಳಬಹುದೆಂದು ನೆನಿಸುವುದು ತಪ್ಪಾಗಲಾರದು. ಹೇಗಿದ್ದರೂ, ಧ್ಯೇಯವು ಉದಾತ್ತವಾದದ್ದು, ಹಾಗು ಅದರ ಸಫಲತೆಯ ಕಡೆಗೆ ದೇಶದ ಸರ್ವಸ್ವವನ್ನು ಅರ್ಪಿಸಲು ತಕ್ಕುದಿರುತ್ತದೆ.

ಈ ಯೋಜನೆಯಲ್ಲಿ ವಿಶಿಷ್ಠ ತರದ ಬೌದ್ಧಿಕ ಶಿಕ್ಷಣ ಬೇಕೆನ್ನುವವರಿಗೆ ಅವಕಾಶವಿಲ್ಲವೆಂದು ಕೆಲವರು ತಮ್ಮ ಟೀಕೆಗಳಲ್ಲಿ ಹೇಳಿರುವರು. ಇದು ನಿಜ. ಆದರೆ ಯಾವುದೊಂದು ಸ್ಥಳ— ಪ್ರಾಂತಕ್ಕೆ ಸಂಬಂಧಿಸಿದ ಇಡಿಯ ಹಿಂದೂ

ಸ್ಥಾನಕ್ಕೆ ಪ್ರಯೋಜನವಾಗಬೇಕೆನ್ನುವ ಈ ಯೋಜನೆಯಲ್ಲಿ ಸಾಮಾನ್ಯ ಕಾರ್ಯಕ್ರಮಕ್ಕೆ ಎಡೆಯುಂಟೇ ಹೊರತು ಯಾವುದೊಂದು ವಿಶಿಷ್ಟ ಶಿಕ್ಷಣಕ್ಕೆ ಆಸ್ಪದವಿರಬೇಕೆಂದು ಆಶಿಸುವುದು ಅಷ್ಟೊಂದು ಸೂಕ್ತವಾಗಲಾರದು. ಪ್ರತಿಯೊಂದು ಸ್ಥಳದಲ್ಲಿ ಹಾಗು ಪ್ರಾಂತದಲ್ಲಿ ಒಂದೊಂದು ವೈಶಿಷ್ಟ್ಯವಿದ್ದೇ ಇದೆ. ಅವೆಲ್ಲವನ್ನೂ ಈ ಯೋಜನೆಯಲ್ಲಿ ಸೇರಿಸಲೆತ್ನಿಸಿದರೆ ಏನೂ ಕೆಲಸವಾಗದು. ಇಡಿಯ ದೇಶಕ್ಕೆ ಸಂಬಂಧಿಸಿದ ಇಂಥ ಯೋಜನೆಗಳು ಸಾಮಾನ್ಯವಾದವುಗಳೂ ಆದಷ್ಟು ಸರಳವೂ ಸಾರ್ವತ್ರಿಕವೂ ಇರಬೇಕು. ಆದುದರಿಂದ ವಿಶಿಷ್ಟ ರೀತಿಯ ಶಿಕ್ಷಣ ಬೇಕಾದವರು ಸದ್ಯಕ್ಕೆ ಅದರ ಬೇರೆ ವ್ಯವಸ್ಥೆ ಮಾಡಿಕೊಳ್ಳಬೇಕಾಗುವದು. ಈ ಯೋಜನೆ ಯಾವುದೊಂದು ಜಾತಿ ಸಂಗಡ ಅಥವಾ ಸ್ಥಳಕ್ಕೆ ಮೀಸಲಾಗಿರದೆ ಇಡೀ ದೇಶಕ್ಕೆ ಸಂಬಂಧಿಸಿದೆ. ಈ ಯೋಜನೆಯಲ್ಲಿ ಎಲ್ಲಾ ಜಾತಿ ಸಂಘಗಳೂ ಒಟ್ಟುಗೂಡಿಸಲ್ಪಟ್ಟು ಅವರಲ್ಲಿ ಚಿಕ್ಕಂದಿನಿಂದಲೂ ಬಂಧುತ್ವವು ಉತ್ಪನ್ನವಾಗಿ ತಾವು ಒಂದೇಯರೆಂಬ ಭಾವನೆಯನ್ನು ತರುವ ಯತ್ನವಿದೆ. ಈ ಯೋಜನೆ ಯಾವುದೊಂದು ವಿಶಿಷ್ಟ ಧರ್ಮವನ್ನು ಕಲಿಸದಿದ್ದರೂ ಸಕಲ ಧರ್ಮಗಳ ಅಡಿಗಲ್ಲಾದ ಸತ್ಯ, ವಿಶ್ವಪ್ರೇಮ ಮೊದಲಾದ ಮುಖ್ಯ ತತ್ವಗಳನ್ನು ಬಾಲಕರಲ್ಲಿ ಬಿಂಬಿಸುವದು. ಈ ಯೋಜನೆಯ ಮೇರೆಗೆ ಹುಡುಗರಿಗೆ ಮತ್ತು ಹುಡಿಗೆಯರಿಗೆ ಶಾಲೆಯಲ್ಲಿ ಐದು ವರ್ಷ ಒಟ್ಟಿಗೆ ಶಿಕ್ಷಣ ಕೊಟ್ಟು ನಂತರ ಉಳಿದ ಎರಡು ವರ್ಷಗಳಲ್ಲಿ ಹೆಣ್ಣುಮಕ್ಕಳಿಗೆ ಬೇರೆ ವ್ಯವಸ್ಥೆ ಮಾಡಿ ಅವರಿಗೆ ಯೋಗ್ಯವಾದ ಮನೆಗೆಲಸ ಮೊದಲಾದ ವಿಷಯಗಳನ್ನು ಕಲಿಸಲಾಗುವದು. ಆದರೆ ಒಂದು ಮಾತನ್ನು ಇಲ್ಲಿ ಸ್ಪಷ್ಟಗೊಳಿಸುವುದು ಅವಶ್ಯ. ವಾರ್ಧಾಯೋಜನೆಯಲ್ಲಿ ಸಹಶಿಕ್ಷಣ(Co-education)ಕ್ಕೆ ಮಾತ್ರ ಇಂಬಿದೆಯೆಂದು ಇದರ ಅರ್ಥವಲ್ಲ. ಬೇಕಾದರೆ ಹಾಗು ಸಾಧ್ಯವಾದರೆ ಹುಡುಗರು ಮತ್ತು ಹುಡಿಗೆಯರಿಗೋಸುಗ ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸಬಹುದು. ಇವಕ್ಕೆ ಅಡ್ಡಿ ಆತಂಕಗಳೇನೂ ಇಲ್ಲ.

ಇಲ್ಲಿನ ವರೆಗೆ ವಾರ್ಧಾಯೋಜನೆಯ ಸಂಬಂಧವಾಗಿ ಇಷ್ಟೆಲ್ಲ ಉತ್ತರ ಪ್ರತ್ಯುತ್ತರಗಳಾದ ಮೇಲೆಯೂ, ಇದರೊಳಗಿನ ಉತ್ತರಗಳು ಎಲ್ಲರಿಗೂ ಸಮಾಧಾನಕಾರಕವಿರುವವೆಂದು ಹೇಳಲು ಬರುವಂತಿಲ್ಲ. ಇದರ ಬಗೆಗೆ ಇನ್ನೂ ಅನೇಕ ಸಂದೇಹಗಳನ್ನಿಟ್ಟುಕೊಂಡಿರುವವರು ಇದ್ದೇ ಇರುವರು.

ಆದರೆ ಒಂದು ಮಾತನ್ನು ಮಾತ್ರ ಇಲ್ಲಿ ಎಲ್ಲರೂ ನೆನಪಿನಲ್ಲಿಡಬೇಕು. ಈ ಯೋಜನೆಯನ್ನು ಕುರಿತ ಆಕ್ಷೇಪಗಳು ಬರಿಯ ಕಲ್ಪನಾ ಪ್ರಪಂಚದವೇ ಹೊರತು ಸ್ವಂತದ ಅನುಭವದವಲ್ಲ. ಅವರು ನಡೆಸಿರುವುದು ಒಂದು ತಾತ್ವಿಕ ಚರ್ಚೆ (Theoritical discussion) ಮಾತ್ರ. ಇದರಂತೆ, ಯೋಜನೆಯ ಸಮರ್ಥಕರಿಗೆ ಈ ವಿಷಯದಲ್ಲಿ ಅನುಭವಜ್ಞಾನವು ಕೆಲಮಟ್ಟಿಗೆ ಇದ್ದರೂ ಸಾಕಷ್ಟು ಇದೆಯೆಂದು ಹೇಳಲಾಗುವದಿಲ್ಲ. ಅನುಭವವಿಲ್ಲದ ಇಂತಹ ಚರ್ಚೆಗೆ ಆದಿ ಅಂತ್ಯಗಳೇ ಇಲ್ಲದಿರುವದರಿಂದ ಸದ್ಯಕ್ಕೆ ಚರ್ಚೆಯನ್ನು ನಿಲ್ಲಿಸುವುದು ಒಳಿತು. ಶೈಕ್ಷಣಿಕ ಪ್ರಪಂಚದಲ್ಲಿ ಎಷ್ಟೋ ಹೆಚ್ಚಿನ ಪ್ರಗತಿಹೊಂದಿರುವ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೂಡ ಅವರ ಎಲ್ಲ ಯೋಜನೆಗಳು ಯಶಸ್ವಿಯಾದುವೆಂದು ಹೇಳಲಾಗುವದಿಲ್ಲ. ಅನೇಕ ಯೋಜನೆಗಳು ಬಳಕೆಗೆ ಬರುವಾಗ ಬಿದ್ದುಹೋಗಬಹುದು. ಯಾವುದೊಂದು ಯೋಜನೆಯ ನಿಜವಾದ ಸಾಧಕ ಬಾಧಕಗಳು, ಅದು ಕಾರ್ಯರೂಪದಲ್ಲಿ ಬಂದಾಗ ಮಾತ್ರ ಗೊತ್ತಾಗುವದು. ಹಿಂದುಸ್ಥಾನದ ಈಗಿನ ಶಿಕ್ಷಣ ಪದ್ಧತಿಯು ಅರಾಷ್ಟ್ರೀಯ, ಶುದ್ಧ ಪುಸ್ತಕೀಯ, ಗುಲಾಮತನದ ಮತ್ತು ಪರಾವಲಂಬನೆಯ ಪ್ರವೃತ್ತಿಯನ್ನು ತರುವಂತಹದೆಂದೂ ಹಾಗೂ ಇಂತಹ ಶಿಕ್ಷಣ ಪದ್ಧತಿಯಲ್ಲಿ ಯೋಗ್ಯ ಸುಧಾರಣೆಗಳಾಗದಿದ್ದರೆ ಗತ್ಯಂತರವಿಲ್ಲವೆಂದೂ ನಂಬುವ ಪ್ರತಿಯೊಬ್ಬ ಹಿಂದೀಯನು ಈ ಯೋಜನೆಗೆ ಬೆಂಬಲ ಕೊಡಲೇಬೇಕು. ಈ ಯೋಜನೆಯನ್ನು ದೇಶದ ಇನ್ನುಳಿದ ರಾಜಕೀಯ ಮೊದಲಾದ ರಂಗಗಳಲ್ಲಿ ಕ್ರಾಂತಿಯೆಬ್ಬಿಸಿ ದೇಶದ ಏಳಿಗೆಗಾಗಿ ಟೊಂಕಕಟ್ಟಿರುವ ಕಾಂಗ್ರೆಸ್ಸಿನ ನೇತೃತ್ವದಲ್ಲಿ ಜನತೆಯ ಮುಂದಿಡಲಾಗಿದೆ. ಇಂತಹ ಸಮಯದಲ್ಲಿ ಈ ಯೋಜನೆ ಫಲಕಾರಿಯಾಗಲು ಎಲ್ಲರೂ ಯತ್ನಿಸಬೇಕು. ಧ್ಯೇಯವು ಎಲ್ಲಿಯ ವರೆಗೆ ಮಾನ್ಯವಿರುವದೋ ಅಲ್ಲಿನ ವರೆಗೆ ನಾವು ಕಾರ್ಯಗಾಗಿಸಲು ಅಡ್ಡಿ ಏನು? ಈ ಯೋಜನೆಯಾದರೂ ಕಾರ್ಯರೂಪದಲ್ಲಿ ಬಂದಂತೆ ಅದರ ಕುಂದುಕೊರತೆಗಳು ಪ್ರಕಟವಾಗಿ ಅವನ್ನು ನಿವಾರಿಸಲು ಅನುಕೂಲವಾಗುವದು. ಹಿಂದುಸ್ತಾನದ ಕೇಂದ್ರ ಸರಕಾರದಿಂದ ನಿಯುಕ್ತವಾದ ಶೈಕ್ಷಣಿಕ ಸಮಿತಿಯ ವರದಿ ಮೊನ್ನೆ ಪ್ರಕಟವಾಗಿದೆ. ಅದರಲ್ಲಿ ಈ ಸಮಿತಿಯವರು ವಾರ್ಧಾ ಯೋಜನೆಯನ್ನು ಬಹುಮಟ್ಟಿಗೆ ಒಪ್ಪಿಕೊಂಡಿರುವದು ಒಂದು ಆನಂದದ ಸಂಗತಿ. ಉಳಿದ ಹಲಕೆಲವು

ಜನರ ಈ ಯೋಜನೆಯ ಸಂಬಂಧದ ಸಂಶಯುಗಳು ಇದರಿಂದಲಾದರೂ ದೂರಾಗಬಹುದು.

ಹೀಗೆ ಕಾಂಗ್ರೆಸ್ಸಿನವರು ಶೈಕ್ಷಣಿಕ ಪ್ರಪಂಚದಲ್ಲಿ ವಾರ್ಧಾ ಶಿಕ್ಷಣ ಯೋಜನೆಯ ಮೂಲಕ ಹೂಡಿದ ಕ್ರಾಂತಿಗೆ ಈಗಿನ ನುರಿತ ಶಿಕ್ಷಕವರ್ಗವು, ವೃತ್ತಪತ್ರಿಕಾ ಸಂಪಾದಕರು, ಮತ್ತು ದೇಶದ ಮೇಧಾವಿಗಳು ನೆರವಾಗಿ ವಾರ್ಧಾ ಶಿಕ್ಷಣಪ್ರಸಾರ ಮಾಡಬೇಕು. ಸಾಧ್ಯವಿದ್ದೆಡೆಗಳಲ್ಲಿ, ಅದರಲ್ಲೂ ಕಾಂಗ್ರೆಸ್ ಪ್ರಾಂತಗಳಲ್ಲಿ ಆದಷ್ಟು ಪ್ರಯೋಗಗಳನ್ನಾದರೂ ನಡೆಸಿ ಯೋಜನೆಯನ್ನು ಮುಂದುವರಿಸಬೇಕು.

ಕರ್ನಾಟಕದಲ್ಲಿನ ಜನತೆಗೂ ವಾರ್ಧಾ ಯೋಜನೆಯ ಪೂರ್ಣ ಅರಿವು ಉಂಟಾಗಿ ವಿಚಾರಕ್ರಾಂತಿಯಾಗಲೆಂದು ಈ ಹೊತ್ತಿಗೆಯನ್ನು ಈಗ ಕನ್ನಡಿಗರ ಮುಂದಿಡಲಾಗಿದೆ. ಇಂತಹ ಶಿಕ್ಷಣ ಗ್ರಂಥವು ಕರ್ನಾಟಕದಲ್ಲಿ ಇದೇ ಮೊದಲನೆಯದು. ಇದರೊಳಗಿನ ವಿಷಯಗಳನ್ನು ಮನನ ಮಾಡಿಕೊಂಡು ಮಹಾತ್ಮಾ ಗಾಂಧಿಯಂತಹ ವಿಭೂತಿಗಳ ಹಾಗು ಹಿಂದುಸ್ತಾನದ ಒಂದೇ ಒಂದು ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ಸಿನ ನೇತೃತ್ವದಲ್ಲಿ ಮುಂದಿಡಲಾದ ಈ ಯೋಜನೆಯನ್ನು ಪ್ರಾಂತದಲ್ಲೆಲ್ಲ ಬಳಕೆಗೆ ತಂದು ಕರ್ನಾಟಕದಲ್ಲಿಯೂ ಇಡಿಯ ಹಿಂದುಸ್ತಾನದಲ್ಲಿಯೂ ಉತ್ತಮ ಪ್ರಜೆಗಳನ್ನು ತಯಾರಿಸುವ ಕಾರ್ಯದಲ್ಲಿ ಪೂರ್ಣ ರೀತಿಯಿಂದ ನೆರವಾಗುವರೆಂದು ನಂಬಿರುವ,

**ರಾ. ಶ್ರೀ. ಹುಕ್ಕೇರಿಕರ**

ಕರ್ನಾಟಕ ಶಿಕ್ಷಣ ಸಮಿತಿ
ಧಾರವಾಡ

ಧಾರವಾಡ
೧೪–೭–೧೯೩೮

# ಪರಿವಿಡಿ

ಪುಟ

**೧ ಮೂಲ ತತ್ವಗಳು:** ೧–೮

ಈಗ ರೂಢವಾಗಿರುವ ಶಿಕ್ಷಣಕ್ರಮ—ಮಹಾತ್ಮಾಜಿಯವರ ನೇತೃತ್ವ ನಾಲೆಯಲ್ಲಿಯ ಕೈಕೆಲಸ—ಎರಡು ಅವಶ್ಯಕತೆಗಳು—ಈ ಪದ್ಧತಿಯಲ್ಲಿ ಅಡಕವಾಗಿರುವ ನಾಗರಿಕತೆಯ ಆದರ್ಶ—ಈ ಯೋಜನೆಯಲ್ಲಿಯ ಸ್ವಾವಲಂಬನೆಯ ಮೂಲತತ್ವ

**೨ ಉದ್ದೇಶಗಳು:** ೮–೧೮

ಮುಖ್ಯ ಕೈಕೆಲಸ—ಮಾತೃಭಾಷೆ—ಗಣಿತ—ಸಮಾಜಿಕ ವಿಷಯಗಳ ಅಭ್ಯಾಸ—ಸಾಮಾನ್ಯ ವಿಜ್ಞಾನ—ಚಿತ್ರ ಬರೆಯುವದು—ಸಂಗೀತ—ಹಿಂದುಸ್ತಾನಿ

**೩ ಶಿಕ್ಷಕರ ಶಿಕ್ಷಣ:** ೧೮–೨೪

ಶಿಕ್ಷಕರ ಪೂರ್ಣ ವಿದ್ಯಾಭ್ಯಾಸದ ಪಾಠಕ್ರಮ
" ಸಂಕ್ಷಿಪ್ತ " "

**೪ ಮೇಲ್ವಿಚಾರಣೆ** ೨೪–೨೭

ಮೇಲ್ವಿಚಾರಣೆ—ಪರೀಕ್ಷೆಗಳು

**೫ ಆಡಳಿತ** ೨೭–೩೩

**೬ ವಿದ್ಯಾರ್ಥಿಗಳ ಪಾಠಕ್ರಮ** ೩೩–೫೨

ನೂಲುವ ಹಾಗು ನೇಯುವ ಕೈಗಾರಿಕೆ—ಮಹತ್ವದ ಕೆಲವು ಸೂಚನೆಗಳು—ಮೂಲ ಉದ್ಯೋಗ, ಒಕ್ಕಲುತನ—ಬೇಸಾಯದ ವೃತ್ತಿಶಿಕ್ಷಣ—ವ್ಯವಹಾರಿಕ ಬೇಸಾಯದ ಅಭ್ಯಾಸ—ಬೇರೆ ವಿಷಯಗಳು

# ವರ್ಧಾ ಶಿಕ್ಷಣ ಯೋಜನೆ

## ೧. ಮೂಲತತ್ವಗಳು

**ಈಗ ರೂಢವಾಗಿರುವ ಶಿಕ್ಷಣಕ್ರಮ**

ನಮ್ಮ ದೇಶದಲ್ಲಿ ರೂಢಿಯಲ್ಲಿರುವ ಈಗಿನ ಶಿಕ್ಷಣ ಪದ್ಧತಿಯನ್ನು ಬಹುತರ ಎಲ್ಲ ಹಿರಿಯರು ಖಂಡಿಸಿದ್ದಾರೆ. ಜನಜೀವನಕ್ಕೆ ಅಗತ್ಯದ ವಿಷಯಗಳನ್ನು ಒದಗಿಸಿ, ಜನಾಂಗದ ಶಕ್ತಿಯನ್ನು-ಪ್ರವೃತ್ತಿಯನ್ನು ಯೋಗ್ಯ ಮಾರ್ಗದಲ್ಲಿ ಹರಿಸಲು ಹಿಂದಕ್ಕಾದರೂ ಅದು ಸಮರ್ಥವಾಗಲಿಲ್ಲ. ಆದರೆ ಇಂದು ಅತಿ ಮಹತ್ವವಾದ ಬದಲಾವಣೆಗಳು, ಅಂತರ್‌ರಾಷ್ಟ್ರೀಯ ಜೀವನವನ್ನೂ ರಾಷ್ಟ್ರೀಯ ಜೀವನವನ್ನೂ ಮಾರ್ಪಡಿಸುತ್ತ ಜನತೆಯ ಮೇಲೆ ಹೊಸ ಹೊಸ ಹೊರೆಗಳನ್ನು ಹೊರಿಸುತ್ತಿರುವಾಗ, ನಮ್ಮ ದೇಶದಲ್ಲಿಯ ಈಗಿನ ವಿದ್ಯಾಭ್ಯಾಸವು ಅವನ್ನೆಲ್ಲ ಗಣಿಸದೆ ಜೀವನಪ್ರವಾಹವನ್ನು ಬದಿಗಿರಿಸಿ, ಭಿನ್ನ ಭಿನ್ನ ಪರಿಸ್ಥಿತಿಗೆ ಹೊಂದಿಕೊಳ್ಳದೆ, ಜಗತ್ತನ್ನು ನೋಡಲು ಕಣ್ತೆರೆಯದೆ ಅಂಧನಂತೆ ಹಾಗೆಯೇ ಹೊರಟು ಬಿಟ್ಟಿದೆ. ಇಂತಹ ಶಿಕ್ಷಣವು ನಮ್ಮದ ಪರಿಸ್ಥಿತಿಗೆ ಹೊಂದುವಂತಹದೂ ಅಲ್ಲ. ಉಚ್ಚ ಆದರ್ಶವಾದ ಧ್ಯೇಯಗಳಿಂದ ಹುಟ್ಟಿದ್ದೂ ಅಲ್ಲ. ಜನತೆಯು ತನ್ನ ಕಾಲಮೇಲೆ ತಾನು ನಿಲ್ಲುವಂತೆ, ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ, ಉಪಯುಕ್ತರಾದ ನಾಗರಿಕರಾಗುವಂತೆ ಈ ಶಿಕ್ಷಣವು ಅವರನ್ನು ಮಾರ್ಪಡಿಸುವದಿಲ್ಲ. ಮಾನವೀ ಶಕ್ತಿಯ ಹಾಗು ಸುಲಿಗೆಯ ತಳಹದಿಯ ಮೇಲೆ ನಿಂತ ಅಮಾನುಷ ಆಳಿಕೆಯನ್ನೂ ಮೇಲಾಟವನ್ನೂ ತಡೆದು ಆ ಸ್ಥಾನದಲ್ಲಿ ಜನರು ಕೂಡಿನಡೆಯಬೇಕೆಂಬ ಒಲವಿನ ಸಹಕಾರದ ಹೊಸ ಶಿಸ್ತಿನ ಸಮಾಜವನ್ನು ರಚಿಸಬೇಕೆಂಬ ಆಲೋಚನೆಯೇ ಈಗಿನ ಶಿಕ್ಷಣದಲ್ಲಿಲ್ಲ. ಆದುದರಿಂದ ಈಗಿರುವ ವಿದ್ಯಾಭ್ಯಾಸ ಕ್ರಮವನ್ನು

ಬದಲಿಸಿ, ಅದರ ಸ್ಥಾನದಲ್ಲಿ ಹೆಚ್ಚು ಜನಸಾಮ್ಯಕವೂ, ಮಾನವ ಸ್ವಭಾವಕ್ಕೆ ಹೆಚ್ಚು ಹೊಂದಿಕೊಳ್ಳುವಂಥವೂ ಆದ ಬೇರೊಂದು ಶಿಕ್ಷಣಯೋಜನೆಯನ್ನು ಬಳಿಕೆಯಲ್ಲಿ ತರಬೇಕೆಂಬ ಅಪೇಕ್ಷೆ ಎಲ್ಲ ಕಡೆಗೂ ಕಂಡುಬರುತ್ತದೆ. ಈ ಬಗೆಯ ಹೊಸ ಶಿಕ್ಷಣವು ರಾಷ್ಟ್ರೀಯ ಜೀವನಕ್ಕೆ ತೃಪ್ತಿಕರವಾಗಿರಬೇಕು; ಆ ಜೀವನದ ಬೇಡಿಕೆಯನ್ನು ಪೂರೈಸಲು ಸಮರ್ಥವಾಗಿರಬೇಕು.

ಹಿಂದುಸ್ಥಾನಕ್ಕೆ ಅನ್ವಯಿಸಲಾಗುವ ಶಿಕ್ಷಣ ಪದ್ಧತಿಯು ಪಾಶ್ಚಾತ್ಯ ದೇಶಗಳಲ್ಲಿ ಅನುಸರಿಸುತ್ತಿರುವ ಪದ್ಧತಿಗಳಿಂದ ಕೆಲವು ವಿಷಯಗಳಲ್ಲಿ ಮೂಲತಃ ಭಿನ್ನವಾಗಿದೆ. ಏಕೆಂದರೆ ಹಿಂದುಸ್ಥಾನವು ಸ್ವಾತಂತ್ರ್ಯ ಸಂಪಾದನೆಗೆ ಅಹಿಂಸೆಯೇ ಶಾಂತಿಯ ಮಾರ್ಗವೆಂದು ಅದನ್ನೇ ಅವಲಂಬಿಸಿದೆ. ಆದುದರಿಂದ ನಮ್ಮ ಹುಡುಗರಿಗೆ ಹಿಂಸೆಗಿಂತ ಅಹಿಂಸೆ ಎಷ್ಟು ಶ್ರೇಷ್ಠವೆಂಬುದನ್ನು ಕಲಿಸಬೇಕಾಗಿದೆ.

## ಮಹಾತ್ಮಾಜಿಯವರ ನೇತೃತ್ವ

ಮಹಾತ್ಮಾಜಿಯವರು ನಮಗೆ ಇತರ ವಿಷಯಗಳಂತೆ ಈ ವಿಷಯದಲ್ಲಿಯೂ ಮಾರ್ಗದರ್ಶಕರಾಗಿ ಒದಗಿದ್ದಾರೆ. ಹಿಂದೀಯರ ಸ್ವಭಾವಕ್ಕನುಗುಣವಾದ ಒಂದು ಶಿಕ್ಷಣ ಕ್ರಮವನ್ನು ತಯಾರಿಸಿ, ಜನತೆಯ ಶಿಕ್ಷಣ ಸಮಸ್ಯೆಯನ್ನು ವ್ಯಾವಹಾರಿಕವಾಗುವಂತೆ ಮಾಡಲು ಹಾಗು ಸಾಧ್ಯವಿದ್ದಷ್ಟು ಬೇಗನೆ ಪರಿಹರಿಸಲು ಅವರು ಅತ್ಯಾಸಕ್ತಿಯಿಂದ ತೊಡಗಿದ್ದಾರೆ. 'ಹರಿಜನ' ದಲ್ಲಿಯೂ ವರ್ಧಾ ಶಿಕ್ಷಣ ಸಮ್ಮೇಲನದಲ್ಲಿಯೂ ಅವರು ಶಿಕ್ಷಣ ಕ್ರಮದ ಮೂಲತತ್ವಗಳನ್ನು ವಿವರಿಸಿದ್ದಾರೆ. ಶಿಕ್ಷಣವು ಯೋಗ್ಯವಾದ ತತ್ವಗಳನ್ನೊಳಗೊಂಡದ್ದಾದರೆ, ಯಾವುದೊಂದು ಕೈಗಾರಿಕೆಯ ಅಥವಾ ಫಲದಾಯಕವಾದ ಕೆಲಸದ ಮೂಲಕ ಶಿಕ್ಷಣವನ್ನು ಕೊಡಬೇಕು. ಅಂಥ ಕೈಗಾರಿಕೆ ಅಥವಾ ಕೆಲಸವು ಶಾಲೆಯಲ್ಲಿ ಕಲಿಸಲಾಗುವ ಎಲ್ಲ ವಿಷಯಗಳಿಗೂ ಮಧ್ಯವರ್ತಿ ಆಧಾರವಾಗಿರಬೇಕು. ದಕ್ಷತೆಯಿಂದ ಪರಿಪೂರ್ಣವಾಗಿ ಕಲಿಸಿದಲ್ಲಿ ಈ ಕೈಗಾರಿಕೆಯಿಂದಲೇ ಶಿಕ್ಷಕರ ಸಂಬಳದ ಬಹು ದೊಡ್ಡ ಪಾಲು ದೊರಕುವಂತಾಗಬೇಕು. ಪುಕ್ಕಟೆಯಾದ ಮತ್ತು ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಕೊಡಲಿ

ಪ್ರಾರಂಭಿಸಲು ಈ ವಿದ್ಯಾಭ್ಯಾಸಕ್ರಮದಿಂದ ಸರಕಾರಕ್ಕೆ ಬಹಳ ಸಹಾಯ ವಾಗುವದೆಂದು ಮಹಾತ್ಮರ ಅಭಿಪ್ರಾಯ. ಇಲ್ಲದಿದ್ದರೆ ದೇಶದ ಈಗಿನ ರಾಜ ಕೀಯ ಹಾಗು ಆರ್ಥಿಕ ಪರಿಸ್ಥಿತಿಯಲ್ಲಿ ಈ ಶಿಕ್ಷಣದ ವೆಚ್ಚವು ಕೈಮೀರಿ ಹೋಗುತ್ತದೆ.

## ಸಾಲೆಯಲ್ಲಿಯ ಕೈಕೆಲಸ

ಯೋಗ್ಯವಾದ ಫಲದಾಯಕವಾದ ಕೈಕೆಲಸದ ಸಹಾಯದಿಂದ ಹುಡುಗರಿಗೆ ಶಿಕ್ಷಣ ಕೊಡಬೇಕೆಂಬ ಅಭಿಪ್ರಾಯಕ್ಕೆ ಆಧುನಿಕ ಶಿಕ್ಷಣ ಶಾಸ್ತ್ರಜ್ಞರು ಅನುಕೂಲರಿದ್ದಾರೆ. ಪರಿಪೂರ್ಣವಾದ, ಸುಸಂಬದ್ಧವಾದ ಶಿಕ್ಷಣವನ್ನು ಹೇಗೆ ಒದಗಿಸಬೇಕೆಂಬುದಕ್ಕೆ ಈ ಪದ್ಧತಿ ಬಹು ಪರಿಣಾಮಕಾರಿಯಾದ ಮಾರ್ಗವಾಗಿದೆ.

ಮಾನಸ ಶಾಸ್ತ್ರದ ದೃಷ್ಟಿಯಿಂದ ಕೂಡ ಇದು ಅಪೇಕ್ಷಣೀಯವಾಗಿದೆ. ಮಗುವಿನ ಸ್ವಭಾವ ಚಟುವಟಿಕೆಯಿಂದ ಕೂಡಿದ್ದು; ಬರಿಯ ಪುಸ್ತಕಪಾಠದ ಕಟ್ಟಳೆ ಅದಕ್ಕೆ ಯಾವಾಗಲೂ ವಿರೋಧ; ಈ ಹೊಸ ಬಗೆಯ ಕಲಿಸುವ ರೀತಿ ಮಗುವನ್ನು ಆ ಬಂಧನದಿಂದ ಬಿಡಿಸುತ್ತದೆ. ಜ್ಞಾನ್ಮೆಯ ಹಾಗು ವ್ಯಾವಹಾರಿಕ ಅನುಭವಗಳನ್ನು ಇದು ಸಂಪ್ರಮಾಣದಲ್ಲಿಡುತ್ತದೆ; ದೇಹಶಕ್ತಿಯೂ ಬುದ್ಧಿ ಶಕ್ತಿಯೂ ಒಂದಕ್ಕೊಂದು ಹೊಂದಿಕೊಂಡು ಬೆಳೆಯುವಂತೆ ಮಾಡಲು ಅದನ್ನು ಸಹಕಾರಿಯಾಗಿ ಉಪಯೋಗಿಸಿಕೊಳ್ಳಬಹುದು. ಬರಿಯ ಓದು ಬರಹವನ್ನಷ್ಟೇ ಅಲ್ಲದೆ, ಇದಕ್ಕಿಂತಲೂ ಅತಿ ಸೂಕ್ಷ್ಮವಾದ ಕೈಚಳಕವನ್ನೂ ಬುದ್ಧಿ ಶಕ್ತಿಯನ್ನೂ ರಚನಾತ್ಮಕ ಕಾರ್ಯಸಾಧನೆಗೆ ಉಪಯೋಗಿಸಿಕೊಳ್ಳುವ ರೀತಿಯನ್ನೂ ಈ ಪದ್ಧತಿ ಕಲಿಸುತ್ತದೆ. ಇದನ್ನು ನಾವು ಸರ್ವಾಂಗ ಪರಿಪೂರ್ಣವಾದ ವಿದ್ಯಾಪರಿಣತಿಯೆಂದು ಕರೆಯಬಹುದು.

ಸಾಮಾಜಿಕ ದೃಷ್ಟಿಯಿಂದ ಕೂಡ ಈ ಬಗೆಯ ಶಿಕ್ಷಣಕ್ರಮವು ಬಹಳ ಉಪಯುಕ್ತವಾದುದು. ಪಾಠಕ್ರಮದಲ್ಲಿ ಕೈಕೆಲಸವನ್ನು ಸೇರಿಸುವದರಿಂದ ರಾಷ್ಟ್ರದ ಎಲ್ಲ ಬಾಲಕರೂ ಅದನ್ನು ಕಲಿಯಲೇ ಬೇಕಾಗುತ್ತದೆ; ಅದರಿಂದ ಕೂಲಿಕಾರರು, ಬುದ್ಧಿಯಿಂದ ಕೆಲಸಮಾಡುವವರು, ಕಾರಕೂನರು ಎಂಬ ಅನಿ

ಷ್ಯಕಾರಕ ವರ್ಗಭೇದಗಳು ಹುಟ್ಟುವ ಮೊದಲೇ ನಿರ್ನಾಮವಾಗುತ್ತವೆ. ಅಲ್ಲದೆ ಶ್ರಮಜೀವನದ ಗೌರವವನ್ನೂ ಮಾನವ ಜಾತಿಯ ಐಕ್ಯಮತ್ಯಭಾವವನ್ನೂ ಬೆಳಸಲು ಇದರಿಂದ ಸುಲಭ ಮಾರ್ಗವಾಗುತ್ತದೆ. ಇದರ ಧಾರ್ಮಿಕ ಹಾಗು ನೈತಿಕ ಲಾಭವಾದರೂ ಅಪಾರವಾದುದು.

ಆರ್ಥಿಕ ದೃಷ್ಟಿಯಿಂದಲೂ ಇದು ಬಹಳ ಫಲದಾಯಕ. ಈ ಶಿಕ್ಷಣ ಕ್ರಮವನ್ನು ಜಾಣತನದಿಂದಲೂ ದಕ್ಷತೆಯಿಂದಲೂ ನಡೆಸಿಕೊಂಡು ಬಂದರೆ ಇದು ನಮ್ಮ ಕೈಕೆಲಸಗಾರರ ಸಂಪಾದನೆಯ ಶಕ್ತಿಯನ್ನು ಹೆಚ್ಚಿಸುವದಲ್ಲದೆ ಅವರು ತಮ್ಮ ವಿಶ್ರಾಂತಿಯ ಕಾಲವನ್ನು ಲಾಭದಾಯಕವಾಗುವಂತೆ ಮಾಡಿಕೊಳ್ಳುವ ಮಾರ್ಗವನ್ನೂ ತೋರಿಸುತ್ತದೆ.

ಕೇವಲ ವಿದ್ಯಾಭ್ಯಾಸದ ದೃಷ್ಟಿಯಿಂದ ನೋಡಿದರೂ, ಮಹತ್ವದ ಕೈಗಾರಿಕೆಯನ್ನು ಶಿಕ್ಷಣದ ತಳಹದಿಯನ್ನಾಗಿ ಮಾಡುವದರಿಂದ ಮಕ್ಕಳು ಪಡೆದುಕೊಂಡ ಜ್ಞಾನವು ಹೆಚ್ಚು ದೃಢವಾದದ್ದೂ ವಾಸ್ತವವೂ ಆಗುತ್ತದೆ. ಈ ಬಗೆಯಾಗಿ ಜ್ಞಾನವು ಜೀವನಕ್ಕೆ ಹೊಂದಿಕೊಳ್ಳುತ್ತದೆ. ಅದರ ಬೇರೆ ಬೇರೆ ಅಂಗಗಳು ಒಂದಕ್ಕೊಂದು ಪೂರಕವಾಗುತ್ತವೆ.

## ಎರಡು ಆವಶ್ಯಕತೆಗಳು

ಈ ಲಾಭಗಳನ್ನು ಪಡೆಯಲು ನಾವು ಎರಡು ಮಹತ್ವದ ನಿಯಮಗಳನ್ನು ಲಕ್ಷ್ಯದಲ್ಲಿಡಬೇಕು. ನಾವು ಆರಿಸುವ ಫಲದಾಯಕ ಉದ್ಯಮದಲ್ಲಿ ಸಾಧ್ಯವಿದ್ದಷ್ಟು ಹೆಚ್ಚಿಗೆ ಕಲಿಸುವ ಅನುಕೂಲತೆಯಿರಬೇಕು. ಮನುಷ್ಯನ ಚಟುವಟಿಕೆಗಳಿಗೆ ಸ್ವಾಭಾವಿಕವಾಗಿಯೇ ಅನುಕೂಲವಾಗುವ-ಹೊಂದಿಕೊಳ್ಳುವ-ಗುಣ ಆ ಉದ್ಯಮದಲ್ಲಿರಬೇಕು. ಅದು ಶಾಲೆಯ ಸಂಪೂರ್ಣ ಪಾಠಕ್ರಮದ ವ್ಯಾಪ್ತಿಯನ್ನು ಪಡೆದಿರಬೇಕು. ಯಾವ ಕೈಕೆಲಸವನ್ನು ಆರಿಸಿಕೊಳ್ಳಬೇಕೆಂಬ ವಿಷಯವನ್ನು ಚರ್ಚಿಸುವಾಗ ಇದಕ್ಕೆ ನಾವು ಹೆಚ್ಚು ಮಹತ್ವ ಕೊಟ್ಟಿದ್ದೇವೆ. ಈ ಶಿಕ್ಷಣಯೋಜನೆಯೂ ಅದರಲ್ಲಿ ಅಡಕವಾದ ಉದ್ದೇಶವೂ ಯಂತ್ರದಂತೆ ಕೆಲಸಮಾಡುವ ಕೆಲಸಗಾರರನ್ನು ತಯಾರಿಸುವುದಲ್ಲ. ಆದರೆ ಕೈಕೆಲಸದಲ್ಲಿ ಅಡಕವಾಗಿರುವ ಅನುಕೂಲತೆಗಳನ್ನು ಶಿಕ್ಷ

ಣಕ್ಕಾಗಿ ಉಪಯೋಗಿಸಿಕೊಳ್ಳುವದು. ಆದ್ದರಿಂದ ಫಲದಾಯಕವಾದ ಕೆಲಸವು ಶಾಲೆಯ ಪಾಠಕ್ರಮದ ಕೈಕೆಲಸದ ಭಾಗವಷ್ಟೇ ಅಲ್ಲ, ಉಳಿದ ಎಲ್ಲ ಪಠ್ಯ ವಿಷಯದ ವಿಧಾನಕ್ಕೆ ಸ್ಫೂರ್ತಿಯನ್ನು ಕೊಡುವಂತಿರಬೇಕು. ಸಹಕಾರ, ಸುಸ್ಪಷ್ಟತೆ, ಕಾರ್ಯಾರಂಭದ ಹುರುಪು, ಮುಂತಾದ ತತ್ವಗಳಿಗೆ ವಿದ್ಯಾಭ್ಯಾಸ ಕ್ರಮದಲ್ಲಿ ಹೆಚ್ಚು ಮಹತ್ವ ಕೊಡಬೇಕು. " ಕಲಸವನ್ನು ಈಗಿನಂತೆ ಕೇವಲ ಯಾಂತ್ರಿಕವಾಗಿ ಹೇಳಿಕೊಡದೆ, ಶಾಸ್ತ್ರೀಯವಾಗಿ ಕಲಿಸಬೇಕು; ಎಂದರೆ ಪ್ರತಿಯೊಂದು ಕ್ರಿಯೆಯನ್ನೂ ಮಾಡುವದು ಏಕೆ, ಯಾವುದಕ್ಕಾಗಿ—ಎಂಬು ದನ್ನು ಮಗು ತಿಳಿದುಕೊಳ್ಳಬೇಕು " ಎಂದು ಮಹಾತ್ಮಾಜಿಯವರ ಅಭಿಪ್ರಾಯವೂ ಇದೆ. ಮಗುವಿಗೆ ಈ ತಿಳುವಳಿಕೆಯಂತೂ ಸ್ವಂತ ನಿರೀಕ್ಷಣೆಯಿಂದ ಮತ್ತು ಅನುಭವದಿಂದ ಬರತಕ್ಕದ್ದು. ನೇಯುವುದೋ, ನೂಲುವುದೋ ಬಡಿಗತನವೋ ಈ ಯಾವುದಾದರೂ ಒಂದು ವಿಷಯವನ್ನು ಪಾಠಕ್ರಮಕ್ಕೆ ಸುಮ್ಮನೆ ಹೊಸದಾಗಿ ಸೇರಿಸಿ, ಇತರ ವಿಷಯಗಳನ್ನು ಹಿಂದಿನ ಸಂಪ್ರದಾಯ ಕ್ರಮದಲ್ಲಿಯೇ ಹೇಳಿಕೊಡುತ್ತಿದ್ದರೆ, ಸ್ವಪ್ರಯತ್ನವಿಲ್ಲದೆ ವಿಷಯಗ್ರಹಣ ಮಾಡುವದಕ್ಕೆ ಪ್ರೋತ್ಸಾಹ ಕೊಟ್ಟಂತಾಗುವದಲ್ಲದೆ, ಜ್ಞಾನವಿಷಯವನ್ನು ಅರ್ಥವಿಲ್ಲದ ಸಂಬಂಧರಹಿತವಾದ ವಿಭಾಗಗಳಾಗಿ ಒಡೆದಂತಾಗುತ್ತದೆ. ಹೀಗಾದರೆ ಈ ಶಿಕ್ಷಣಪದ್ಧತಿಯ ನಿಜವಾದ ಉದ್ದೇಶ ಜೀವಾಳಗಳನ್ನೇ ಕೆಡಿಸಿ ದಂತಾಗುತ್ತದೆ.

## ಈ ಪದ್ಧತಿಯಲ್ಲಿ ಅಡಕವಾಗಿರುವ ನಾಗರಿಕತೆಯ ಆದರ್ಶ

ಈ ಹೊಸ ಶಿಕ್ಷಣದಲ್ಲಿ ತೊಡಗುವ ಶಿಕ್ಷಕರೂ ಶಿಕ್ಷಣ ಪ್ರೇಮಿಗಳೂ ಇದರೊಳಗೆ ಅಡಗಿರುವ ನಾಗರಿಕತೆಯ ಆದರ್ಶವನ್ನು ಸ್ಫುಟವಾಗಿ ಅರ್ಥ ಮಾಡಿಕೊಳ್ಳಬೇಕೆಂಬುದು ನಮ್ಮ ಅಪೇಕ್ಷೆ. ಆಧುನಿಕ ಭಾರತವರ್ಷದಲ್ಲಿ ದೇಶದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಪೌರತ್ವವು ( ನಾಗರಿಕತೆ ) ಹೆಚ್ಚುಹೆಚ್ಚಾಗಿ ಪ್ರಜಾಸತ್ತಾತ್ಮಕವಾಗುವುದಂತೂ ಸ್ಪಷ್ಟವಾದವಾತು ಈಗಿನ ಹೊಸ ಪೀಳಿಗೆಗೆ ತನ್ನ ಸ್ವಂತ ಸಮಸ್ಯೆಗಳನ್ನೂ ಹಕ್ಕು ಬಾಧ್ಯತೆಗಳನ್ನೂ ಅರಿತುಕೊಳ್ಳುವಷ್ಟು ಮಟ್ಟಿಗಾದರೂ ಅವಕಾಶವಿರ ಬೇಕು. ಪೌರ ಹಕ್ಕುಗಳನ್ನೂ ಕರ್ತವ್ಯಗಳನ್ನೂ ವಿವೇಕದಿಂದ ಆಚರಿಸು

ವುದಕ್ಕೆ ಬೇಕಾಗುವ ಕನಿಷ್ಠಪ್ರಮಾಣದ ವಿದ್ಯಾಭ್ಯಾಸವಾದರೂ ದೊರೆಯ ಬೇಕಾದರೆ ಸಂಪೂರ್ಣವಾಗಿ ಹೊಸದಾದ ಶಿಕ್ಷಣಪದ್ಧತಿಯೊಂದು ಅವಶ್ಯಕ. ಎರಡನೆಯದಾಗಿ, ಈ ಆಧುನಿಕ ಕಾಲದಲ್ಲಿ ಮನುಷ್ಯನು ಬಾಳುವುದು ಒಂದು ವ್ಯವಸ್ಥಿತನಾದ ನಾಗರಿಕ ಸಮಾಜದಲ್ಲಿ. ಈ ಸಮಾಜದ ಋಣವನ್ನು ವಿವೇಕಿಯಾದ ಪೌರನು ಯಾವುದಾದರೊಂದು ಪ್ರಯೋಜನಕಾರಿಯಾದ ಸೇವಾರೂಪದಲ್ಲಿ ತೀರಿಸುವಂತೆ ಕಾರ್ಯತತ್ಪರನಾಗಿ ಸಮಾಜದ ಅಂಗವಾಗಿ ಇರಬೇಕಾಗಿದೆ. ಸಮಾಜಕ್ಕೆ ಹೊರೆಯಾಗತಕ್ಕವರನ್ನೂ ಪರಾವಲಂಬಿಗಳನ್ನೂ ಅವರು ಬಡವರೇ ಆಗಿರಲಿ, ಭಾಗ್ಯವಂತರೇ ಆಗಲಿ-ರೂಪಿಸುವ ವಿದ್ಯಾಭ್ಯಾಸವು ದೂಷ್ಯವಾದುದು. ಅದು ಸಮಾಜದ ವಸ್ತುನಿರ್ಮಾಣಶಕ್ತಿಯನ್ನೂ ದಕ್ಷತೆಯನ್ನೂ ಕುಗ್ಗಿಸುವುದಲ್ಲದೆ, ಅಪಾಯಕರವೂ ನೀತಿಬಾಹಿರವೂ ಆದ ಮನೋಭಾವನೆಯನ್ನೂ ಹುಟ್ಟಿಸುತ್ತದೆ. ಎಲ್ಲಾ ಬಗೆಯ ಪ್ರಯೋಜನಕರವಾದ ಕೆಲಸಗಳನ್ನೂ-ಕೈಕೆಲಸದಿಂದ ಕಸಗೂಡಿಸುವ ಕೆಲಸದ ವರೆಗೆ-ಗೌರವಾರ್ಹವಾದುದೆಂದು ಭಾವಿಸಿ, ಆತ್ಮಾವಲಂಬಿಗಳಾಗಲು ಶಕ್ತಿಯನ್ನೂ ಇಷ್ಟವನ್ನೂ ಹೊಂದಿರುವ ಕೆಲಸಗಾರರನ್ನು ಸಿದ್ಧಗೊಳಿಸುವದಕ್ಕಾಗಿ ಈ ಶಿಕ್ಷಣಪದ್ಧತಿಯನ್ನು ಸಂಯೋಜಿಸಿದೆ.

ಶಾಲೆಯಲ್ಲಿ ಮಾಡುವ ಕೆಲಸವು ಸಮಾಜದ ಕೆಲಸಕಾರ್ಯಗಳಿಗೆ ಇಷ್ಟು ಗಾಢವಾಗಿ ಹೊಂದಿಕೊಂಡಿರುವುದರಿಂದ ಶಾಲೆಯ ಆವರಣದಲ್ಲಿ ಮಕ್ಕಳು ಗಳಿಸಿದ ದೃಷ್ಟಿ ಮನೋಭಾವಗಳನ್ನು ಹೊರಗಿನ ವಿಶಾಲ ಪ್ರಪಂಚದ ವ್ಯವಹಾರಕ್ಕೂ ಹೊಂದಿಸಿಕೊಳ್ಳಲು ಅವರು ಶಕ್ತರಾಗುತ್ತಾರೆ. ಹೀಗೆ ನಾವು ಸಮರ್ಥನ ಮಾಡುತ್ತಿರುವ ಹೊಸ ಶಿಕ್ಷಣಪದ್ಧತಿಯು ಭವಿಷ್ಯದ ನಾಗರಿಕರಿಗೆ ತಮ್ಮ ವೈಯಕ್ತಿಕ ಯೋಗ್ಯತೆ, ಗೌರವದಕ್ಷತೆ— ಇವುಗಳ ವಿಷಯದಲ್ಲಿ ಚುರುಕಾದ ಜ್ಞಾನವನ್ನು ಹುಟ್ಟಿಸಿಕೊಡುವುದನ್ನು ಗುರಿಯಾಗಿ ಈಟ್ಟುಕೊಂಡಿದೆ. ಅಲ್ಲದೆ ಅವರಲ್ಲಿ ಆತ್ಮೋನ್ನತಿಯ ಬಯಕೆಯನ್ನೂ ಸಮಾಜಸೇವೆಯ ಆತುರತೆಯನ್ನೂ ಬಲಪಡಿಸುತ್ತದೆ.

ಅಂತೂ ಈ ಶಿಕ್ಷಣದ ಪದ್ಧತಿಯ ದೃಷ್ಟಿ ಎತ್ತಕಡೆಗೆಂದರೆ—ಸಹಕಾರಜೀವಿಯಾದ ಸಮಾಜವು ಏರ್ಪಡಬೇಕು; ಅದರಲ್ಲಿ, ಮಕ್ಕಳ ಮನಸ್ಸು

ಮೃದುವಾಗಿರತಕ್ಕ ಬಾಲ್ಯತಾರುಣ್ಯಗಳ ಕಾಲದಲ್ಲಿ ಅಪರ ಕಾರ್ಯಕಲಾಪಗಳಲ್ಲೆಲ್ಲಾ ಸಮಾಜಸೇವೆಯ ಉದ್ದೇಶಕ್ಕ ಪ್ರಥಮ ಸ್ಥಾನವಿರಬೇಕು. ಮಕ್ಕಳು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ತಾವು ಪ್ರತ್ಯಕ್ಷವಾಗಿಯೂ ವೈಯಕ್ತಿಕವಾಗಿಯೂ ರಾಷ್ಟ್ರೀಯ ಶಿಕ್ಷಣದ ಮಹಾ ಪ್ರಯೋಗ ಪರೀಕ್ಷೆಯಲ್ಲಿ ಸಹಕರಿಸುತ್ತಿರುವೆವೆಂದು ಅವರು ಭಾವಿಸುತ್ತಾರೆ.

## ಈ ಯೋಜನೆಯಲ್ಲಿಯ ಸ್ವಾವಲಂಬನೆಯ ಮೂಲತತ್ವ

ಈ ಸ್ವಾವಲಂಬನೆಯ ವಿಷಯವಾಗಿ ಬಹು ಜನರಿಗೆ ತಪ್ಪು ತಿಳುವಳಿಕೆಯಾಗಿರುವದರಿಂದ, ಈ ಯೋಜನೆಯ ಸ್ವಾವಲಂಬನೆಯ ತಳಹದಿಯನ್ನು ವಿಶದೀಕರಿಸುವದು ಅವಶ್ಯವಾಗಿದೆ. ವರ್ಧಾದಲ್ಲಿ ತಯಾರಿಸಿದ ಶಿಕ್ಷಣ ಯೋಜನೆ ಪರಿಪೂರ್ಣವಾದದ್ದೆಂದು ನಮ್ಮ ನಂಬುಗೆ. ಒಂದು ವೇಳೆ ಇದು ಸ್ವಾವಲಂಬನವಾಗಲಾರದೆಂದು ಕಲ್ಪಿಸಿದರೂ, ಯೋಗ್ಯವಾದ ಶೈಕ್ಷಣಿಕ–ತಳಹದಿಯೆಂದೂ ತೀವ್ರವಾಗಿ ರಾಷ್ಟ್ರೀಯ ಪುನರುಜ್ಜೀವನದ ಸಂವಿಧಾನವೆಂದೂ ನಾವು ಇದನ್ನು ಸ್ವೀಕರಿಸಬೇಕು. ಸುದೈವದಿಂದ ಈ ಉತ್ತಮವಾದ ಯೋಜನೆ ಈ ಶಿಕ್ಷಣಕ್ಕೆ ತಗಲಬಹುದಾದ ಬಹುಭಾಗದ ವೆಚ್ಚವನ್ನು ನೀಗಿಸುತ್ತದೆಂಬದನ್ನು ನಾವು ಮುಂದೆ ತೋರಿಸುತ್ತೇವೆ.

ಮುಂದೆ ನಾವು ನೂಲುವ ಹಾಗು ನೇಯುವ ವಿಷಯವಾಗಿ ತೋರಿಸಿದ ವೆಚ್ಚವೂ ಅದರಿಂದಾಗುವ ಉತ್ಪನ್ನವೂ ಕಳೆದ ಹದಿನೇಳು ವರ್ಷಗಳಲ್ಲಿ ಮಹಾತ್ಮಾಜಿಯವರ ನೇತೃತ್ವದಲ್ಲಿ ನಡೆದು ಅನುಭವ ಸಿದ್ಧವಾಗಿದೆ. ವಿದ್ಯಾರ್ಥಿಗಳು ತಯಾರಿಸಿದ ಬಟ್ಟೆಯನ್ನೂ ನೂಲನ್ನೂ ಸರಕಾರವು ಪೇಟೆಯ ಬೆಲೆಗೆ ಕೊಳ್ಳಬೇಕೆಂಬ ಮಹಾತ್ಮರ ಸೂಚನೆಯನ್ನು ನಾವು ಹೃತ್ಪೂರ್ವಕ ಒಪ್ಪಿಕೊಳ್ಳುತ್ತೇವೆ.

ವಿದ್ಯಾರ್ಥಿಗಳ ಕೆಲಸದಲ್ಲಿ ದಕ್ಷತೆ ಹಾಗು ಸುಧಾರಣೆಗಾಗಿ ಯೋಗ್ಯವಾದ ಮೇಲ್ವಿಚಾರಣೆ ಅವಶ್ಯವೆಂದು ನಮ್ಮಭಿಪ್ರಾಯ. ಈ ಬಗೆಯ ಅಂಕೆ ಇರದಿದ್ದರೆ ಕೆಲಸದ ಬಿಗುವು ಸಡಿಲಾಗುವದಲ್ಲದೆ, ಅದರ ಶೈಕ್ಷಣಿಕ ಬೆಲೆಯೆಲ್ಲ

ಹೋಗಿಬಿಡುವ ಹೆದರಿಕೆಯಿದೆ. ಶಿಕ್ಷಣಪ್ರೇಮಿಗಳ ಅನುಭವದಿಂದ ಈ ಮಾತು ಪೂರ್ಣ ಸಿದ್ಧವಾಗಿದೆ.

ಇಲ್ಲೊಂದು ಎಚ್ಚರಿಕೆ ಕೊಡುವದು ಅವಶ್ಯವಿದೆ. ಶಿಕ್ಷಣ ಹಾಗು ಸಾಂಸ್ಕೃತಿಕ ಮಹತ್ವವು ಕುಗ್ಗಿ ಆರ್ಥಿಕ ಪ್ರಯೋಜನಕ್ಕೇ ಮಹತ್ವವು ಬರುವ ಸಂಭವವಿದೆ. ಕೈಗಾರಿಕೆಯೇ ಸಮೃದ್ಧವಾಗಿರುವ ಶಿಕ್ಷಣ ಸೌಕರ್ಯಗಳನ್ನು ಸಂಸ್ಕೃತಿ ಹಾಗು ಬುದ್ಧಿಯ ಬೆಳವಣಿಗೆಗೆ ಹೆಚ್ಚಾಗಿ ಬಳಸದೆ ದ್ರವ್ಯದ ಉತ್ಪಾದನೆಗೇ ಬಳಸುವ ಹೆದರಿಕೆಯಿದೆ: ಹಾಗು ವಿದ್ಯಾರ್ಥಿಗಳಿಂದ ಶಕ್ಯವಿದ್ದಷ್ಟು ಹೆಚ್ಚು ಕೆಲಸ ತಕ್ಕೊಳ್ಳಬೇಕೆಂಬ ಶಿಕ್ಷಕರ ಒಲವನ್ನು ಅಂಕಿತದಲ್ಲಿಡುವದು ಅತ್ಯವಶ್ಯವಿದೆ. ಉಪಾಧ್ಯಾಯರು ಶಿಕ್ಷಣ ಕೊಡುವಾಗ, ಮೇಲ್ವಿಚಾರಕರು ತಮ್ಮ ಕರ್ತವ್ಯ ಪಾಲಿಸುವಾಗ, ಈ ಮಾತನ್ನು ಸದಾ ನೆನಪಿನಲ್ಲಿಡುವದು ಅತ್ಯವಶ್ಯವಿದೆ.

# ೨. ಉದ್ದೇಶಗಳು

## ಏಳು ವರ್ಷಗಳಲ್ಲಿ ಮೂಲ ಶಿಕ್ಷಣ

### ಮುಖ್ಯ ಕೈಕೆಲಸ

ಕೈಕೆಲಸವನ್ನು ಆಯ್ದುಕೊಳ್ಳುವಾಗ ಒಂದು ಮಾತು ಗಮನದಲ್ಲಿಡಬೇಕು. ಅದೆಂದರೆ ವಿದ್ಯಾರ್ಥಿಯು ಪೂರ್ಣ ವಿದ್ಯಾಭ್ಯಾಸ ಮುಗಿಸಿದ ಮೇಲೆ ಅವನ್ನು ಒಂದು ಉದ್ಯೋಗವೆಂದು ನಡೆಸಿಕೊಂಡು ಹೋಗುವಷ್ಟು ಕುಶಲತೆಯನ್ನು ಪಡೆದಿರಬೇಕು.

ಮುಂದೆ ಕಾಣಿಸಿದವುಗಳನ್ನು ಬೇರೆ ಬೇರೆ ಶಾಲೆಗಳಲ್ಲಿ ಮೂಲ ಉದ್ಯೋಗಗಳನ್ನಾಗಿ ಆಯ್ದುಕೊಳ್ಳಬಹುದು. ೧. ನೂಲುವದು–ನೇಯುವದು. ೨ ಬಡಿಗತನ. ೩. ಒಕ್ಕಲುತನ. ೪. ಹಣ್ಣು ಮತ್ತು ಕಾಯಿಪಲ್ಲೆಗಳ ತೋಟಗಾರಿಕೆ. ೫. ಚರ್ಮದ ಕೆಲಸ. ೬. ಮೇಲೆ ಕಾಣಿಸಿದ ತತ್ವಕ್ಕೆ ಹೊಂದಿಕೆಯಾಗುವಂತೆ ಮತ್ತು ಆಯಾ ಸ್ಥಳದ ಭೌಗೋಲಿಕ ಪರಿಸ್ಥಿತಿಗೆ ತಕ್ಕಂತೆ ಬೇಕಾದ ಉದ್ಯಮ.

ನೂಲುವದು-ನೇಯುವದು, ಒಕ್ಕಲುತನ ಇವುಗಳನ್ನು ಬಿಟ್ಟು ಬೇರೆ ಕೈಕೆಲಸಗಳನ್ನು ಆಯ್ದುಕೊಂಡರೂ ಹತ್ತಿ ಅರೆಯುವದು, ಹಿಂಜುವದು, ನೂಲುವದು ಇವುಗಳ ಹಾಗು ಆ ಪ್ರದೇಶದಲ್ಲಿ ನಡೆಯುವ ಬೇಸಾಯದ ಸುಲಭ ಕಾರ್ಯಗಳ ಪ್ರತ್ಯಕ್ಷ ತಿಳಿವಳಿಕೆ ಇರುವದು ಅಗತ್ಯ.

## ಮಾತೃಭಾಷೆ

ತಾಯಿನುಡಿಯ ಯೋಗ್ಯ ಅಭ್ಯಾಸವೇ ಎಲ್ಲ ಶಿಕ್ಷಣದ ತಳಹದಿ. ಪರಿಣಾಮಕಾರಿಯಾಗಿ ಸರಸವಾಗಿ ಮಾತನಾಡುವದು, ತಪ್ಪಿಲ್ಲದೆ ವಿಶದವಾಗಿ ಅರ್ಥವಾಗುವಂತೆ ಬರೆಯುವದು—ಇವುಗಳ ಸಾಮರ್ಥ್ಯವಿರದಿದ್ದರೆ ಯಾರಿಗೂ ಆಲೋಚನೆಯಲ್ಲಿ ಸುಸ್ಪಷ್ಟತೆಯನ್ನೂ, ವಿಚಾರಗಳಲ್ಲಿ ಖಚಿತತೆಯನ್ನೂ ಬೆಳೆಸಿಕೊಳ್ಳಲಾಗುವದಿಲ್ಲ, ಜನತೆಯ ಭಾವನೆ, ಚಿತ್ತವೃತ್ತಿ ಮತ್ತು ಆಸೆ-ಆಕಾಂಕ್ಷೆಗಳ ಆನುವಂಶಿಕ ಸಂಪತ್ತಿನ ಪರಿಚಯವನ್ನು ಬಾಲಕನಿಗೆ ಮಾಡಿಕೊಟ್ಟು, ತಾಯಿನುಡಿಯನ್ನು ಸಾಮಾಜಿಕ ಶಿಕ್ಷಣದ ದಾರಿಯನ್ನಾಗಿ ಮಾಡಬಹುದು. ಅದರಂತೆ ಧರ್ಮ ಹಾಗು ನೀತಿಯ ನಿಜವಾದ ಬೆಲೆಯನ್ನು ಮನದಲ್ಲಿ ಬೇರೂರಲು ಇದೊಂದು ಮಾರ್ಗ. ಮಾತೃಭಾಷೆಯು ಸಾಹಿತ್ಯಸೌಂದರ್ಯದ ಅಭಿರುಚಿಯನ್ನು ವ್ಯಕ್ತಮಾಡುವ ಸ್ವಾಭಾವಿಕ ದಾರಿ. ಸರಿಯಾದ ಮಾರ್ಗವನ್ನು ಹಿಡಿದರೆ ಸಾಹಿತ್ಯದ ಅಭ್ಯಾಸವು ಆನಂದದ ತವರುಮನೆಯಾಗುತ್ತದೆ.

ಏಳು ವರ್ಷಗಳ ಅಭ್ಯಾಸದ ಕೊನೆಯಲ್ಲಿ ಮಗುವು (೧) ತನ್ನ ಅಳವಿನೊಳಗಿನ ವಸ್ತುಗಳ, ಜನರ ಹಾಗು ಆಗು-ಹೋಗುಗಳ ವಿಷಯವಾಗಿ, ಸಹಜವಾಗಿ ಸ್ವತಂತ್ರವಾಗಿ ಧೈರ್ಯದಿಂದ ಮಾತನಾಡುವ ಶಕ್ತಿಯನ್ನು ಪಡೆಯುವದು. ಈ ಬಗೆಯಾದ ಶಕ್ತಿಯು ಕ್ರಮಶಃ ಬೆಳೆಯಬೇಕು. (೨) ಬಳಿಕೆಯ, ಎಲ್ಲರಿಗೂ ರುಚಿಸಬಹುದಾದ, ಯಾವುದೊಂದು ವಿಷಯವನ್ನು ಕುರಿತು ಸರಸವಾಗಿ ಸುಸಂಬದ್ಧವಾಗಿ ಔಚಿತ್ಯಹಾನಿಯಾಗದಂತೆ ಮಾತನಾಡಲು ಬರಬೇಕು. (೩) ಸ್ವಲ್ಪ ಕಠಿಣವಾದ ಕೈಬರಹದ ಪ್ರತಿಗಳನ್ನು ಸಾಕಷ್ಟು ತೀವ್ರವಾಗಿ ಅರ್ಥಗ್ರಹಣ ಮಾಡಿಕೊಂಡು ಮನದಲ್ಲಿಯೇ ಓದಲು ಬರಬೇಕು. ಕಡೆಗೆ ಮಾಸಪತ್ರಿಕೆಗಳನ್ನೂ ವರ್ತಮಾನ ಪತ್ರಿಕೆಗಳನ್ನೂ ಓದುವ ಮಟ್ಟಿಗಾದರೂ ಈ ಶಕ್ತಿ ಬಂದಿರಬೇಕು. (೪) ಗದ್ಯಪದ್ಯಗಳನ್ನು ಸುಸ್ಪಷ್ಟವಾಗಿ, ಅರ್ಥ

ವಾಗುವಂತೆ, ಗಟ್ಟಿಯಾಗಿ ಓದಲು ಬರಬೇಕು (೫) ಶಬ್ದಕೋಶ, ವಿಷಯಾನುಕ್ರಮಣಿಕೆಗಳನ್ನು, ಪ್ರಮಾಣಗ್ರಂಥಗಳನ್ನು ಉಪಯೋಗಿಸಿಕೊಳ್ಳಲು ಗೊತ್ತಾಗಬೇಕು; ವಿಷಯಗ್ರಹಣದಲ್ಲಿ ಆನಂದದಾಯಕವಾಗುವಂತೆ ಗ್ರಂಥಾಲಯಗಳನ್ನು ಉಪಯೋಗಿಸಿಕೊಳ್ಳಲು ಬರುತ್ತಿರಬೇಕು (೬) ಚೆನ್ನಾಗಿ ತಿಳಿಯುವಂತೆ, ತಪ್ಪಿಲ್ಲದಂತೆ, ಸಾಕಷ್ಟು ಶೀಘ್ರವಾಗಿ ಬರೆಯಲು ಬರುತ್ತಿರಬೇಕು. (೭) ಸಭೆ-ಸಮ್ಮೇಲನ, ದಿನಚರಿಯ ವಿಷಯಗಳನ್ನು ಸುಲಭವಾಗಿ ವರ್ಣಿಸಲು ಶಕ್ತನಾಗಬೇಕು. ವ್ಯಾವಹಾರಿಕ ಹಾಗು ಸ್ವಂತದ ಕಾಗದ ಪತ್ರಗಳನ್ನು ಬರೆಯುವವರೆಗೆ ಬರುತ್ತಿರಬೇಕು. ದೊಡ್ಡ ಗ್ರಂಥಕಾರರ ಪುಸ್ತಕಗಳ ಕೆಲವು ಭಾಗಗಳ ಅಭ್ಯಾಸ ಮಾಡಿ ಅವುಗಳ ಪರಿಚಯದಲ್ಲಿ ಆಸಕ್ತಿ ಪಡೆಯಬೇಕು.

## ಗಣಿತ

ಕೈಕೆಲಸಕ್ಕೂ ಮನೆ ಹಾಗೂ ಸಮಾಜ ಜೀವನಕ್ಕೂ ಆವಶ್ಯಕವಾದಷ್ಟು ಅಂಕಗಣಿತ ರೇಖಾಗಣಿತ ಮತ್ತು ಲೆಕ್ಕಗಳನ್ನು ತೀವ್ರವಾಗಿ ಮಾಡುವ ಶಕ್ತಿಯನ್ನು ವಿದ್ಯಾರ್ಥಿಯಲ್ಲಿ ಬೆಳೆಸಬೇಕು. ವ್ಯವಹಾರದ ನಿಯಮ-ಗಳಿಕೆ ಬಳಿಕೆಯ ಜ್ಞಾನವನ್ನು ವಿದ್ಯಾರ್ಥಿಯು ಅರಿತಿರಬೇಕು.

ಇವೆಲ್ಲ ಉದ್ದೇಶಗಳನ್ನು ನಾಲ್ಕು ಸುಲಭ ನಿಯಮ, ನಾಲ್ಕು ಸಂಯುಕ್ತ ನಿಯಮ, ಭಿನ್ನರಾಶಿ, ದಶಮಾಂಶ, ಏಕಮಾನ ಪದ್ಧತಿ, ಬಡ್ಡಿ, ಕ್ಷೇತ್ರಫಲ, ಪ್ರಥಮ ಪರಿಚಯ, ವ್ಯಾವಹಾರಿಕ ರೇಖಾಗಣಿತ, ಜಮಾಖರ್ಚಿನ ಪ್ರಾಥಮಿಕ ಜ್ಞಾನ ಇವುಗಳಿಂದ ಸುಲಭವಾಗಿ ಸಾಧಿಸಬಹುದು. ಗಣಿತಶಾಸ್ತ್ರವು ಕೇವಲ ಸಂಖ್ಯೆಗಳ ಸ್ವರೂಪದಲ್ಲಿಯೇ—ಅವುಗಳನ್ನು ಉಪಯೋಗಿಸಿ ಮಾಡುವ ಲೆಕ್ಕದಲ್ಲಿಯೇ—ಅಡಕವಾಗಿಲ್ಲ ಆದರೆ ಅದು ಮೂಲ ಕೈಕೆಲಸದಲ್ಲಿಯೂ, ಶಾಲೆ-ಮನೆ-ಸಮಾಜಗಳಲ್ಲಿನ ವ್ಯವಹಾರಗಳೊಳಗಿನ ಸಮಸ್ಯೆಗಳಿಗೂ ಹೊಂದಿಕೊಂಡಿರಬೇಕು. ತೂಕ—ಅಳತೆ ಪ್ರಮಾಣ ಇವೆಲ್ಲವುಗಳಿಂದ ವಿದ್ಯಾರ್ಥಿಗಳ ಚಿಕಿತ್ಸಕ ಬುದ್ಧಿಯ ಬೆಳವಣಿಗೆಗೆ ಬೇಕಾದಷ್ಟು ಅವಕಾಶ ದೊರೆಯುತ್ತದೆ.

## ಸಾಮಾಜಿಕ ವಿಷಯಗಳ ಅಭ್ಯಾಸ

(೧) ಮಾನವ ಜಾತಿಯ—ವಿಶೇಷತಃ ಹಿಂದುಸ್ತಾನದ—ಪ್ರಗತಿಯ

ವಿಷಯಕವಾದ ಆಸಕ್ತಿ, (೨) ತನ್ನ ಸಮಾಜ ಹಾಗು ತಾನು ಬಾಳುತ್ತಿರುವ ಪ್ರದೇಶದ ಭೌಗೋಲಿಕ ಜ್ಞಾನ, (೩) ತಾಯ್ನಾಡಿನ ಮಮತೆ; ತಾಯ್ನಾಡಿನ ಹಿಂದಿನ ಚರಿತ್ರೆಯ ಮೇಲೆ ಭಕ್ತಿ; ಮುಂದೆ ತನ್ನ ರಾಷ್ಟ್ರವು ಸತ್ಯ, ಪ್ರೇಮ, ನ್ಯಾಯಗಳ ತಳಹದಿಯ ಮೇಲೆ ಎಲ್ಲ ಸಮಾಜಗಳ ಐಕ್ಯದ ನೆಲೆವೀಡಾಗಲೆಂಬ ಹಾರೈಕೆ, (೪) ನಾಗರಿಕತೆಯ ಹಕ್ಕು ಬಾಧ್ಯತೆ ಹೊಣೆಗಾರಿಕೆಗಳ ತಿಳಿವಳಿಕೆ, ಇವುಗಳನ್ನೆಲ್ಲ ಬೆಳೆಸುವದೇ ಸಮಾಜಪರಿಜ್ಞಾನದ ಉದ್ದೇಶ. ಅಲ್ಲದೆ (೫) ನಂಬಿಗೆಯ ಗೆಳೆಯನೂ ವಿಶ್ವಾಸಿಗ ನೆರವಿಗನವನೂ ಆಗುವಂತೆ ವಿದ್ಯಾರ್ಥಿಯ ವೈಯಕ್ತಿಕ ಹಾಗು ಸಾಮಾಜಿಕ ಸದ್ಗುಣಗಳನ್ನು ಬೆಳೆಸುವದೂ ಇದರ ಉದ್ದೇಶ. ಜಗತ್ತಿನ ಸುತ ಧರ್ಮಗಳ ಮೂಲ ತತ್ವಗಳೆಲ್ಲ ಒಂದೇ ಎಂಬುದನ್ನು ತೋರಿಸಿ ಅವುಗಳ ಮೇಲಿನ ಗೌರವವನ್ನು ಬೆಳೆಸುವುದೂ ಉಳಿದೆಲ್ಲ ವಿಷಯುಗಳಷ್ಟೇ ಮಹತ್ವದ್ದು. ಸಾಮಾಜಿಕ ವಿದ್ಯಾಭ್ಯಾಸದಲ್ಲಿ ಇದು ಕೂಡ ಅಡಕವಾಗಿದೆ.

ಇವೆಲ್ಲವುಗಳ ಅಭ್ಯಾಸವು ಮಗುವಿನ ಪರಿಸ್ಥಿತಿ, ಅದರ ಸಮಸ್ಯೆಗಳು ಮುಂತಾದವುಗಳಿಂದಲೇ ಪ್ರಾರಂಭವಾಗಬೇಕು. ಮನುಷ್ಯರು ತಮ್ಮ ಆಸೆ-ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವ ವಿವಿಧ ಮಾರ್ಗಗಳಲ್ಲಿ ಮಗುವಿಗೆ ಆಸಕ್ತಿಯನ್ನು ಹುಟ್ಟಿಸಬೇಕು. ಸ್ತ್ರೀಪುರುಷರ ಜೀವನ, ಅವರ ಕಾರ್ಯಕಲಾಪ, ಇವುಗಳಲ್ಲಿ ಮಕ್ಕಳ ಕುತೂಹಲವನ್ನು ಹುಟ್ಟಿಸಲು ಇದು ಮೊದಲಿನ ಮೆಟ್ಟಿಲಾಗಬೇಕು.

(೧) ಹಿಂದುಸ್ತಾನದ ಇತಿಹಾಸದ ಮುಖ್ಯಾಂಶಗಳನ್ನಷ್ಟೇ ಕಲಿಸಬೇಕು. ಜನತೆಯ ಸಾಮಾಜಿಕ ಹಾಗು ಸಾಂಸ್ಕೃತಿಕ ಜೀವನದ ಮುಖ್ಯ ಮೆಟ್ಟಿಲುಗಳನ್ನು ಮನದಟ್ಟಾಗುವಂತೆ ಹೇಳಬೇಕು; ಮತ್ತು ಈ ಜೀವನವು ಕಡೆಗೆ ರಾಜಕೀಯ ಸಾಂಸ್ಕೃತಿಕ ಐಕ್ಯದ ಕಡೆಗೆ ಮುಂದುವರಿಯುತ್ತ ಬಂದಿರುವದನ್ನು ತೋರಿಸಬೇಕು. ಪ್ರೇಮ, ಸತ್ಯ, ನ್ಯಾಯ, ಸಹಕಾರ ಪ್ರಯತ್ನ, ರಾಷ್ಟ್ರೀಯ ಐಕ್ಯ, ಸಮಾನತೆ, ಮತ್ತು ಸೋದರ ಭಾವಗಳ ಧ್ಯೇಯಗಳಿಗೆ ಹೆಚ್ಚು ಮಹತ್ವ ಕೊಡಬೇಕು. ಈ ವಿಷಯಗಳ ವಿವೇಚನೆಯು ಕೆಳಗಿನ ತರಗತಿಯಲ್ಲಿ ಜೀವನಚರಿತ್ರೆಯ ಮೂಲಕ ಆಗಬೇಕು. ಮೇಲಿನ ತರಗತಿಯಲ್ಲಿ ಸಂಸ್ಕೃತಿ ಹಾಗು ಸಾಮಾಜಿಕ ವಿಷಯಗಳು ಮುಖ್ಯ

ವಾದವುಗಳಿರಬೇಕು, ಗತವೈಭವದ ಅಭಿಮಾನವು ದುರಭಿಮಾನದಲ್ಲಿ ಪರಿಣಮಿಸದಂತೆ ಎಚ್ಚರಿಕೆಯಿಂದಿರಬೇಕು. ಮಾನವಜಾತಿಯ ಸ್ವಾತಂತ್ರ್ಯಕ್ಕಾಗಿ ಹೆಣಗಾಡಿದ ಮಹಾವಿಭೂತಿಗಳು, ಶಾಂತಿಯ ಪ್ರಸ್ಥಾಪನೆಯಲ್ಲಿ ಅವರು ಪಡೆದ ಜಯಗಳು ಪಾಠಕ್ರಮದಲ್ಲಿ ಪ್ರಮುಖಸ್ಥಾನವನ್ನು ಹೊಂದಬೇಕು ಹಿಂಸೆ, ಕಪಟ, ಮೋಸ ಇವುಗಳಿಗಿಂತ ಅಹಿಂಸೆ ಶ್ರೇಷ್ಠವೆಂಬುದನ್ನು ತೋರಿಸುವ ಜೀವನದಿಂದ ಆಯ್ದ ನಿದರ್ಶನಗಳಿಗೆ ಹೆಚ್ಚು ಪ್ರಾಮುಖ್ಯವನ್ನು ಕೊಡಬೇಕು. ಭಾರತದ ರಾಷ್ಟ್ರೀಯ ಹೋರಾಟದ ಸಂಗಡ ಸಾಮಾಜಿಕ, ರಾಜಕೀಯ, ಆರ್ಥಿಕ ಸ್ವಾತಂತ್ರ್ಯಗಳ ಹೋರಾಟದ ಇತಿಹಾಸವನ್ನು ತಿಳಿಸಬೇಕು; ಅಂಥ ಕಠಿಣ ಸಂದರ್ಭದಲ್ಲಿ ತನ್ನ ಪಾಲಿನ ಹೊಣೆಯನ್ನು ಸಂತೋಷದಿಂದ ವಹಿಸುವಂತೆಯೂ ಬಂದೊದಗುವ ಕಷ್ಟಗಳನ್ನು ಸಹಿಸುವಂತೆಯೂ ಅದು ವಿದ್ಯಾರ್ಥಿಯನ್ನು ಪಳಗಿಸಬೇಕು. ರಾಷ್ಟ್ರೀಯ ಉತ್ಸವಗಳನ್ನೂ ರಾಷ್ಟ್ರೀಯ ವಾರಗಳನ್ನೂ ಪಾಲಿಸಬೇಕಲ್ಲದೆ, ಅವು ಪ್ರತಿಯೊಂದು ಸಾಲೆಯ ಜೀವನದ ಅಂಗವಾಗಬೇಕು.

(೨) ಸಾರ್ವಜನಿಕ ಉಪಯೋಗದ ನೌಕರಿಗಳು, ಪಂಚಾಯತಿ, ಸಹಕಾರೀ ಸಂಘಗಳು, ಇವುಗಳ ಕೆಲಸ, ಸರಕಾರೀ ಅಧಿಕಾರಿಗಳ ಕರ್ತವ್ಯಗಳು, ಜಿಲ್ಲಾ ಬೋರ್ಡಿನ ಅಥವಾ ಮುನಿಸಿಪಾಲಿಟಿಯ ಘಟನೆ, ಮತದ ಉಪಯೋಗ ಹಾಗು ಅದರ ಮಹತ್ವ, ಪ್ರಾತಿನಿಧಿಕ ಸಂಸ್ಥೆಗಳ ಬೆಳವಣಿಗೆ—ಇವೆಲ್ಲ ವಿದ್ಯಾರ್ಥಿಗಳಿಗೆ ಗೊತ್ತಿರಬೇಕು. ಇವುಗಳನ್ನು ಕುರಿತು ಕೊಡುವ ಶಿಕ್ಷಣವು ಆದಷ್ಟು ವಾಸ್ತವವಾಗಿರಬೇಕು; ಜೀವನಕ್ಕೆ ಪ್ರತ್ಯಕ್ಷವಾಗಿ ಸಂಬಂಧಿಸಿರಬೇಕು. ಸಾಲೆಯಲ್ಲಿ ವಿದ್ಯಾರ್ಥಿಗಳೇ ನಡೆಸಬಲ್ಲ ಸಂಘಗಳನ್ನು ಸ್ಥಾಪಿಸಬೇಕು. ಪ್ರಚಲಿತ ಸುದ್ದಿ-ಸಂಗತಿಗಳ ಪರಿಜ್ಞಾನವು ಎಲ್ಲ ವಿದ್ಯಾರ್ಥಿಗಳಿಗೂ ಇರಬೇಕು; ಈ ಬಗೆಯ ಜ್ಞಾನವು ಯಾವದೊಂದು ಪತ್ರಿಕೆಯ ವಿದ್ಯಾರ್ಥಿಗಳ ಸಹಕಾರ ಚರ್ಚೆಯಿಂದ ಬಂದದ್ದಿರಬೇಕು; ಆ ಪತ್ರಿಕೆ ಶಾಲೆಯಿಂದ ಪ್ರಕಟಿತವಾಗಿದ್ದರಂತೂ ಬಹಳ ಉತ್ತಮ.

(೩) ಜಗತ್ತಿನ ಭೂವಿವರಣೆಯ ಮುಖ್ಯಾಂಶ, ಹಿಂದುಸ್ತಾನದ ಭೂಗೋಲದ ವಿಶೇಷ ಅಭ್ಯಾಸ, ಹಿಂದುಸ್ತಾನಕ್ಕೂ ಇತರ ದೇಶಗಳಿಗೂ

ಈ ವಿಷಯಕವಾದ ಸಂಬಂಧ, ಇವೆಲ್ಲ ಗೊತ್ತಿರಬೇಕು. ಇನ್ನೂ ಹೆಚ್ಚು ವಿಶದಪಡಿಸುವದಾದರೆ—

(ಅ) ದೇಶದ ಬೆಳೆ, ಪ್ರಾಣಿಗಳು, ಜನಜೀವನ, ಮುಂತಾದುವೆಲ್ಲ ಭೌಗೋಲಿಕ ಪರಿಸ್ಥಿತಿಗಳಿಗೆ ಹೇಗೆ ಅವಲಂಬಿಸಿಕೊಂಡಿವೆಯೆಂಬುದನ್ನು ತೋರಿಸಬೇಕು. ಈ ಅಭ್ಯಾಸವನ್ನು ಸ್ಥಳಿಕ ಹಾಗು ವಿದ್ಯಾರ್ಥಿಗಳು ಕಂಡ, ಕೇಳಿದ ಸಂಗತಿಗಳನ್ನು ಉದಾಹರಿಸುತ್ತ ಮಾಡಿಸಬೇಕು; ಕಥೆ, ವರ್ಣನೆ, ಚಿತ್ರಾವಲೋಕನ, ವಸ್ತುವಿಮರ್ಶೆ ಮುಂತಾದವುಗಳ ಮೂಲಕ ಬೋಧಿಸಬೇಕು.

(ಆ) ಹವೆಯ ಸ್ವರೂಪ ಹಾಗೂ ಅದರ ಅಧ್ಯಯನವು ಹೊರಗಿನ ಕೆಲಸ; ಎಂದರೆ ಸೂರ್ಯನನ್ನು ಪ್ರತ್ಯಕ್ಷವಾಗಿ ನೋಡಿ ಅದರಿಂದ ಸಂಗತಿಗಳನ್ನು ಹೊರಡಿಸುವದು. ವರ್ಷದಲ್ಲಿ ಮಧ್ಯಾಹ್ನ ಸೂರ್ಯನ ಸ್ಥಾನದ ಬದಲಾವಣೆ, ಹವಾಮಾಪಕ ಯಂತ್ರವನ್ನು ತಿಳಿದುಕೊಳ್ಳುವ ಸಾಮರ್ಥ್ಯ; ಉಷ್ಣಮಾಪಕ ಹಾಗು ವಾಯುಮಾಪಕ ಯಂತ್ರಗಳು; ಹವಾಮಾನ ಹಾಗು ಹವೆಯ ಭಾರ ಗುರುತಿಸುವದು; ಮಳೆಗಾಲದ ದಿನಗಳನ್ನೂ ಸಾದಾ ದಿನಗಳನ್ನೂ ಅವುಗಳ ಹವಾಮಾನದ ಮೇಲಿಂದ ಗುರುತಿಸುವುದು; ಮಳೆ ಎಷ್ಟು ಬಿತ್ತೆಂಬುವನ್ನೂ, ಗಾಳಿ ಎತ್ತ ಬೀಸುತ್ತಿದೆಯೆಂಬುದನ್ನೂ, ಹಗಲು-ರಾತ್ರಿ ಎಷ್ಟು ಗಂಟೆಯವು ಎಂಬುದನ್ನೂ ವಿದ್ಯಾರ್ಥಿಯು ಕಲಿತುಕೊಳ್ಳಬೇಕು.

(ಇ) ನಕಾಶನನ್ನು ತಯಾರಿಸುವುದು ಹಾಗೂ ಅದರ ಅಭ್ಯಾಸ; ಪೃಥ್ವಿಯು ಗುಂಡಗಿದೆಯೆಂಬ ತಿಳುವಳಿಕೆ; ಸುತ್ತುಮುತ್ತಲಿನ ಸ್ಥಳದ ಭೌಗೋಲಿಕ ಸ್ಥಿತಿಯು ನಕಾಶ ಸಂಕೇತ-ಸಂಜ್ಞೆಗಳ ಗುರುತು

(ಈ) ಹೋರೆ-ಉದ್ಯೋಗಗಳ ತಿಳಿವು; ತಾನಿರುವ ಸ್ಥಾನದ ಒಕ್ಕಲುತನ, ಕೈಗಾರಿಕೆ, ಹೊಲ, ಗಿರಣಿಗಳಿಗೆ ಹೋಗಿ ನೋಡಿ ತಿಳಿದುಕೊಳ್ಳುವದು; ಆರ್ಥಿಕ ಸ್ವಾವಲಂಬನ ಹಾಗು ಪರಸ್ಪರ ಅವಲಂಬನೆ; ತರತರದ ಬೇಸಾಯ ಹಾಗು ಭೌಗೋಲಿಕ ಪರಿಸ್ಥಿತಿಗೆ ಅನುಕೂಲವಿದ್ದ ಉದ್ಯಮ, ಹಿಂದುಸ್ಥಾನದ ಮುಖ್ಯ ಉದ್ಯಮಗಳು.

## ಸಾಮಾನ್ಯ ವಿಜ್ಞಾನ

ಜಗತ್ತಿನ ವಿಷಯವಾಗಿ ಹುಡುಗರಲ್ಲಿ ಜಾಣತನದ ಹಾಗು ಸರಸವಾದ

ಪ್ರಾಕೃತಿಕ ದೃಷ್ಟಿಯನ್ನು ಬೆಳೆಸುವದು ಒಂದು ಉದ್ದೇಶ. ಅಲ್ಲದೆ ಸುಸ್ಪಷ್ಟ ಅವಲೋಕನೆ ಮತ್ತು ಪ್ರಯೋಗಗಳಿಂದ ಅನುಭವ ಪಡೆಯುವ ಪ್ರವೃತ್ತಿಯನ್ನು ವಿದ್ಯಾರ್ಥಿಗಳಲ್ಲಿ ಹುಟ್ಟಿಸಬೇಕು. ಪ್ರಾಕೃತಿಕ ದೃಶ್ಯಗಳು, ಮಾನವನಿಗೆ ವಿಜ್ಞಾನದಿಂದಾಗುವ ಸಹಾಯ ಮತ್ತು ಇವುಗಳಲ್ಲಿ ಅಡಕವಾಗಿರುವ ಮಹತ್ವದ ವೈಜ್ಞಾನಿಕ ತತ್ವಗಳನ್ನು ತಿಳಿದುಕೊಳ್ಳಲು ಅವನನ್ನು ಸಮರ್ಥನನ್ನಾಗಿ ಮಾಡಬೇಕು. ಶ್ರೇಷ್ಠರಾದ ವಿಜ್ಞಾನಿಗಳ ಜೀವನದಲ್ಲಿ ಈ ತತ್ವಗಳು ಹೇಗೆ ಮಹತ್ವದ ಸನ್ನಿವೇಶಗಳಾದವೆಂಬುದನ್ನೂ, ಅದಕ್ಕಾಗಿ–ಸತ್ಯವನ್ನು ಹೊರಗೆಡುಹಲು ಅವರು ಹೇಗೆ ಸ್ವಾರ್ಥತ್ಯಾಗ ಮಾಡಿದರೆಂಬುದನ್ನೂ ಹೇಳಿದರೆ ಬಾಲಕರಿಗೆ ಹೆಚ್ಚು ಮನೋರಂಜಕವಾಗುತ್ತದೆ.

ಅಭ್ಯಾಸ ಕ್ರಮವು ಬೇರೆ ಬೇರೆ ವಿಜ್ಞಾನಶಾಸ್ತ್ರಗಳಿಂದ ಆರಿಸಿದ ಕೆಳಗೆ ಕಾಣಿಸಿದ ವಿಷಯಗಳನ್ನು ಒಳಗೊಂಡಿರಬೇಕು

**ಪ್ರಕೃತಿ ವಿಮರ್ಶೆ**:—ತನ್ನ ಸುತ್ತುಮುತ್ತಲಿನ ಗಿಡ-ಬೆಳೆ-ಪಕ್ಷಿ-ಪ್ರಾಣಿಗಳ ಪರಿಜ್ಞಾನ. (೨) ಋತುಗಳ ಬದಲಾವಣೆ, ಅದರಿಂದ ಗಿಡ–ಪಶು–ಪಕ್ಷಿ ಮನುಷ್ಯರ ಮೇಲೆ ಆಗುವ ಪರಿಣಾಮ. (೩) ಬೇರೆ ಬೇರೆ ಋತುಗಳಲ್ಲಿ ಬರುವ ಬೆಳೆಗಳು.

**ವನಸ್ಪತಿ ಶಾಸ್ತ್ರ**:—ಸಸ್ಯಜೀವನದ ಬೇರೆ ಬೇರೆ ಭಾಗ, ಅವುಗಳ ಕೆಲಸ; ಮೊಳಕೆಯೊಡೆಯುವದು, ಬೆಳೆಯುವದು, ಫಲವಾಗುವದು, ಹಾಗು ಆ ಸಸ್ಯಜೀವನದ ಸಂತಾನಾಭಿವೃದ್ಧಿ; ಶಾಲೆಯ ತೋಟ, ಶಾಲೆಯ ಸುತ್ತುಮುತ್ತಲಿನ ಹೊಲಗಳು ಮುಂತಾದುವುಗಳನ್ನು ವಿದ್ಯಾರ್ಥಿಗಳಿಗೆ ಹಸಿ, ಕಾವು ಮತ್ತು ಬೆಳಕಿನ ಬದಲಾವಣೆಯಿಂದ ಸಸ್ಯ ಜೀವನದ ಮೇಲಾಗುವ ಪರಿಣಾಮವನ್ನೂ ಬೀಜ ಗೊಬ್ಬರಗಳಲ್ಲಿರುವ ಬೇರೆ ಬೇರೆ ತರಗತಿಗಳನ್ನೂ, ತಿಳಿಸುವದಕ್ಕಾಗಿ ಉಪಯೋಗಿಸುವದು ಹಾಗು ಮೇಲೆ ಕಾಣಿಸಿದ ಹೊಲತೋಟಗಳಲ್ಲಿ ವಿದ್ಯಾರ್ಥಿಗಳಿಂದ ಕೆಲಸ ಮಾಡಿಸುವದು.

**ಪ್ರಾಣಿಶಾಸ್ತ್ರ**:— ಕ್ರಿಮಿ–ಕೀಟಕಗಳು, ಹಾವು–ಹುಳಗಳು, ಹಕ್ಕಿಪಕ್ಕಿಗಳು ಇವುಗಳಿಗೂ ಮನುಷ್ಯನಿಗೂ ಇರುವ ಶತ್ರು–ಮಿತ್ರಭಾವ.

**ಶರೀರಶಾಸ್ತ್ರ**:—ಮಾನವ ಶರೀರ, ಅದರ ಅವಯವಗಳು, ಅವುಗಳ ಕಾರ್ಯ,

**ಆರೋಗ್ಯ ಶಾಸ್ತ್ರ:** (೧) ಸ್ವಂತ ದೇಹದ ಆರೋಗ್ಯ; ಹಲ್ಲು, ನಾಲಿಗೆ, ಉಗುರು, ಕಣ್ಣು, ಕೂದಲು, ಮೂಗು, ಚರ್ಮ, ಅರಿವೆ ಇವುಗಳ ಶುಚಿತ್ವ (೨) ಮನೆ ಹಾಗು ತಾನಿದ್ದ ಊರಿನ ಸ್ವಚ್ಛತೆ, ಆರೋಗ್ಯಪಾಲನೆ ಹಾಗು ಮಲಮೂತ್ರಗಳನ್ನು ಸಾಗಿಸುವದು (೩) ಶುದ್ಧ ನೀರು, ಊರ ಬಾವಿ. (೪) ಶುದ್ಧ ಗಾಳಿ, ಹವೆಯನ್ನು ಶುದ್ಧ ಮಾಡುವಲ್ಲಿ ಗಿಡಗಳು ಮಾಡುವ ಕೆಲಸ, ಸರಿಯಾಗಿ ಉಸಿರಾಡಿಸುವದು. (೫) ಆರೋಗ್ಯಕರವಾದ ಹಾಗು ಅನಾರೋಗ್ಯಕರವಾದ ಆಹಾರ, ಪ್ರಕೃತಿಯನ್ನು ಸರಿಯಾಗಿ ಇಡುವ ಆಹಾರ. (೬) ಪ್ರಥಮ ಚಿಕಿತ್ಸೆ ಹಾಗು ಸುಲಭ ಉಪಾಯಗಳು. (೭) ಸಾಮಾನ್ಯ ಸೊಂಕುರೋಗಗಳು, ಅಂಟುರೋಗ ಮುಂತಾದವುಗಳಿಂದ ರಕ್ಷಿಸಿಕೊಳ್ಳುವ ಉಪಾಯುಗಳು. (೮) ಪವಿತ್ರ ನಡಾವಳಿಯು ಆರೋಗ್ಯವನ್ನು ರಕ್ಷಿಸುವದೆಂಬ ತಿಳಿವು.

**ಶಾರೀರಿಕ ಶಿಕ್ಷಣ:**— ಕವಾಯಿತು, ವ್ಯಾಯಾಮ, ಆಟಗಳಿಗೆ— ವಿಶೇಷತಃ ದೇಶೀ ಆಟಗಳಿಗೆ— ಹೆಚ್ಚು ಉತ್ತೇಜನ ಕೊಡಬೇಕು.

**ರಸಾಯನ ಶಾಸ್ತ್ರ:**— ಗಾಳಿ, ನೀರು, ಆಮ್ಲಗಳು, ಕ್ಷಾರಗಳು, ಉಪ್ಪು ಮುಂತಾದ ಕ್ಷಾರಗಳಿಗೆ ಸಂಬಂಧಪಟ್ಟ ರಸಾಯನಶಾಸ್ತ್ರ.

**ನಕ್ಷತ್ರಗಳ ಜ್ಞಾನ:**- ಅವುಗಳ ಗತಿ, ಎಂದರೆ ದಿಕ್ಕು ಹಾಗು ರಾತ್ರಿಯ ವೇಳೆಯನ್ನು ಗುರುತಿಸುವ ಮಟ್ಟಿಗಾದರೂ ನಕ್ಷತ್ರಗಳ ಜ್ಞಾನ ಇರಬೇಕು

**ಕಥೆಗಳು:**— ಶ್ರೇಷ್ಠ ವಿಜ್ಞಾನಿಗಳ ಹಾಗು ದೇಶಶೋಧಕರ ಕತೆಗಳು ಹಾಗು ಮಾನವಜಾತಿಯ ಸೌಖ್ಯಕ್ಕಾಗಿ ಅವರಿಂದಾದ ಸಹಾಯ.

## ಚಿತ್ರ ಬರೆಯುವದು

೧ ರೂಪಗಳನ್ನೂ ಬಣ್ಣಗಳನ್ನೂ ಬೇರೆ ಬೇರೆಯಾಗಿ ಕಂಡುಹಿಡಿಯಲು, ಪರಿಶೀಲಿಸಲು ಕಣ್ಣಿಗೆ ಶಿಕ್ಷಣ ಕೊಡುವದು. ೨. ರೂಪಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಶಕ್ತಿ ಬೆಳೆಸುವದು. ೩. ವಿಶ್ವದಲ್ಲಿಯೂ ಕಲೆಯಲ್ಲಿಯೂ ಸೌಂದರ್ಯವನ್ನು ಕಂಡುಕೊಂಡು, ಅದರ ಲಾಲಸೆಯನ್ನು ಅಭಿವೃದ್ಧಿಗೊಳಿಸುವದು ೪. ಬಾಲಕನಲ್ಲಿ ಸುಪ್ತವಾಗಿರುವ ಚಿತ್ರಕಲೆಯ

ಶಕ್ತಿಯನ್ನು ಅವನಿಗೆ ಬೇಕಾದ ವಸ್ತುಗಳನ್ನು ಚಿತ್ರಿಸುವದರಿಂದಲೂ ಅದಕ್ಕೆ ಅಲಂಕಾರ ಕೊಡುವದರಿಂದಲೂ ಹೊರಹೊಮ್ಮಿಸುವದು. ೫ ಕೈಯಿಂದ ತಯಾರಿಸಬೇಕಾದ ವಸ್ತುಗಳ ನಕ್ಷೆ ಬರೆಯುವ ಶಕ್ತಿಯನ್ನು ಬೆಳಸುವದು, ಇವೇ ಮೊದಲಾದವುಗಳು ಚಿತ್ರಲೇಖನದ ಉದ್ದೇಶಗಳಾಗಿರಬೇಕು

ಈ ಉದ್ದೇಶಗಳು ಮುಂದೆ ಕಾಣಿಸಿದ ಸಂಗತಿಗಳಿಂದ ನೆರವೇರುವವು. ೧. ಓದಿದ-ನೋಡಿದ ವಸ್ತುಗಳನ್ನು ಹುಡುಗರು ಚಿತ್ರಿಸುವದು ೨. ವಸ್ತುಗಳ ಚಿತ್ರ ಹಾಗು ನೆನಪಿನ ಚಿತ್ರ. ಉದಾ: ಗಿಡ, ಪ್ರಾಣಿ ಅಥವಾ ಮನುಷ್ಯರ ಆಕಾರ ಇವೆಲ್ಲ ಸಾಮಾನ್ಯ ವಿಜ್ಞಾನ ಹಾಗೂ ಕೈಕೆಲಸ ಇವುಗಳಿಗೆ ಹೊಂದಿಕೆಯಾಗಬೇಕು. ೩ ರೇಖಾಚಿತ್ರ-ನಕಾಶ ಮುಂತಾದವು. ೪ ಅಳತೆಯ ಚಿತ್ರಗಳು ಅಳತೆ—ಮಾಪನ್ನು ತೋರಿಸುವ ರೇಖಾಚಿತ್ರ.

ಈ ಚಿತ್ರಲೇಖನ ಕೆಲಸವು ಮೊದಲಿನ ನಾಲ್ಕು ವರ್ಷಗಳಲ್ಲಿ ಓದುವ ಪಾಠಕ್ಕೂ ಪ್ರಕೃತಿ ಅಭ್ಯಾಸದಲ್ಲಿ ಬರುವ ಪ್ರಾತಿನಿಧ್ಯಕ್ಕೂ ಹೊಂದಿಕೊಂಡಿರಬೇಕು. ಕಡೆಯ ಮೂರು ವರ್ಷ ಚಿತ್ರಲೇಖನ ಅದರಲ್ಲಿ ಸೌಂದರ್ಯ ಬೆಳಸುವ ಪ್ರವೃತ್ತಿ, ಯಂತ್ರಲೇಖನ ಇವುಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು; ಅದರಿಂದ ವಿದ್ಯಾರ್ಥಿಗಳು ವ್ಯಾವಹಾರಿಕ ಚಿತ್ರಲೇಖನದ ಜ್ಞಾನವನ್ನು ಸಂಪಾದಿಸುವಂತಾಗಬೇಕು.

### ಸಂಗೀತ

ವಿದ್ಯಾರ್ಥಿಗಳಿಗೆ ಸಂಗೀತ ಕಲಿಸುವ ಉದ್ದೇಶವೆಂದರೆ ಅವರು ಕರ್ಣಮಧುರವಾಗಿ ಹಾಡಬೇಕೆನ್ನುವದು ಹಾಗು ಅವರಲ್ಲಿ ರಸವತ್ತಾದ ಸಂಗೀತದಲ್ಲಿ ಶ್ರದ್ಧೆ ಹುಟ್ಟಿಸುವದು. ಮಗುವಿನಲ್ಲಿ ತಾಳಹಾಕಿ ವೇಳೆಗೆ ಸರಿಯಾಗಿ ಕ್ರಮಬದ್ಧವಾಗಿ ಲಯಪೂರ್ಣವಾಗುವಂತೆ ಸಂಗೀತದ ಲಾಲಸೆಯನ್ನು ಬೆಳೆಸಬೇಕು. ಸ್ವಾಭಾವಿಕವಾಗಿ ನಡೆಯುವಾಗ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕುತ್ತ ಹೋಗುವ ಪರಿಪಾಠ ಈ ಸಾಧನೆಗೆ ತುಂಬಾ ಸಹಕಾರಿಯಾಗಿದೆ

ಕಲಿಸುವ ಹಾಡುಗಳು ಸ್ಫೂರ್ತಿದಾಯಕವಾಗಿರಬೇಕು; ಅತ್ಯುತ್ತಮವಾಗಿರಬೇಕು. ಆ ಹಾಡುಗಳು ಪವಿತ್ರವಾದ ಸ್ಫೂರ್ತಿದಾಯಕವಾದ ವಿಷಯಗಳನ್ನೂ, ಆ ವಿಷಯದ ಕಲಾಪೂರ್ಣ ವಿವರಣೆಯನ್ನೂ ಒಳಗೊಂಡಿರಬೇಕು.

## ಹಿಂದುಸ್ತಾನಿ

ಶಾಲೆಯ ವೇಳಾಪತ್ರಿಕೆಯಲ್ಲಿ ಹಿಂದುಸ್ತಾನಿಯನ್ನು ಒತ್ತಾಯದ ಪಾಠವಾಗಿ ಸೇರಿಸುವಲ್ಲಿ ಒಂದು ಉದ್ದೇಶವಿದೆ. ಅದೆಂದರೆ ಈ ರಾಷ್ಟ್ರೀಯ ಶಾಲೆಗಳಲ್ಲಿ ಓದಿಕೊಂಡ ಎಲ್ಲ ಹುಡುಗರಿಗೆ ಸಾಮಾನ್ಯವಾದ ಒಂದು ಭಾಷೆಯ ತಕ್ಕಮಟ್ಟಿನ ಪರಿಚಯವಿರಬೇಕೆಂಬುದು. ಹುಡುಗರು ದೊಡ್ಡವರಾಗಿ ನಾಗರಿಕರಾಗ ರಾಷ್ಟ್ರದ ಯಾವುದೇ ಭಾಗದ ಜನರೊಂದಿಗೆ ಸಹಕರಿಸಲು ಸಮರ್ಥರಾಗಬೇಕು. ಈ ಭಾಷೆಯನ್ನು ಕಲಿಸುವಾಗ ಶಿಕ್ಷಕನು ಮುಂದಿನ ಮಾತನ್ನು ಹುಡುಗನ ಮನದಲ್ಲಿ ಚೆನ್ನಾಗಿ ಬಿಂಬಿಸಬೇಕು. ಅದೆಂದರೆ ಹಿಂದುಸ್ತಾನಿಯು ಹಿಂದೂ ಮುಸಲ್ಮಾನರ ನಡುವಿನ ಸಂಸ್ಕೃತಿಯ ಐಕ್ಯದ ಫಲವೆಂಬುದು ಆ ಭಾಷೆಯ ಉಚ್ಚ ಮೆಟ್ಟಲುಗಳು ಹಿಂದೂ–ಮುಸಲ್ಮಾನರ ಅತ್ಯುತ್ತಮ ವಿಚಾರಗಳ ಹಾಗು ಆಸೆ-ಆಕಾಂಕ್ಷೆಗಳ ಆಗರವಾಗಿವೆ. ಆ ಭಾಷೆಯ ಸಂಪತ್ತಿನ ವಿಷಯವಾಗಿ ವಿದ್ಯಾರ್ಥಿಯು ಅಭಿಮಾನ ತಾಳುವದನ್ನು ಕಲಿಯಬೇಕು. ಹಾಗು ಆ ಭಾಷೆಯ ಮನಃಪೂರ್ವಕ ಸೇವೆ ಮಾಡಬೇಕೆಂಬ ಅಪೇಕ್ಷೆ ಅವನಲ್ಲಿ ಹುಟ್ಟಬೇಕು.

ಹಿಂದುಸ್ತಾನಿಯೇ ಮಾತೃಭಾಷೆಯಾಗಿರುವ ಪ್ರದೇಶದಲ್ಲಿ ಅಲ್ಲಿಯ ಹುಡುಗರೂ ಶಿಕ್ಷಕರೂ ಉರ್ದು ಹಾಗು ಹಿಂದೀ ಲಿಪಿಗಳೆರಡನ್ನೂ ಕಲಿಯಬೇಕು; ಎಂದರೆ ಅವರು ಉರ್ದು ಹಾಗು ಹಿಂದಿಯಲ್ಲಿ ಬರೆದ ಪುಸ್ತಕಗಳನ್ನು ಓದಲು ಸಮರ್ಥರಾಗುತ್ತಾರೆ. ಹಿಂದುಸ್ತಾನಿಯು ಮಾತೃಭಾಷೆಯಲ್ಲದ ಪ್ರದೇಶದಲ್ಲಿ ಪ್ರಾಂತದ ಭಾಷೆ ಮಾತೃಭಾಷೆಯಾಗುತ್ತದೆ ಆಗ ಶಾಲೆಯಲ್ಲಿ ಶಿಕ್ಷಣದ ೫ನೇ ಹಾಗು ೬ನೇ ವರ್ಷ ಹಿಂದುಸ್ತಾನಿಯನ್ನು ಒತ್ತಾಯವಾಗಿ ಕಲಿಸಲಾಗುವದು ಶಿಕ್ಷಕರು ಮಾತ್ರ ಎರಡೂ ಬಗೆಯ ಲಿಪಿಗಳನ್ನು ಕಲಿಯುವುದು ಅವಶ್ಯವಿದೆ. ಏಕೆಂದರ ವಿದ್ಯಾರ್ಥಿಗಳಿಗೆ ಅವರು ಕಲಿಸಬೇಕಾಗುತ್ತದೆ. ಒಟ್ಟಾರ, ಪ್ರತಿಯೊಂದು ಸಾರ್ವಜನಿಕ ಸಾಲೆಯಲ್ಲಿ ಎರಡೂ ಬಗೆಯ ಲಿಪಿಗಳನ್ನು ಕಲಿಸುವ ಯೋಗ್ಯ ವ್ಯವಸ್ಥೆ ಇರಬೇಕು.

ಶಾಲೆಯ ಐದನೆಯ ತರಗತಿಯ ವರೆಗೆ ಹುಡುಗ–ಹುಡುಗಿಯರಿಬ್ಬರಿಗೂ ಕಲಿಸಲಾಗುವ ಅಭ್ಯಾಸವು ಸಾಮಾನ್ಯವಾಗಿ ಒಂದೇ ಬಗೆಯದು.

ನಾಲ್ಕು-ಐದನೆಯ ತರಗತಿಗಳಲ್ಲಿ ಬಾಲಿಕೆಯರ ವಿಜ್ಞಾನಪಾಠಗಳಲ್ಲಿ ಮನೆ ಗೆಲಸದ ನಿರ್ವಹಣೆಗೆ ಬೇಕಾಗುವ ಶಿಕ್ಷಣವನ್ನೂ ಸೇರಿಸುವ ಬದಲಾವಣೆ ಮಾಡಬೇಕು. ಆರು ಮತ್ತು ಏಳನೇ ತರಗತಿಗಳಲ್ಲಿ ಬಾಲಿಕೆಯರಿಗೆ ಮುಖ್ಯ ಉದ್ಯಮದ ಬದಲು ಹೆಚ್ಚಿನ ತರಗತಿಯ ಗೃಹವಿಜ್ಞಾನವನ್ನು ಕಲಿಯಲು ಸ್ವಾತಂತ್ರ್ಯವಿದೆ.

## ೩. ಶಿಕ್ಷಕರ ಶಿಕ್ಷಣ.

ಈ ಯೋಜನೆ ಶ್ರೇಯಸ್ಕರವಾಗುವ ಬಹು ಭಾಗವೆಲ್ಲ ಉಪಾಧ್ಯಾಯರಿಗೆ ಕೊಡುವ ಯೋಗ್ಯ ಶಿಕ್ಷಣದಲ್ಲಿಯೇ ಇದೆ. ಸಾಮಾನ್ಯವಾಗಿ ಹುಡುಗರಿಗೆ ಕೊಡುವ ಶಿಕ್ಷಣದ ಮಹತ್ವವು, ಕಲಿಸುವ ಶಿಕ್ಷಕರ ಯೋಗ್ಯತೆಯನ್ನು ಹೊಂದಿಕೊಂಡಿದೆ. ಶಿಕ್ಷಣ ಪದ್ಧತಿಯ ಸಂಪೂರ್ಣ ಬದಲಾವಣೆಯ ಈ ಸಮಯದಲ್ಲಿ ಈ ಪುನರ್ವ್ಯವಸ್ಥೆಯನ್ನು ಬಳಕೆಗೆ ತರುವವರು ಶಿಕ್ಷಕರೇ ಆದುದರಿಂದ ಅವರ ಮಹತ್ವವು ಅತ್ಯಧಿಕವಾಗಿದೆ. ಆದ್ದರಿಂದ ಈ ಶಿಕ್ಷಣ ಪದ್ಧತಿಯನ್ನು ಪ್ರೇರೇಪಿಸಿರುವ ಶೈಕ್ಷಣಿಕ ಹಾಗು ಸಾಮಾಜಿಕ ತತ್ವಗಳನ್ನು ಶಿಕ್ಷಕರು ಅರಿತವರಾಗಿರಬೇಕು. ಈ ಯೋಜನೆಯನ್ನು ಕಾರ್ಯಕಾರಿ ಮಾಡಲು ಉತ್ಸಾಹವುಳ್ಳವರಾಗಿರಬೇಕು.

ಪುಸ್ತಕವಿದ್ಯೆಯನ್ನಷ್ಟೇ ಅಲ್ಲದೆ ಕೈಕೆಲಸವನ್ನೂ ಕಲಿಸಬೇಕಾಗಿರುವದರಿಂದ, ಉಪಾಧ್ಯಾಯರಿಗೆ ಶಿಕ್ಷಣ ಕೊಡುವಾಗ ಮೂಲ ಕೈಗಾರಿಕೆಯ ಸಾಕಷ್ಟು ಜ್ಞಾನ ಹಾಗು ನಿಪುಣತೆ ಬರುವಂತೆ ಏರ್ಪಾಡು ಮಾಡಬೇಕು.

ಅವರಿಗೆ ಕಲಿಸುವ ಪದ್ಧತಿಗಳೂ, ವಿಷಯಪ್ರವೇಶದ ರೀತಿಯೂ ಬೇರೆಯೇ ಇವೆ. ಆ ಪದ್ಧತಿ-ರೀತಿಗಳಿಂದ ಬೇರೆ ಬೇರೆ ಪಾಠವಿಷಯಗಳ ವಿವೇಚನೆ ಮಾಡಬೇಕಾಗುತ್ತದೆ. ಆದರೆ ಪಾಠವಿಷಯಗಳು ಒಂದಕ್ಕೊಂದು ಹೊಂದಿಕೆಯಿಲ್ಲದೆ ಬಿಡಿಬಿಡಿಯಾಗಿ ನಿಲ್ಲುವ-ಸಾಹಿತ್ಯ, ಗಣಿತ, ವಿಜ್ಞಾನಗಳಂತಹ ಜ್ಞಾನದ ಬೇರೆ ಬೇರೆ ವಾಹಿನಿಗಳಲ್ಲ; ಅವು ಕ್ರಮಾಕ್ರಮವಾಗಿ ಬೆಳೆದು ವಿಕಾಸ ಹೊಂದುತ್ತಿರುವ ಒಂದೇ ಉದ್ದೇಶ ಸಾಧನೆಯ ಅಂಗಗಳಾಗಿವೆ; ಅನ್ಯೋನ್ಯ ಸಂಬಂಧವನ್ನು ಪಡೆದಿವೆ. ಆದುದರಿಂದ ಉಪಾಧ್ಯಾಯರಿಗೆ ಶಿಕ್ಷಣವು ಅವಶ್ಯವಿದೆ. ಒಂದಕ್ಕೊಂದು ಸಂಬಂಧವುಳ್ಳ ಪೂರಕವಾದ

ಅಭ್ಯಾಸದ ಪಟ್ಟಿಯನ್ನೂ ಪಠ್ಯವಿಷಯ ವಿಧಾನಗಳನ್ನೂ ಕಲ್ಪಿಸುವಲ್ಲಿ ಶಿಕ್ಷಕರಿಗೆ ಕೊಡುವ ಶಿಕ್ಷಣವು ಅತ್ಯಂತ ಸಹಾಯಕವಿದೆ; ಆ ಮೂಲಕ ಅದು ಜೀವನ-ಶಿಕ್ಷಣ-ವ್ಯವಹಾರಗಳ ನಡುವೆ ಸಂಬಂಧವನ್ನು ಬೆಳೆಸುವುದು.

ಅದರಂತೆ ಅವರಿಗೆ ತಮ್ಮ ಸುತ್ತುಮುತ್ತಲಿನ ಜನಜೀವನದಲ್ಲಿ ಆಸಕ್ತಿ, ಜನರ ಕಾರ್ಯಕಲಾಪಗಳಲ್ಲಿ ಜಾಣತನದ ಉತ್ಸುಕತೆ ಇರಬೇಕು; ಶಾಲೆಗೂ ಸಮಾಜಕ್ಕೂ ಇರುವ ನಿಕಟಸಂಬಂಧದ ಜ್ಞಾನವೂ ಅವರಿಗೆ ಅತ್ಯಾವಶ್ಯಕ.

ಈ ಹೊಸ ಯೋಜನೆಯನ್ನು ತಯಾರಿಸುವಾಗಿನ ಉದ್ದೇಶ-ಉತ್ಸಾಹಗಳಿಗೆ ಅನುಗುಣವಾಗಿ ಇದನ್ನು ಕಾರ್ಯರಂಗಕ್ಕೆ ತರುವದಾದರೆ, ಮೇಲೆ ಕಾಣಿಸಿದ ಸಂಗತಿಗಳಲ್ಲದೆ ಉಪಾಧ್ಯಾಯರ ಶಿಕ್ಷಣದಲ್ಲಿ ಅವಶ್ಯವಾದ ಕೈಗಾರಿಕೆ ವಿಷಯಗಳು ನಿಶ್ಚಯವಾಗಿಯೂ ಒಳಗೊಂಡಿರಬೇಕು.

ಉಪಾಧ್ಯಾಯರ ಶಿಕ್ಷಣಾಲಯಗಳಲ್ಲಿ ಪ್ರವೇಶ ದೊರೆಯಬೇಕಾದರೆ, ಶಿಕ್ಷಕನಾಗುವವನು ಮ್ಯಾಟ್ರಿಕ್ ಪರೀಕ್ಷೆಯ ವರೆಗೆ ಸರಕಾರದ ಇಲ್ಲವೆ ರಾಷ್ಟ್ರೀಯ ಶಿಕ್ಷಣಸಂಸ್ಥೆಗಳಲ್ಲಿ ಓದಿಕೊಂಡಿರಬೇಕು. ಇಲ್ಲವೆ ಮುಲ್ಕೀ ಪರೀಕ್ಷೆ ತೇರ್ಗಡೆಯಾದ ಮೇಲೆ ಎರಡು ವರ್ಷಗಳ ವರೆಗೆ ಕಲಿಸುವ ಅನುಭವ ಪಡೆದಿರಬೇಕು.

## ಶಿಕ್ಷಕರ ಪೂರ್ಣ ವಿದ್ಯಾಭ್ಯಾಸದ ಪಾಠಕ್ರಮ.

೧ (ಅ) ಹತ್ತಿ ಅಥವಾ ಉಣ್ಣೆ ಬೆಳೆಯುವದು, ಬಿಡಿಸುವದು, ಹಿಂಜುವದು, ನೂಲುವದು, ಹಾಗು ತಯಾರಿಸುವದು.

(ಆ) ರಾಟೆಯ ಅಥವಾ ಮೂಲ ಕೈಗಾರಿಕೆಯೆಂದು ಆಯ್ದ ಉದ್ಯಮಕ್ಕೆ ಬೇಕಾಗುವ ಯಂತ್ರಗಳ ಮತ್ತು ಸಾಧನಗಳ ಯಂತ್ರವಿಜ್ಞಾನ.

(ಇ) ಹಳ್ಳಿಯ ಕೈಗಾರಿಕೆಯ-ಮುಖ್ಯವಾಗಿ ಆಯ್ದುಕೊಂಡ ಮೂಲ ಕಸುಬಿನ-ಆರ್ಥಿಕ ಅಭ್ಯಾಸ.

(ಈ) ಮೂಲ ಕೈಗಾರಿಕೆಗೆ ಸಾಕಾಗುವಷ್ಟು ಬಡಿಗತನದ ಸಾಮಾನ ಜ್ಞಾನ.

೨. ಕೆಳಗೆ ಕಾಣಿಸಿದ ಕೆಲವು ಮುಖ್ಯ ಉದ್ಯಮಗಳಲ್ಲಿ ಶಿಕ್ಷಣ.

ಅ) ನೂಲುವದು ಹಾಗು ನೇಯುವದು.

ಆ) ಒಕ್ಕಲುತನ.

ಇ) ಕಾಯಿಪಲ್ಲೆ ಹಾಗು ಹೂಹಣ್ಣುಗಳನ್ನು ಬೆಳೆಸುವದು.

ಈ) ಬಡಿಗತನ.

ಉ) ಆಟಿಗೆ ಸಾಮಾನು ತಯಾರಿಸುವದು.

ಊ) ಚರ್ಮದ ಕೆಲಸ.

ಋ) ಕಾಗದ ಮಾಡುವದು. ಅಥವಾ ಆ ಆ ಸ್ಥಳಕ್ಕೆ-ಪರಿಸ್ಥಿತಿಗೆ ಅನುಕೂಲವಾದ ಯಾವುದಾದರೂ ಕೈಗಾರಿಕೆ.

೩. ಶಿಕ್ಷಣ ತತ್ವಗಳು ಕೆಳಗೆ ಕಾಣಿಸಿವ ಸಂಗತಿಗಳನ್ನು ಒಳಗೊಂಡಿರಬೇಕು.

ಅ) ಫಲದಾಯಕವಾದ ಕೆಲಸದ ಮೂಲಕ ಶಿಕ್ಷಣ ಕೊಡಬೇಕೆಂಬ ಮೂಲತತ್ವ.

ಆ) ಸಮಾಜದೊಂದಿಗೆ ಇರುವ ಶಾಲೆಯ ಸಂಬಂಧ.

ಇ) ಮಗುವಿನ ಮನಶ್ಶಾಸ್ತ್ರದ ರೂಪರೇಷೆಗಳು—ಸಾಧ್ಯವಿದ್ದ ಮಟ್ಟಿಗೆ ವಾಸ್ತವವಾದವುಗಳು- ಕುಶಲತೆ ಪಡೆಯುವ ಮನಸ್ಸಿನ ಧರ್ಮ.

ಈ) ಕಲಿಸುವ ನೀತಿ ಪದ್ಧತಿಗಳಲ್ಲಿ ಹೊಸ ಯುಕ್ತಿ ಹಂಚಿಕೆಗಳು ಹಾಗು ಪರಿಪೂರ್ಣಗೊಳಿಸುವ ಉದ್ದೇಶವು ಹೆಚ್ಚಾಗಿರಬೇಕು.

ಉ) ಹೊಸ ಶಿಕ್ಷಣದ ಉದ್ದೇಶವು, ಜೀವನದ ನಿಜವಾದ ಇರುವಿಕೆಗೆ ಸಂಬಂಧಿಸಿ ಅಭ್ಯಾಸ ಮಾಡುವುದಾಗಬೇಕು.

ಊ) ಹಳ್ಳಿವಾಸದ ವಾಸ್ತವಿಕ ಸಮಸ್ಯೆಯನ್ನು ಗಮನದಲ್ಲಿಟ್ಟು ಪ್ರತ್ಯಕ್ಷ ಉಪಯುಕ್ತತೆ ಹಾಗು ವ್ಯವಹಾರ ಸಾಧ್ಯವಾಗುವಂತೆ ಶರೀರಶಾಸ್ತ್ರ, ಆರೋಗ್ಯಶಾಸ್ತ್ರ, ಆರೋಗ್ಯದಿಂದಿರುವಿಕೆ, ಆಹಾರ ವಿಜ್ಞಾನ, ಇವುಗಳ ಮುಖ್ಯಾಂಶಗಳ ಜ್ಞಾನ.

ಋ) ಸಮಾಜ ಪರಿಜ್ಞಾನದ ಮತ್ತು ಮೂಲ ಶಿಕ್ಷಣದ ಪುನರಾವರ್ತನೆ ಹಾಗು ಬೆಳವಣಿಗೆಯಾಗಬೇಕಾದರೆ ತನ್ನ ಸುತ್ತಲಿನ ಸಾಮಾಜಿಕ ಪರಿಸ್ಥಿತಿ ಹಾಗು ಸಮಸ್ಯೆಗಳನ್ನು ಸರಿಯಾಗಿ ಕಂಡುಕೊಳ್ಳುವಂತೆ ಉಪಾಧ್ಯಾಯನಿಗೆ

ಶಿಕ್ಷಣ ಕೊಡುವದು. ಜಗತ್ತಿನ ಹಾಗು ಹಿಂದುಸ್ಥಾನದ ಕಳೆದ ಐವತ್ತು ವರ್ಷಗಳ ಸ್ಥಿತಿಯ ಸಾಮಾನ್ಯ ಜ್ಞಾನದಲ್ಲಿ ಈ ಶಿಕ್ಷಣವು ಮುಗಿಯುಬೇಕು.

ಋ) ಶಿಕ್ಷಕರಿಗೆ ಭಾರತದ ಶ್ರೇಷ್ಠವಾದ ಕಲೆಯ ಹಾಗು ಸಾಹಿತ್ಯದ ಪರಿಚಯುವನ್ನು ಮಾಡಿಕೊಡುವ ಉದ್ದೇಶದಿಂದ ಕೆಲವು ಪಾಠಗಳನ್ನು-ಪ್ರತ್ಯಕ್ಷ ಅಭ್ಯಾಸವನ್ನು-ಮಾತೃಭಾಷೆಯಲ್ಲಿ ಮಾಡಿಸುವ. ಅದರಿಂದ ಅವರಿಗೆ ಸಂಸ್ಕೃತಿಯ ಭೂಮಿಕೆ ಒದಗಬೇಕು.

ಎ) ಎಲ್ಲ ಪ್ರದೇಶಗಳಲ್ಲಿಯೂ ವ್ಯವಹಾರ ಸಾಗಿಸುವಂತೆ ಶಿಕ್ಷಕರಿಗೆ ಹಿಂದುಸ್ತಾನಿ ಭಾಷೆಯ ಜ್ಞಾನ ಉರ್ದು ಹಾಗು ಹಿಂದೀ ಲಿಪಿಗಳನ್ನು ಓದಲು ಮತ್ತು ಬರೆಯಲು ಬರುವಷ್ಟು ಶಕ್ತಿ ಬರಬೇಕು. ಈ ಶಿಕ್ಷಣದ ಮೂಲ ಭೂತ ಸಂಸ್ಕೃತಿಯ ಮತ್ತು ನಾಗರಿಕತೆಯ ತತ್ವಗಳನ್ನು ಮುಂದುವರಿಸಲು, ಸರಕಾರದ ಹಾಗು ಸಹಾಯಕಶಾಲೆಗಳಲ್ಲಿಯ ಎಲ್ಲ ಶಿಕ್ಷಕರಿಗೂ ಈ ತರದ ಹಿಂದೀ ಶಿಕ್ಷಣವು ಅತ್ಯವಶ್ಯವಾಗಿದೆ.

ಏ) ಕರಿಯ ಹಲಗೆಯ ಮೇಲೆ ಬರೆಯುವದು ಹಾಗು ಚಿತ್ರ ತೆಗೆಯುವದು.

ಐ) ಅಂಗಸಾಧನೆ, ಕವಾಯಿತು, ದೇಶೀ ಆಟಗಳು.

ಒ) ಶಾಲೆಗೆ ಸಂಬಂಧಪಟ್ಟ ಪ್ರಯೋಗಶಾಲೆಯಲ್ಲಿ ಅಂಕಿತದಲ್ಲಿ ಒಳಪಟ್ಟ ಶಿಕ್ಷಣದ ಅಭ್ಯಾಸ.

ಬಾಲಕರೂ ಶಿಕ್ಷಕರೂ ಒಬ್ಬರಲ್ಲೊಬ್ಬರು ಬೆರೆತುಕೊಂಡು ಹೋಗುವಂತೆ ಈ ಶಿಕ್ಷಣ ಶಾಲೆಗಳು ಅವರೀರ್ವರ ವಸತಿಯ ಸಂಸ್ಥೆಗಳೂ ಆಗಬೇಕೆಂದು ನಮ್ಮ ಅಪೇಕ್ಷೆ. ಶಿಕ್ಷಕರ ಸ್ವಂತದ ಅಭಿರುಚಿಯು ಹೊರಹೊಮ್ಮುವದಕ್ಕೆ ಅವಕಾಶವಾಗುವಂತೆ ವಿದ್ಯಾರ್ಥಿಗಳೂ ಗುರುಗಳೂ ಓಜಸ್ವಿಯಾದ-ತರತರದ ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳಿಂದ ಐಕ್ಯ-ಸಹಕಾರಗಳನ್ನು ಬೆಳೆಸಿಕೊಳ್ಳಬೇಕು. ಇದರಿಂದ ಶಿಕ್ಷಕರು ತಮ್ಮ ವಿರಾಮ ಕಾಲದಲ್ಲಿ ವಿನೋದಕ್ಕಾಗಿ ಕೆಲವು ಉಪವೃತ್ತಿಗಳನ್ನೂ ಸಾಮಾಜಿಕ ಚಟುವಟಿಕೆಗಳನ್ನೂ ಬೆಳೆಸಿಕೊಳ್ಳುವಂತೆ ಉಪಾಧ್ಯಾಯರನ್ನು ತರಬೇತು ಮಾಡುವ ಸಂಸ್ಥೆಗಳ ಅಧಿಕಾರಿಗಳು ನೋಡಿಕೊಳ್ಳುವದು ಅತ್ಯವಶ್ಯವಾದುದು.

ಈ ವಿನೋದ ವೃತ್ತಿಗಳ ಮೂಲಕ, ಸಾಮಾಜಿಕ ಚಟುವಟಿಕೆಗಳ ಮೂಲಕ, ಅವುಗಳಲ್ಲಿಯ ವೈವಿಧ್ಯತೆ-ತೀವ್ರತೆಗಳ ಮೂಲಕ, ಈ ವೃತ್ತಿ-ಪ್ರವೃತ್ತಿ ಚಟುವಟಿಕೆಗಳು ಕಾರ್ಯರಂಗಕ್ಕಿಳಿಯುವಾಗಿನ ಉತ್ಸಾಹದ ಮೂಲಕ, ಆ ಕೆಲಸಗಳಿಗೆ ಮನಃಪೂರ್ವಕ ಅಂಟಿಕೊಳ್ಳುವಿಕೆಯ ಮೂಲಕ ಶಾಲೆಯ ಜೀವನದ ಮೇಲೆ ಹಾಗು ಸಮಾಜದ ಮೇಲೆ ಆಗುವ ಪರಿಣಾಮ ಗಳಿಂದಲೇ ಈ ಶಿಕ್ಷಣಸಂಸ್ಥೆಗಳ ನಿಜವಾದ ಯಶಸ್ಸು ನಿರ್ಣಯಿಸಲ್ಪಡುತ್ತದೆ.

ಮೇಲೆ ಕಾಣಿಸಿದ ಅಭ್ಯಾಸಕ್ರಮವು ಬಹಳ ಭಾರವಾದದ್ದು, ಅತ್ಯಾಸೆ ಯಿಂದ ಮಾಡಿದ್ದು ಎಂಬ ಭಾವನೆಯಿಂದ ಅದು ಕಾರ್ಯಕಾರಿಯಾಗುವದು ಅಸಾಧ್ಯವೆಂದು ತಿಳಿದುಕೊಳ್ಳುವ ಸಂಭವವಿದೆ. ಆದರೆ ನಾವು ಆ ಭಾವನೆ ಯನ್ನು ಕಿತ್ತೊಗೆಯಬಯಸುತ್ತೇವೆ. ಏಕೆಂದರೆ, ಸದಿಚ್ಛೆಯಿಂದ ಕೆಲಸಕ್ಕೆ ತೊಡಗಿದರೆ, ಮೇಲೆ ಕಾಣಿಸಿದ್ದನ್ನೆಲ್ಲ ಪರಿಪೂರ್ಣವಾಗಿ ಕಲಿಸುವದು ಸಾಧ್ಯ ವೆಂದು ಹೇಳಬಯಸುತ್ತೇವೆ. ಈ ಉಪಾಧ್ಯಾಯರ ಶಿಕ್ಷಣವು ಒಂದೇಸವನೆ ಮೂರು ವರ್ಷ ನಡೆಯತಕ್ಕದ್ದು; ಆದುದರಿಂದ ಇಲ್ಲಿ ಕಾಣಿಸಿದ್ದಕ್ಕಿಂತಲೂ ಹೆಚ್ಚಾಗಿ ನಮ್ಮ ಉದ್ದೇಶವು ಈಡೇರುವದು ಸಾಧ್ಯವಿದೆ. ಅಲ್ಲದೆ ಕೆಲವು ವರ್ಷಗಳ ತರುವಾಯ—ಈ ಶಿಕ್ಷಣ ಯೋಜನೆಯು ಫಲಕಾರಿಯಾ ಗತೊಡಗಿದ ಮೇಲೆ ಈ ಯೋಜನೆ ನಮ್ಮ ಹೊಸ ಶಾಲೆಗಳಲ್ಲಿ ಬಳಕೆಗೆ ಬರತೊಡಗಿದ ಮೇಲೆ ಮುಂದೆ ಶಿಕ್ಷಣಕ್ಕಾಗಿ ಸೇರಿಸಿಕೊಳ್ಳಲಾಗುವ ಹೊಸ ಉಪಾಧ್ಯಾಯರೆಲ್ಲರೂ ನಮ್ಮ ಹೊಸ ಶಾಲೆಗಳಲ್ಲಿಯೇ ಕಲಿತವರಾಗುವುದರಿಂದ, ಕೈಗಾರಿಕೆಯಲ್ಲಿಯೂ, ಸಮಾಜವಿಜ್ಞಾನದಲ್ಲಿಯೂ, ಇತರ ಪಠ್ಯ ಪುಸ್ತಕಗಳಲ್ಲಿಯೂ ಸಾಕಷ್ಟು ನೈಪುಣ್ಯವು ಕಂಡುಬರುತ್ತದೆ. ಆದುದರಿಂದ ಈ ಅಭ್ಯಾಸಕ್ರಮವು ಹೊಸ ವಿಷಯಗಳನ್ನೇನೂ ಹೆಚ್ಚಾಗಿ ಕಲಿಸದೆ, ಕಲಿತದ್ದನ್ನೇ ಮುಂದುವರಿಸುತ್ತದೆ. ಮತ್ತು ಶಿಕ್ಷಕವೃತ್ತಿಯ ದೃಷ್ಟಿಯನ್ನಷ್ಟೇ ಹುಟ್ಟಿಸುತ್ತದೆ. ಅಲ್ಲದೆ ಸಾಲೆ ಯಲ್ಲಿ, ಸುತ್ತುಮುತ್ತಲಿನ ಜನಜೀವನದಲ್ಲಿ ಕಂಡುಬರುವ ನಾಗರಿಕ ತತ್ವಗಳು, ಸ್ವಚ್ಛತೆ, ಪ್ರಥಮ ಚಿಕಿತ್ಸೆ, ಮಗುವಿನ ನಡತೆ, ವರ್ಗಗಳೊಳಗಿನ ಅಭ್ಯಾಸ ಮಾಡಿಸುವದು, ಮುಂತಾದವುಗಳಿಗೆ ಸಂಬಂಧಿಸಿದ ವಾಸ್ತವಿಕ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಅವುಗಳಿಗೆ ಹೊಂದಿಕೆಯಾಗುವಂತೆ ಕಲಿಸತಕ್ಕದ್ದು ಇಲ್ಲಿಯ ಧ್ಯೇಯ. ಇಷ್ಟೇ ಹೊರತು ಮೇಲೆ ಸೂಚಿಸಿದ ಎಲ್ಲಾ ವಿಷಯಗಳ

ಪರಿಪೂರ್ಣ ಅಧ್ಯಯನವು ಈ ಸಮಯದ ಉದ್ದೇಶವೂ ಅಲ್ಲ; ಸಾಧ್ಯವೂ ಇಲ್ಲ. ಶಿಕ್ಷಕರ ವೃತ್ತಿಯಲ್ಲಿ ಸದಭಿಮಾನವು ಹುಟ್ಟಿದರೆ, ಜಾಣ್ಮೆಯು ಉದಯಿಸಿದರೆ, ಎಷ್ಟೋ ಶಿಕ್ಷಕರು ಶೈಕ್ಷಣಿಕ ಅಭ್ಯಾಸವನ್ನು ಖಾಸಗಿರೀತಿಯಿಂದ ಮುಂದೆ ಸಾಗಿಸಬಲ್ಲರು. ಕೆಲವು ಪಠ್ಯವಿಷಯಗಳಲ್ಲಿ ಹೆಚ್ಚಿಗೆ ಜ್ಞಾನ ಪಡೆಯಲೂ ಯತ್ನಿಸುವರು. ಈ ಶಿಕ್ಷಣದ ಅವಧಿಯ ವಿಷಯವಾಗಿ ಹೇಳುವುದಾದರೆ, ಈ ಅವಧಿಯಲ್ಲಿ ಶಿಕ್ಷಕರನ್ನು ಓದು ಬರೆಯಬಲ್ಲ ಪಂಡಿತರನ್ನಾಗಿ ತಯಾರಿಸುವ ಉದ್ದೇಶವಿರದೆ, ಕುಶಲರೂ, ಬುದ್ಧಿಶಾಲಿಗಳೂ, ವಿದ್ಯಾವಂತರೂ, ಸುಶಿಕ್ಷಿತ ಕೈಗಾರಿಕೆಯುವರೂ, ಸಮಾಜಸೇವಕರೂ, ಈ ಯೋಜನೆಯ ಬೆಲೆಯನ್ನು ಅರಿತುಕೊಳ್ಳಲು ಮುಂಬರುವ ಪೀಳಿಗೆಗೆ ಸಹಾಯಕರೂ ಆಗುವಂತೆ ಪಳಗಿಸುವುದಿದೆ

## ಶಿಕ್ಷಕರ ಸಂಕ್ಷಿಪ್ತ ವಿದ್ಯಾಭ್ಯಾಸದ ಪಾಠಕ್ರಮ.

ಈ ಶಿಕ್ಷಣ ಯೋಜನೆಯನ್ನು ಆದಷ್ಟು ಬೇಗ ಬಳಕೆಯಲ್ಲಿ ತರುವ ಉದ್ದೇಶದಿಂದ ಒಂದು ವರ್ಷದ ತಾತ್ಪೂರ್ತಿಕ ಶಿಕ್ಷಣ ಯೋಜನೆಯನ್ನು ಏರ್ಪಡಿಸಬೇಕೆಂಬುದು ನಮ್ಮ ಮನಃಪೂರ್ವಕವಾದ ಅಭಿಪ್ರಾಯ. ಇದಕ್ಕೆ ಆವಶ್ಯಕರಾದ ಶಿಕ್ಷಕರನ್ನು ಈಗಿರುವ ಶಾಲೆಗಳಿಂದ, ರಾಷ್ಟ್ರೀಯ ಸಂಸ್ಥೆಗಳಿಂದ, ಆಶ್ರಮಗಳಿಂದ ಆಯ್ದುಕೊಳ್ಳಬೇಕು. ಈ ಬಗೆಯಾಗಿ ಆಯ್ದ ಜನರಲ್ಲಿ ಫಲದಾಯಕವಾಗಿ ಕಲಿಸುವ ಅನುಭವವೂ, ಕೈಕೆಲಸದ ತಿಳಿವೂ ಇರಬೇಕು; ಅವರಲ್ಲಿ ಈ ಯೋಜನೆಯನ್ನು ಉತ್ಸಾಹದಿಂದ, ತಿಳುವಳಿಕೆಯಿಂದ ನಡಸಿಕೊಂಡು ಹೋಗಬಲ್ಲ ಎದೆಗಾರಿಕೆಯಿರಬೇಕು.

ಈ ಬಗೆಯ ಶಿಕ್ಷಕರ ಅಧ್ಯಯನದಲ್ಲಿ ಕೆಳಗಿನ ವಿಷಯಗಳಿರಬೇಕು.

೧. ಹತ್ತಿ ಹಿಂಜುವದು, ತಕಲಿಯಿಂದ ನೂಲುವದು. ಮುಖ್ಯ ಕೈಗಾರಿಕೆ ಯಾವುದಿದ್ದರೂ ತಕಲಿಯಿಂದ ನೂಲುವದು ಒತ್ತಾಯದ ಶಿಕ್ಷಣವೇ ಆಗಬೇಕು.

೨. ಮೇಲೆ ಕಾಣಿಸಿದ ಮೂಲ ಉದ್ಯಮಗಳಲ್ಲಿ ಯಾವುದಾದರೊಂದನ್ನು ಮೊದಲಿನ ಮೂರು ವರ್ಗಗಳಲ್ಲಿ ಚೆನ್ನಾಗಿ ಕಲಿಸುವಂತೆ ಉಪಾಧ್ಯಾಯರಿಗೆ ಶಿಕ್ಷಣ ಕೊಡಬೇಕು.

೩. ಶರೀರಶಾಸ್ತ್ರ, ಆರೋಗ್ಯಶಾಸ್ತ್ರ, ಸ್ವಚ್ಛತೆ, ಆಹಾರ ವಿಜ್ಞಾನ ಇವುಗಳಲ್ಲಿ ಶಿಕ್ಷಣ ಕೊಡಬೇಕು.

೪. ಉದ್ಯಮಶಾಲೆಯ ಮೂಲ ಉದ್ದೇಶ, ಹಾಗು ಸಮಾಜಕ್ಕಿರುವ ಆದರ ಸಂಬಂಧ.

೫. ಪರಸ್ಪರ ಸಹಕಾರಿಯಾಗಿ ಪಾಠ ಕಲಿಸಲು ಸಹಾಯಕವಾಗುವಂತೆ ಹೆಗುರಾದ ಯೋಜನೆಗಳನ್ನು ಕಲ್ಪಿಸುವದು ಹಾಗು ತಯಾರಿಸುವದು.

೬. ಹಿಂದುಸ್ತಾನದ ರಾಷ್ಟ್ರೀಯ ಜಾಗೃತಿಯ ಇತಿಹಾಸವನ್ನು ಕುರಿತು ಕೆಲವು ಪಾಠಗಳು ಮತ್ತು ಈ ಶತಮಾನದಲ್ಲಿ ಜಗತ್ತಿನಲ್ಲಾದ ಅಂದೋಲನಗಳ ದಿಶೆ.

೭. ಯೋಗ್ಯ ಮೇಲ್ವಿಚಾರಣೆಗೊಳಪಟ್ಟು ಕಡೆಗೆ ೨೫ ಪಾಠಗಳನ್ನಾದರೂ ಶಾಲೆಯಲ್ಲಿ ಕಲಿಸುವದು.

# ೪. ಮೇಲ್ವಿಚಾರಣೆ ಹಾಗು ಪರೀಕ್ಷೆ

## ಮೇಲ್ವಿಚಾರಣೆ

ಈ ಹೊಸ ಶಾಲೆಗಳಿಗೆ ಚನ್ನಾಗಿ ಪಳಗಿದ ಶಿಕ್ಷಕರೆಷ್ಟು ಅವಶ್ಯವೋ ದಕ್ಷರಾದ ಸಹಾನುಭೂತಿಯುಳ್ಳ ಮೇಲ್ವಿಚಾರಕರೂ ಅಷ್ಟೇ ಅವಶ್ಯ. ಮೇಲ್ವಿಚಾರಣೆಯೆಂದರೆ ಆದಷ್ಟು ಮಟ್ಟಿಗೆ ಅನುಭವವನ್ನು ಕಂಡುಹಿಡಿಯುವ ಕೆಲಸ. ಆದುದರಿಂದ ಆದುದರಿಂದ ದಿನದಿನಕ್ಕೂ ಬೆಳೆಯುತ್ತಿರುವ ಶಾಲೆಗಳ ಕೊರತೆಯನ್ನೂ ಬೇಡಿಕೆಗಳನ್ನೂ ಪೂರೈಸಲು ಮೇಲ್ವಿಚಾರಕರನ್ನು ಸಿದ್ಧಗೊಳಿಸುವುದು ಅತ್ಯವಶ್ಯವಿದೆ. ಪ್ರಾಥಮಿಕ ಶಾಲೆಯ ಶಿಕ್ಷಕ ಶಿಕ್ಷಣವನ್ನು ಪೂರ್ಣ ಪಡೆದ ಮೇಲೆ. ಕಲಿಸುವ ಅನುಭವವನ್ನು ಎರಡುವರ್ಷಗಳ ವರೆಗೆ ಪಡೆದು, ಒಂದು ವರ್ಷ ಮೇಲ್ವಿಚಾರಣೆಯನ್ನೂ ಆಡಳಿತದ ಜ್ಞಾನವನ್ನೂ ಪಡೆದುಕೊಂಡವರನ್ನೇ ಮೇಲ್ವಿಚಾರಕರನ್ನಾಗಿ ನಿಯಮಿಸಬೇಕು. ಮೇಲ್ವಿಚಾರಣೆಯೆಂದರೆ ಬರಿಯ ತಪಾಸಣೆಯಾಗಿರಬಾರದು; ಅದು ವ್ಯಕ್ತಿಗಳ ಸಹಕಾರ ಸಹಾಯ ಸಹಾನುಭೂತಿಯಾಗಿರಬೇಕು. ಕಡಿಮೆ ಅನುಭವಿಕರಾದ ಸಹೋ

ದ್ಯೋಗಿಗೆ ಹೆಚ್ಚು ಜಾಣನು ನೀಡುವ ಸಹಾಯವಾಗಿರಬೇಕು. ಶಿಕ್ಷಣ ಪ್ರಯೋಗದಲ್ಲಿ ಮೇಲ್ವಿಚಾರಕರು ಮಾರ್ಗದರ್ಶಿಗಳೂ, ಮುಂದಾಳುಗಳೂ ಆಗಿರಬೇಕು. ಹಾಗೆ ಅವರ ಸಹಾಯಕವಾದ ಮಾರ್ಗದರ್ಶಿತ್ವವೂ ಮುಂದಾಳು ತನವೂ ಉಪಯೋಗಕರವಾಗಬೇಕಿದ್ದರೆ, ಆಡಳಿತದ ದಿನದಿನದ ಕೆಲಸದ ಭಾರವು ಆದಷ್ಟು ಮಟ್ಟಿಗೆ ಅವರಿಗೆ ಕಡಿಮೆಯಿರಬೇಕು. ಆದುದರಿಂದ ಸಾಕಷ್ಟು ಜನ ಮೇಲ್ವಿಚಾರಕರ ಅಗತ್ಯವಿದೆ. ಮೇಲ್ವಿಚಾರಣೆಗೊಳಪಟ್ಟ ಪ್ರದೇಶ ಹಿಡಿತಕ್ಕೆ ಮಿಕ್ಕಿರಬಾರದು. ಇದಕ್ಕೆ ವೆಚ್ಚವು ಸ್ವಲ್ಪ ಮಿತಿಮೀರುವುದು ಅನಿವಾರ್ಯ. ಇದರಲ್ಲಿ ಮಾಡುವ ಮಿತವ್ಯಯು ಹಾನಿಕರವಾಗುವುದು.

## ಪರೀಕ್ಷೆಗಳು

ಈಗ ರೂಢಿಯಲ್ಲಿರುವ ಪರೀಕ್ಷಾಪದ್ಧತಿ ದೇಶಕ್ಕೊಂದು ಪಿಡುಗಿನಂತಿದೆ. ಪರೀಕ್ಷೆಗಳ ಉಪಯುಕ್ತತೆಯನ್ನು ಬದಿಗಿರಿಸಿ, ಅವಕ್ಕೆ ಸಲ್ಲದ ಮಹತ್ವವನ್ನು ಕೊಟ್ಟದ್ದರಿಂದ ಮೊದಲೇ ಕೆಡುಕಾದ ಶಿಕ್ಷಣಪದ್ಧತಿಯು ಮತ್ತಷ್ಟು ಕೆಟ್ಟು ಹೋಗಿದೆ ಶಾಲೆಗಳ ಅಥವಾ ವೈಯಕ್ತಿಕ ವಿದ್ಯಾರ್ಥಿಗಳ ಯೋಗ್ಯತೆಯ ಅಳತೆಯು ಪರೀಕ್ಷೆಗಳನ್ನು ತಿಳಿಯುವದು ಅಸಮರ್ಪಕವೂ, ನಂಬಲಶಕ್ಯವೂ ಎಂದು ವಿದ್ಯಾವಂತರ ಒಮ್ಮತದ ಅಭಿಪ್ರಾಯವಿದೆ. ಪರೀಕ್ಷೆಗಳು ಪ್ರಮಾಣ ಗಳಲ್ಲಿ ಪರಿಪೂರ್ಣವಾದವುಗಳಲ್ಲ; ಅವುಗಳಲ್ಲಿ ಮನಬಂದಂತೆ ನಡೆದ ಪ್ರವೃತ್ತಿ ಯಿಂದ ಮಾರಕದೋಷವೂ, ಅಸೂಯೆಯ ಭಾವನೆಯೂ ತುಂಬಿಕೊಂಡಿವೆ. ಆದುದರಿಂದ ಮುಂಬರುವ ರಾಷ್ಟ್ರೀಯ ಶಿಕ್ಷಣದಲ್ಲಿ ಅವು ಪ್ರವೇಶ ಮಾಡದಂತೆ ನಾವು ಎಚ್ಚರಿಕೆಯಿಂದಿದ್ದೇವೆ.

ಪರೀಕ್ಷೆಯ ಉದ್ದೇಶವನ್ನು ಸಾಧಿಸಲು ಇದೊಂದು ದಾರಿ; ಒಂದು ನಿಯಮಿತ ಸ್ಥಳದ ಶಾಲೆಗಳ ಆಡಳಿತದ ಮೇಲ್ವಿಚಾರಣೆ; ಆ ಮೇಲ್ವಿಚಾರ ಣೆಯನ್ನು "ಶಿಕ್ಷಣ ಸಂಸ್ಥೆ" ಯ ಮೇಲ್ವಿಚಾರಕರ ಕೈಯಲ್ಲಿ ತರಬೇ ತಾದ ಆರಿಸಿದ ಕೆಲ ಹುಡುಗರು ಪಡೆದ ಶಿಕ್ಷಣದ ಬೆಲೆಯಿಂದ, ಅವರು ಪಡೆದುಕೊಂಡ ಜ್ಞಾನದ ಯೋಗ್ಯತೆಯ ಮೇಲಿಂದ ಮೇಲಿನ ಶಾಲೆಗಳ ಪರೀಕ್ಷೆಯನ್ನು ನಡಿಸಬೇಕು. ಅಂದರೇನೇ ಪರೀಕ್ಷೆಯ ಗುರಿಯನ್ನು ಸಾಧಿ ಸಲು ಶಕ್ಯವಿದೆ. ಈ ಬಗೆಯ ಪರೀಕ್ಷೆಯನ್ನೂ ಪಾಠಕ್ರಮವನ್ನೂ ಬದಲು

ಮಾಡಲು ಸಮರ್ಥರಾದ ಜವಾಬುದಾರಿ ಜನರಿಂದ ಒಡಗೂಡಿ ಅವರೊಡನೆ ವಿಚಾರ ವಿನಿಮಯ ಮಾಡಿ ಪರೀಕ್ಷೆ ತಕ್ಕೊಳ್ಳಬೇಕು. ಆ ಪರೀಕ್ಷೆಗಳು ಕಲಿಸುವ ವಿಷಯಗಳನ್ನು ಪೂರ್ಣವಾಗಿ ಒಳಗೊಂಡಿರಬೇಕು; ವೈಯಕ್ತಿಕ ಅಭಿಪ್ರಾಯಕ್ಕೆ ಸಿಲುಕದ ವಸ್ತುಸ್ಥಿತಿ-ದಿಗ್ದರ್ಶಕಗಳಾಗಿರಬೇಕು.

ಈ ಬಗೆಯ ಪರೀಕ್ಷೆಗಳಿಂದ-ಅಂಕಿತ ಮಾಪನಗಳಿಂದ—ಶಾಲೆಯ ಕಾರ್ಯದಕ್ಷತೆಗೆ ಬಹಳ ಸಹಾಯವಾಗುತ್ತದೆ. ಮತ್ತು ಕಡೆಯ ಇಯತ್ತೆಯನ್ನು ಕಲಿಸುವ ವೇಳೆ ಆರುವಾರಗಳ ವರೆಗೆ ಹೆಚ್ಚಾಗುತ್ತದೆ, ಈ ಸಮಯದಲ್ಲಿ ಸದ್ಯದ ವಿದ್ಯಾರ್ಥಿಗಳು ಪರೀಕ್ಷೆಯೆಂಬ ಅಗ್ನಿಪರೀಕ್ಷೆಯ ಪೂರ್ವಸಿದ್ಧತೆಗಾಗಿ ಟಿಪ್ಪಣಿಗಳನ್ನೂ, ಉಚಳಣೆಯನ್ನೂ ಬಾಯಿಪಾಠ ಮಾಡುತ್ತ ಕಷ್ಟಪಡುತ್ತ ಕುಳಿತಿರುತ್ತಾರೆ. ಈ ಕಾಲಾವಧಿಯಲ್ಲಿ ವಿದ್ಯಾರ್ಥಿಗಳು ಮೂಲ ಉದ್ಯಮದಲ್ಲಿ ಎಷ್ಟರಮಟ್ಟಿಗೆ ಜಾಣರಾಗಿರುವರೆಂದು ಪರೀಕ್ಷೆ ತಕ್ಕೊಳ್ಳಬಹುದು; ಶಾಲೆಯು ವಿದ್ಯಾದಾನ ಮಾಡುತ್ತಿರುವ ತನ್ನ ಹಳ್ಳಿಯ ಜನರ ಸೇವೆಗಾಗಿ ಆ ವೇಳೆಯ ಉಪಯೋಗ ಮಾಡಬಹುದು.

ಕೆಳಗಿನ ಇಯತ್ತೆಯಿಂದ ಮೇಲಿನ ಇಯತ್ತೆಗೆ ವಿದ್ಯಾರ್ಥಿಗಳನ್ನು ಹಾಕುವಾಗ ಅವರು ಮಾಡಿದ ಕೆಲಸವನ್ನು ಕಾದಿಟ್ಟು, ಅದರಿಂದ ಹುಡುಗನ ಯೋಗ್ಯತೆಯನ್ನು ಶಿಕ್ಷಕರೇ ನಿರ್ಣಯ ಮಾಡತಕ್ಕದ್ದು, ಶಾಲೆಯು ಸಾಕಷ್ಟು ದಕ್ಷವಾಗಿದೆಯೋ ಇಲ್ಲವೋ ಎಂಬುದನ್ನು, ಆ ದಕ್ಷತೆಯು ಶಾಲಾಮಂಡಲದ ಎಲ್ಲ ವಿಭಾಗಗಳಲ್ಲಿಯೂ ಸಾಕಷ್ಟು ಪ್ರಮಾಣದಲ್ಲಿ ಬಂದಿದೆಯೋ ಇಲ್ಲವೋ ಎಂಬುದನ್ನು ನೋಡಲಿಕ್ಕೆ ವಿದ್ಯಾಖಾತೆಯವರು ಪ್ರಾಂತದ ಬೇರೆ ಬೇರೆ ಭಾಗದ ಶಾಲೆಗಳಿಂದ ಪ್ರತಿಯೊಂದು ಇಯತ್ತೆಗೂ ಮಾದರಿಯ ವರ್ಗಗಳನ್ನು ಆರಿಸಿಕೊಂಡು ಅವುಗಳನ್ನು ಪ್ರತಿ ವರ್ಷವೂ ಪರೀಕ್ಷಿಸಬೇಕು. ಸಾಧ್ಯವಿದ್ದಮಟ್ಟಿಗೆ ವಿದ್ಯಾರ್ಥಿಗೆ ಒಂದುಸಲ ಮಾಡಿಸಿದ ವಿಷಯಗಳನ್ನೇ ಪುನಃ ಮಾಡಿಸವಂತೆ ನೋಡಿಕೊಳ್ಳಬೇಕು. ಒಂದು ಇಯತ್ತೆಯಲ್ಲಿ ಬಹಳ ಹುಡುಗರು ನಾಪಾಸು ಆದರೆ ಶಿಕ್ಷಕನು ಕಾರ್ಯದಕ್ಷನಾಗಿರುವದು ಸಂದೇಹಕರವಾಗುತ್ತದೆ. ಇಡೀ ಶಾಲೆಯಲ್ಲಿ ಪಾಸಾದ ಹುಡುಗರು ಸ್ವಲ್ಪೇ ಹೊರಟರೆ, ಅಭ್ಯಾಸಪಟ್ಟಿಯಲ್ಲಿಯೂ, ವಿಧಾಯಕ ನಿಯಮಗಳಲ್ಲಿಯೂ ಏನೋ ದೋಷವಿರಬೇಕು. ಇದನ್ನು ಸರಿ ಮಾಡಬೇಕು. ಒಂದು ಇಯತ್ತೆಯಲ್ಲಿ ಒಂದು ಸಲ ಕಲಿತ

ವಿಷಯಗಳನ್ನೇ ಪುನಃ ಅದೇ ವಿದ್ಯಾರ್ಥಿಯು ಕಲಿಯಬೇಕೆಂಬುದು ಅನ್ಯಾಯ ವಾದದ್ದು.

ಈ ಮೇರೆಗೆ ಮೇಲೆ ಹೇಳಿದ ಪರೀಕ್ಷೆಗಳಿಂದ, ಮೂಲ ಕೈಗಾರಿಕೆಯಲ್ಲಿ ವಿದ್ಯಾರ್ಥಿಗಿರುವ ಪ್ರವೀಣತೆಯಿಂದ, ತಮ್ಮ ಸುತ್ತುಮುತ್ತಲೂ ಇರುವ ಜನ ಜೀವನವನ್ನು ಸುಧಾರಿಸಲು ವಿದ್ಯಾರ್ಥಿಗಳೂ ಶಿಕ್ಷಕರೂ ಮಾಡಿದ ಪ್ರಯತ್ನ ಗಳಿಂದ, ವಿದ್ಯಾಖಾತೆಯವರು ತಮ್ಮ ಆಡಳಿತಕ್ಕೆ ಒಳಪಟ್ಟ ಶಾಲೆಗಳ ದಕ್ಷತೆ ಯನ್ನು ನಿರ್ಧರಿಸಬೇಕು. ವರ್ಷಕ್ಕೊಮ್ಮೆ ಒಂದು ಜಿಲ್ಹೆಯಲ್ಲಿ ಶಾಲೆಗಳು ಮಾಡಿದ ಕೆಲಸಗಳ ಪ್ರದರ್ಶನಗಳನ್ನು ಏರ್ಪಡಿಸಬೇಕು; ಅದರಿಂದ ಪಡೆಗು ಕೊಂಡ ಯೋಗ್ಯತೆಯ ಮಟ್ಟವನ್ನು ಕಾದಿಟ್ಟುಕೊಳ್ಳಲಿಕ್ಕೆ ಬಹಳ ಸಹಾಯ ವಾಗುತ್ತದೆ.

## ೫. ಆಡಳಿತ

೧. ಹಿಂದೆ ಎರಡನೇ ವಿಭಾಗದಲ್ಲಿ ಕಾಣಿಸಿದ ಎಲ್ಲ ಉದ್ದೇಶಗಳೂ ಸಾಧಿಸಬೇಕಾದರೆ ವಿದ್ಯಾರ್ಥಿಯು ಏಳು ವರ್ಷಗಳ ಅವಧಿ ಮುಗಿಯುವ ವರೆಗೂ ಶಾಲೆಯಲ್ಲಿ ಕಲಿಯಬೇಕಾಗುತ್ತದೆ. ಸಂಪೂರ್ಣ ವಿಚಾರ ಮಾಡಿದ ಮೇಲೆ ಮಗುವಿನ ಏಳು ವರ್ಷಗಳ ಮೇಲ್ಪಟ್ಟ ಅವಧಿಯೇ ಒತ್ತಾಯದ ಶಿಕ್ಷಣ ಕೊಡಲು ಯೋಗ್ಯವಾದದ್ದೆಂದು ನಿರ್ಧರಿಸಿದ್ದೇವೆ. ಏಳು ಹಾಗು ಹದಿನಾಲ್ಕು ವರ್ಷಗಳ ನಡುವಿನ ಎಲ್ಲ ಬಾಲ ಬಾಲಿಕೆಯ ರಿಗೆ ಈ ಶಿಕ್ಷಣವು ಒತ್ತಾಯದ್ದೂ ಪುಕ್ಕಟೆಯದಾದದ್ದೂ ಇರಬೇಕೆಂಬು ದನ್ನು ನಾವು ಒಪ್ಪುತ್ತೇವೆ, ಏಕೆಂದರೆ ಪ್ರಾಥಮಿಕ ಶಿಕ್ಷಣವು ಎಲ್ಲರಿಗೂ ಒಂದೇ ಇರಬೇಕೆಂಬುದನ್ನು ನಾವು ಒಂದು ತತ್ವವೆಂದು ಒಪ್ಪುತ್ತೇವೆ. ಹನ್ನೆರಡು ವರ್ಷ ತುಂಬಿದ ಮೇಲೆ ಪಾಲಕರು ಹುಡುಗಿಯರನ್ನು ಬೇಕಾ ದರೆ ಶಾಲೆಯಿಂದ ಬಿಡಿಸಬಹುದು.

೨. ಏಳು ವರ್ಷಗಳ ಮೇಲ್ಪಟ್ಟವರಿಗೆ ಒತ್ತಾಯದ ಶಿಕ್ಷಣವನ್ನು ಕೊಡುವ ಅವಧಿಯನ್ನು ಮಾಡಿರುವದರಿಂದ, ಬಾಲ-ಬಾಲಿಕೆಯರ ಅತಿ ಮಹತ್ವದ ಆಯುಷ್ಯದ ಭಾಗವನ್ನು ಅನನುಕೂಲ ವಾತಾವರಣದ ಬಡ ಸ್ಥಿತಿಯಲ್ಲಿದ್ದ, ಉದಾಸೀನರಾದ ಹಳ್ಳಿಯ ಗುಡಿಸಲಲ್ಲಿ ಜೀವಿಸುವ

ಅವರ ತಂದೆ ತಾಯಿಗಳ ಕೈಯಲ್ಲಿ ಕೊಡುತ್ತೇವೆ. ಶಾಲಾ ಶಿಕ್ಷಣದ ಮೊದಲಿಗೆ ಮೂರು ಹಾಗು ಏಳು ವರ್ಷಗಳ ನಡುವಿನ ಮಗುವಿಗೆ ಶಿಕ್ಷಣ ದೊರೆಯಬೇಕೆಂದು ನಾವು ಮನಃಪೂರ್ವಕ ಅಪೇಕ್ಷಿಸುತ್ತೇವೆ. ಆ ಬಗೆಯ ಶಿಕ್ಷಣಕೊಡಲು ಸರಕಾರೀ ಅಥವಾ ಸಹಾಯಕ ಸಂಸ್ಥೆಗಳು ಅತ್ಯವಶ್ಯ ವಾದವುಗಳೆಂದು ಒತ್ತಿ ಒತ್ತಿ ಹೇಳುತ್ತೇವೆ. ಆದರೆ ಸದ್ಯದ ನಮ್ಮ ಆರ್ಥಿಕ ಪರಿಸ್ಥಿತಿಯ ಅರಿವು ನಮ್ಮನ್ನು ಈ ಬಗೆಯ ಅತ್ಯವಶ್ಯ ಸೂಚನೆ ಮಾಡಲು ತಡೆದು ಹಿಡಿಯುತ್ತದೆ. ಆದರೆ ಈ ವಿಷಯದಲ್ಲಿ ಸರಕಾರವು ತನ್ನ ಜವಾಬು ದಾರಿಯನ್ನು ಹಾರಿಸಿಕೊಳ್ಳಬಾರದೆಂದು ನಾವು ಅಪೇಕ್ಷಿಸುತ್ತೇವೆ. ಈ ನಮ್ಮ ಶಿಕ್ಷಣಪದ್ಧತಿಯು ಜನಜೀವನದಲ್ಲಿ ಬೇರೂರಿ, ಗೃಹಜೀವನಕ್ಕೆ ಹೊಂದಿ ಕೊಂಡದ್ದಾದರೆ, ಈಗ ದೊರೆಯದಿದ್ದ ಗೃಹಶಿಕ್ಷಣವು—ಶಾಲೆಗೆ ಬರುವ ಮೊದ ಲಿನ ಮಗುವಿನ ಶಿಕ್ಷಣವು ಚನ್ನಾಗಿ ದೊರೆಯಲು ಬಹಳ ಸಹಾಯಕವಾಗುತ್ತದೆ. ಅಲ್ಲದೆ ಇನ್ನು ಸ್ವಲ್ಪ ಅವಧಿಯಲ್ಲಿ ಕೈಕೊಳ್ಳಲಾಗುವ ದೊಡ್ಡವರ ಶಿಕ್ಷಣಕ್ಕೂ ಇದರಿಂದ ಬಹಳ ಸಹಾಯ ದೊರಕುತ್ತದೆ.

೩. ಪಾಠಕ್ರಮದಲ್ಲಿ ಕಾಣಿಸಿದ ವಿಷಯಗಳನ್ನು ಕಲಿಸಲು ಬೇಕಾ ಗುವ ಅಂದಾಜು ವೇಳಾಪತ್ರಿಕೆಯನ್ನು ಕೆಳಗೆ ಕಾಣಿಸಿದಂತೆ ಮಾಡಿದ್ದೇವೆ. ಅದು ಸರಿಯಾಗಬಹುದೆಂದು ನಂಬುತ್ತೇವೆ.

| | | |
|---|---|---|
| ಮೂಲ ಕೈಗಾರಿಕೆ | ೩ ತಾಸು | ೨೦ ನಿಮಿಷ |
| ಸಂಗೀತ, ಚಿತ್ರಕಲೆ, ಗಣಿತ | | ೪೦ ” |
| ಮಾತೃಭಾಷೆ | | ೪೦ ” |
| ಸಮಾಜವಿಜ್ಞಾನ, ಸಾಮಾನ್ಯವಿಜ್ಞಾನ | | ೩೦ ” |
| ವ್ಯಾಯಾಮ | | ೧೦ ” |
| ವಿಶ್ರಾಂತಿ | | ೧೦ ” |
| | | ೫ ತಾಸು ೩೦ ನಿಮಿಷ |

ಈ ಅಂದಾಜು ಪಟ್ಟಿಯನ್ನು ತಯಾರಿಸುವಲ್ಲಿ, ನೂಲುವದನ್ನೂ ನೇಯು ವದನ್ನೂ ಮುಖ್ಯ ಉದ್ಯಮವಾಗಿ ಗಣಿಸಿದ್ದೇವೆ. ಬೇರೆ ಬೇರೆ ಕೈಗಾರಿಕೆಗೆ ಹೆಚ್ಚು ಕಡಿಮೆ ವೇಳೆ ಹತ್ತುವದು ಸ್ವಾಭಾವಿಕವಾಗಿದ್ದು. ಆದ್ದರಿಂದ ವೇಳೆಯು

ಹಂಚುವಿಕೆಯೂ ಹೆಚ್ಚುಕಡಿಮೆಯಾಗುತ್ತದೆ. ಆದರೆ ಯಾವ ಪ್ರಸಂಗದಲ್ಲಿ ಯಾದರೂ ಮೂಲ ಉದ್ಯಮಕ್ಕೆ ಮೇಲೆ ತೋರಿಸಿದ್ದಕ್ಕಿಂತ ಹೆಚ್ಚಿಗೆ ವೇಳೆ ಕೊಡಬಾರದು.

ಪ್ರತಿ ತಿಂಗಳು ೨೪ ದಿನಗಳಂತೆ ವರ್ಷದಲ್ಲಿ ೨೮೮ ದಿನಗಳ ವರೆಗೆ ಶಾಲೆಯು ತೆರೆದಿರಬೇಕು.

೪. ಶಾಲೆಯು ಕಡೆಯ ಎರಡು ವರ್ಷ ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಬೇರೆ ಬೇರೆ ಉದ್ಯಮ ಕಲಿಯಲಿಕ್ಕೆ ಅವಕಾಶ ಕೊಡುವದು ಆವಶ್ಯ ವೆಂದು ಹೇಳುತ್ತೇವೆ.

೫. ಪ್ರತಿಯೊಂದು ಶಾಲೆಗೂ ಒಂದು ಬೈಲುಜಾಗೆ ಇರುವದು ಅವಶ್ಯ; ಆದನ್ನು ಶಾಲೆಯ ತೋಟಕ್ಕಾಗಿಯೂ ಆಟದ ಬೈಲಿಗಾಗಿಯೂ ಉಪಯೋಗಿಸಿ ಕೊಳ್ಳಬೇಕು.

೬. ಪುಷ್ಟಿಕರವಾದ ಆಹಾರವಿಲ್ಲದ್ದಕ್ಕೂ, ಶಾಲೆಯಲ್ಲಿ ಮುಂದೆ ಬೀಳು ವದಕ್ಕೂ ನಿಕಟ ಸಂಬಂಧವಿದೆಯೆಂಬದನ್ನು ಸಂಶೋಧಕರು ಕಂಡುಹಿಡಿ ದಿದ್ದಾರೆ. ಹಳ್ಳಿಯ ಮಕ್ಕಳಿಗೆ ದೊರೆಯುವ ಆಹಾರವು ಪುಷ್ಟಿಕರವಿರುವ ದಿಲ್ಲವೆಂಬುದನ್ನು ಲಕ್ಷದಲ್ಲಿಟ್ಟುಕೊಂಡು, ಈ ಕೊರತೆಯನ್ನು ದೂರಮಾಡಲು ಶಾಲೆಯ ವೇಳೆಯಲ್ಲಿ ಹುಡುಗರಿಗೆ ಆರೋಗ್ಯಕರವಾದ ಉಪಹಾರವನ್ನು ಒದ ಗಿಸಿಕೊಡುವದು ಅತ್ಯವಶ್ಯವೆಂದು ಹೇಳುತ್ತೇವೆ ಈ ಕೆಲಸದಲ್ಲಿ ತಗಲಬಹು ದಾದ ಖರ್ಚನ್ನು ನೀಗಿಸಲಿಕ್ಕೆ ಜನತೆಯಿಂದ ಬೇಕಾದಷ್ಟು ಸಹಾಯವನ್ನು ಸರಕಾರವು ಪಡೆಯಬಲ್ಲದೆಂದು ನಮಗೆ ವಿಶ್ವಾಸವಿದೆ.

೭. ಶಾಲಾ ಶಿಕ್ಷಕರ ಸಂಬಳದ ವಿಷಯ ಹೇಳುವದಾದರೆ, ಮಹಾತ್ಮಾ ಜಿಯವರು ಸೂಚಿಸಿದಂತೆ, ಸಾಧ್ಯವಿದ್ದರೆ ೨೫ ರೂ. ಅಥವಾ ೨೦ ರೂ. ಯಿಗಿಂತ ಕಡಿಮೆ ಇಲ್ಲದಷ್ಟು ಪಗಾರ ನಾವು ಒಪ್ಪುತ್ತೇವೆ. ಆದರೆ ಮೇಲಿನ ತರಗತಿಗೆ ಕಲಿಸುವದಕ್ಕೆ ಹೆಚ್ಚಿನ ಯೋಗ್ಯತೆಯ ಶಿಕ್ಷಕರ ಆವಶ್ಯಕತೆಯಿರು ವದರಿಂದ, ಅಂಥವರಿಗಾಗಿ ಸ್ವಲ್ಪ ಮಟ್ಟಿಗೆ ಹೆಚ್ಚಿಗೆ ಪಗಾರವನ್ನಾದರೂ ಕೊಡಬೇಕಾಗುವದು.

೮. ಈ ಪ್ರಯೋಗದ ೨-೩ ವರ್ಷಗಳ ಅವಧಿಯಲ್ಲಿ ವಿಶೇಷ ಯೋಗ್ಯತೆಯುಳ್ಳವರೂ, ಅರ್ಹರೂ ಆದ ಶಿಕ್ಷಕರನ್ನು ನಾವು ಒದಗಿಸಿಕೊಳ್ಳ

ಬೇಕು. ಅವರ ಪಗಾರ ಸ್ವಲ್ಪ ಹೆಚ್ಚಿದ್ದರೂ ಚಿಂತೆಯಿಲ್ಲ. ಯಾಕೆಂದರೆ ಆರಿಸಿದ ಶಾಲೆಗಳಲ್ಲಿ ವಿದ್ಯಾಭ್ಯಾಸ ಕ್ರಮವನ್ನೂ ಶಿಕ್ಷಣದ ಹೊಸಪದ್ಧತಿಗಳನ್ನೂ ಅದರ ರೂಪರೇಷೆಗಳನ್ನೂ ಅಂಗಾಂಗಗಳನ್ನೂ ಸಂಪೂರ್ಣವಾಗಿ ಕಾರ್ಯರಂಗಕ್ಕೆ ತಂದು ಫಲಕಾರಿಯಾಗುವಂತೆ ಅವರು ಶಕ್ತರಾಗುತ್ತಾರೆ. ಈ ಮೊದಲನೆಯ ಮೆಟ್ಟಲನ್ನು ನಾವು ಏರಿದ ಮೇಲೆ, ನಮ್ಮ ಮೂರು ವರ್ಷಗಳ ಕಾಲದ ಉಪಾಧ್ಯಾಯ ಶಾಲೆಯಲ್ಲಿ ತರಬೇತಾದ ಯಾವ ಸಾಮಾನ್ಯ ಶಿಕ್ಷಕನಾದರೂ ಸಮಾಧಾನಕರವಾಗಿ ಕೆಲಸ ಸಾಗಿಸಿಕೊಂಡು ಹೋಗಬಲ್ಲನು.

೯. ಸರ್ವಸಾಮಾನ್ಯವಾಗಿ ಯಾವ ಇಯತ್ತೆಯಲ್ಲಾದರೂ ಮೂವತ್ತಕ್ಕಿಂತ ಹೆಚ್ಚಿಗೆ ಹುಡುಗರು ಇರಬಾರದು. ಅದಕ್ಕಿಂತ ಹೆಚ್ಚಿಗೆ ವಿದ್ಯಾರ್ಥಿಗಳಿದ್ದಲ್ಲಿ ದರೆ ಶಿಕ್ಷಕನು ಜವಾಬ್ದಾರಿಯಾದ ಹಾಗು ಮಹತ್ವವಾದ ತನ್ನ ಕರ್ತವ್ಯಗಳನ್ನು ಸರಿಯಾಗಿ ಪಾಲಿಸಲು ಶಕ್ತನಾಗನು.

೧೦ ಶಿಕ್ಷಕರನ್ನು ಆರಿಸುವಾಗ, ಶಾಲೆಯು ಇರುವ ಪ್ರದೇಶದಲ್ಲಿ ವಾಸವಾಗಿರುವವರಿಗೆ ಪ್ರಥಮ ಪ್ರವೇಶ ಕೊಡಬೇಕು.

೧೧. ಈ ವೃತ್ತಿಗೆ ಸೇರುವದಕ್ಕೆಂದು ಸ್ತ್ರೀಯರಿಗೆ ಉತ್ತೇಜನ ಕೊಡುವದಕ್ಕಾಗಿ, ಅವರನ್ನು ಶಿಕ್ಷಕಿಯರನ್ನಾಗಿ ತಯಾರಿಸಲು ವಿಶೇಷ ಸವಲತ್ತು ತೋರಿಸಲು ಪ್ರಯತ್ನಿಸಬೇಕು

೧೨. ಯೋಗ್ಯರಾದ ಜನರನ್ನು ಶಿಕ್ಷಕರನ್ನಾಗಿ ತಯಾರಿಸುವ ಸಮಸ್ಯೆಯನ್ನು ಜಾಗರೂಕತೆಯಿಂದ ವಿಚಾರಿಸಬೇಕು; ಅಲ್ಲದೆ ನಂಬಲರ್ಹವಾದಂಥ ಒಂದು ಆರಿಸುವ ವಿಧಾನವನ್ನು ಕಲಿಸಬೇಕು. ಈ ಕಠಿಣ ಸಮಸ್ಯೆಯನ್ನು ಬಿಡಿಸದಿದ್ದರೆ ಈ ಶಿಕ್ಷಣಯೋಜನೆಯು ಯಶಸ್ವಿಯಾಗುವದು ಬಹಳ ಕಠಿಣವಾದದ್ದೆಂಬದು ನಮಗೆ ಮನದಟ್ಟಾಗಿದೆ. ಕಲಿಸುವದಕ್ಕೆ ವಿಶೇಷವಾದ ಸಾಮಾಜಿಕ ಹಾಗು ನೈತಿಕ ಗುಣಗಳ ಅವಶ್ಯಕತೆಯಿದೆ. ಕಲಿಸಲಿಕ್ಕೆ ಮುಂದೆ ಬರುವ ಪ್ರತಿಯೊಬ್ಬರು ಈ ಕೆಲಸಕ್ಕೆ ಸರಿಬೀಳುತ್ತಾರೆಂದು ಹೇಳುವದು ಕಠಿಣವಾದದ್ದು. ಆದುದರಿಂದ ಶಿಕ್ಷಕರನ್ನಾಗಿ ಆರಿಸುವಾಗ ನಾವು ಬಹಳ ಮುಂಧೋರಣೆಯಿಂದಲೂ, ಕಾಳಜಿ ಪೂರ್ವಕವಾಗಿಯೂ ಆರಿಸಬೇಕು. ಹಾಗು ಮಾನಸ ಶಾಸ್ತ್ರಜ್ಞರು ಹೇಳುವಂತೆ ಎಲ್ಲರೊಡನೆ ಬೆರೆತುಕೊಂಡು ಹೋಗುವ ಗುಣವುಳ್ಳವರನ್ನೆ ' ಸಾಮಾಜಿಕ 'ರನ್ನೆ ಆರಿಸಬೇಕು.

೧೩. ಶಿಕ್ಷಕ ಶಾಲೆಗಳು ವಸತಿಗೃಹಗಳಾಗಿಯೂ ಇರಬೇಕು; ಎಲ್ಲ ಪಂಥ ಪಂಗಡದವರಿಗೂ ಅವಕಾಶವಿರಬೇಕು; ಅಸ್ಪೃಶ್ಯತೆಯೆಂಬ ಕುಲಂಕಕ್ಕೆ ಎಡೆ, ಸಹಭೋಜನಕ್ಕೆ ತಡೆ ಅಲ್ಲಿರಬಾರದು.

೧೪. ಈ ಶಿಕ್ಷಣಾಲಯಗಳಲ್ಲಿ ಜಾಣರಾದ ಕಾರಾಗೀರರಿಗೆ ಉದ್ಯಮ ಶಿಕ್ಷಣ ಕೊಡಲು ನಿಯಮಿಸಬೇಕು ವಿದ್ಯಾರ್ಥಿಗಳು ತಯಾರಿಸಿದ ಸಾಮಾನುಗಳು ಮಾರುವಂತೆ ಅವುಗಳಲ್ಲಿ ಸುಧಾರಣೆ ಮಾಡಲಿಕ್ಕೂ, ಶಿಕ್ಷಕರಿಗೆ ಮೂಲಉದ್ಯಮವನ್ನು ಕಲಿಸಲಿಕ್ಕೆ ಸಹಾಯ ಮಾಡಲಿಕ್ಕೂ ಶಾಲೆಯಿದ್ದ ಊರಿನ ಕಾರಾಗೀರರನ್ನು ಅವಶ್ಯಕತೆಯಿದ್ದರೆ ಉಪಯೋಗಿಸಿಕೊಳ್ಳಬಹುದು.

೧೫. ಶಿಕ್ಷಕರ ದಕ್ಷತೆಯನ್ನು ಕಾಯುವದಕ್ಕಾಗಿ ಹಾಗು ಉತ್ತಮಗೊಳಿಸುವದಕ್ಕಾಗಿ ದೊಡ್ಡ ಪ್ರಮಾಣದ ಮೇಲೆ ಟ್ರೇನಿಂಗ ಕಾಲೇಜು–ಸಾಲೆಗಳಲ್ಲಿ ಉಜಳಣಿಯ ಪಾಠಕ್ರಮಗಳನ್ನು ಏರ್ಪಡಿಸುವದು ಅವಶ್ಯವಿದೆ. ಈ ಬಗೆಯ ಪಾಠಕ್ರಮಗಳು ಸಂಸ್ಕೃತಿ, ಉದ್ಯೋಗ, ಕೈಗಾರಿಕೆ ಮುಂತಾದವುಗಳ ಮೇಲೆ ಇರಬೇಕು.

೧೬ ಅಧ್ಯಾಪಕರ ಶಿಕ್ಷಣದ ಪ್ರತಿಯೊಂದು ಶಾಲೆಗೆ ಪ್ರಯೋಗ ಸಾಲೆಗಳಿರಬೇಕು. ಶಿಕ್ಷಣ ಪದ್ಧತಿಯಲ್ಲಿ ಹೊಸ ಸಂಗತಿಗಳನ್ನು ಕಂಡು ಹಿಡಿಯಲಿಕ್ಕೆ ಪ್ರಯತ್ನಿಸಲು ಹಾಗು ಬೆಳಸಲು ಇವು ಸಂಶೋಧನಾಲಯಗಳಾಗಬೇಕು. ವಿಶೇಷ ಅನುಭವವುಳ್ಳ ಶಿಕ್ಷಕರನ್ನು ಈಪ್ರಯೋಗಾಲಯಗಳಿಗೆ ನಿಯಮಿಸಬೇಕು. ಅವು ತಮ್ಮ ಸುತ್ತುಮುತ್ತಲಿನ ಪ್ರದೇಶಗಳಿಗೆ ಆದರ್ಶ ಶಾಲೆಗಳಾಗಿರಬೇಕು ಬೇರೆ ಬೇರೆ ಶಾಲೆಗಳಿಂದ ಬಂದ ಶಿಕ್ಷಕರಿಗೆ, ಈ ಪ್ರಯೋಗಶಾಲೆಗಳಲ್ಲಿ ನಡೆದಿರುವ ಶಿಕ್ಷಣಪದ್ಧತಿ–ಶಿಕ್ಷಣಸಾಧನ ವಿಧಾನಗಳನ್ನು ನೋಡಲು ಅವಕಾಶ ಕೊಡಬೇಕು.

೧೭. ಶಿಕ್ಷಣದಲ್ಲಿ ಕೈಕೆಲಸದ ಪ್ರವೇಶ, ಕಲಿಸುವ ವಿಷಯಗಳಲ್ಲಿಯ ಪೂರಕ ವೃತ್ತಿ, ಒಂದಕ್ಕೊಂದು ಸಂಬಂಧವಿರುವಿಕೆಗಳು, ಜೀವನಕ್ಕೆ ಶಿಕ್ಷಣದ ನಿಕಟಸಂಬಂಧ, ಕೆಲಸ ಮಾಡುತ್ತಲೇ ಕಲಿಯುತ್ತ ಹೋಗುವ ಪದ್ಧತಿ, ವೈಯಕ್ತಿಕ ಕಾರ್ಯಾರಂಭ ಪರತೆ, ಸಾಮಾಜಿಕ ಜವಾಬ್ದಾರಿಯ ಭಾವನೆ, ಇವೆಲ್ಲ ಹೊಸ ಶಿಕ್ಷಣ ಪದ್ಧತಿಯ ವೈಶಿಷ್ಟ್ಯಗಳು; ಇವುಗಳನ್ನು ಈಡೇರಿಸಲು ಹುಡುಗರಿಗೂ ಪ್ರಾಮುಖ್ಯವಾಗಿ ಶಿಕ್ಷಕರಿಗೂ ನಮ್ಮ ಉದ್ದೇಶವನ್ನು ಈಡೇರಿ

ಸಲು ಸಹಾಯವಾಗುವಂತಹ ಉಪಕರಣಗಳನ್ನೂ ಪುಸ್ತಕಗಳನ್ನೂ ಒದಗಿಸಿ ಕೊಡುವದು ಅತ್ಯವಶ್ಯವಿದೆ. ಅದರಂತೆ ಪರಸ್ಪರ ಸಂಬಂಧವುಳ್ಳ ಆವಶ್ಯ ವಾದ ಕಾರ್ಯಕ್ರಮವನ್ನು ತಯಾರಿಸಿ ಕೊಡುವದು ಬಹಳ ಮಹತ್ವದ್ದಿದೆ. ಹೊಸ ಚೇತನದಿಂದ ತುಂಬಿದ ಸಂಪೂರ್ಣ ನಾವೀನ್ಯತೆ ಪಡೆದ ಪಠ್ಯಪುಸ್ತಕ ಗಳ ಅತ್ಯಗತ್ಯವಿದೆ. ಈ ವಿಷಯದಲ್ಲಿ ಮಧ್ಯವರ್ತಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯೂ ಪ್ರತಿಯೊಂದು ಪ್ರಾಂತದ ಶಿಕ್ಷಣ ಸಮಿತಿಗಳೂ [ಅವುಗಳ ಸ್ಥಾಪ ನೆಯ ಅವಶ್ಯಕತೆಯನ್ನು ಮುಂದೆ ಕೊಟ್ಟಿದ್ದೇವೆ.] ಬಹಳ ಮಹತ್ವದ ಸಹಾ ಯವನ್ನು ಸಲ್ಲಿಸಬಲ್ಲವು. ಈ ಹೊಸ ಶಾಲೆಗಳು ಸ್ಥಾಪಿತವಾಗುವ ಪ್ರತಿ ಯೊಂದು ಪ್ರಾಂತಕ್ಕೂ ಅವಶ್ಯವಾದ ಈ ಸಲಕರಣೆಗಳನ್ನು ತಯಾರಿಸುವ ಏರ್ಪಾಡು ಆದಷ್ಟು ಬೇಗ ಮಾಡಬೇಕು.

೧೮. ಪರೀಕ್ಷೆಯ ವಿಷಯವನ್ನು ಚರ್ಚಿಸುವಾಗ ಪ್ರತಿಯೊಂದು ಪ್ರಾಂತದ ಶಿಕ್ಷಣ ಖಾತೆಯು ಶಾಲೆಗಳು ಮಾಡಿದ ಕಾರ್ಯಕಲಾಪಗಳು ಪಡೆದ ಯೋಗ್ಯತೆಗಳನ್ನು ನಿರ್ಧರಿಸುವದು—ಮಾಪನ ಮಾಡುವದು ಅವರ ಮುಖ್ಯ ಕರ್ತವ್ಯವೆಂದು ಮೊದಲೇ ಹೇಳಿದ್ದೇವೆ. ಪ್ರತಿಯೊಂದು ಪ್ರಾಂತದ ಶಿಕ್ಷಣ ಸಮಿತಿಯು ವಿದ್ಯಾಭ್ಯಾಸ ವಿಭಾಗದಲ್ಲಿ ಶಿಕ್ಷಣ ತಜ್ಞರನ್ನು ಇಟ್ಟು ಕೊಳ್ಳಬೇಕು; ತಜ್ಞರಾದ ಈ ಅಧಿಕಾರಿಗಳು ಪಾಠಕ್ರಮವು ಜನಜೀವನಕ್ಕೆ ಹೊಂದಿಕೆಯಾಗುವಂತೆ ಸಂಶೋಧನೆ ನಡೆಸಬೇಕು; ಈ ಸಂಶೋಧನೆಯಲ್ಲಿ ಸಿದ್ಧಿಸಿದ ಯೋಗ್ಯತೆ ಮಟ್ಟು ರೂಢಿಯಲ್ಲಿ ತರಲು ಶಿಕ್ಷರಿಗೆ ಮಾರ್ಗದರ್ಶಿ ಗಳಾಗಬೇಕು. ಈ ತಜ್ಞರು ಕಲಿಸುವ ಪ್ರಗತಿಪರ ಪದ್ಧತಿಯನ್ನು ರೂಢಿಯಲ್ಲಿ ತರಲು ಪ್ರಯತ್ನಿಸಬೇಕು; ಈ ದೇಶದಲ್ಲಿಯೂ, ಪರದೇಶದಲ್ಲಿಯೂ, ಕೈಕೊಂಡ ಯಶಸ್ವಿಯಾದ ಶಿಕ್ಷಣ ಪ್ರಯೋಗಗಳ ತಿಳುವಳಿಕೆಯನ್ನು ಉಪಾಧ್ಯಾಯರಿಗೆ ಮಾಡಿಕೊಡಬೇಕು ಹಾಗು ಇವರು ಶಿಕ್ಷಕರ ಹಾಗು ಮೇಲ್ವಿಚಾರಕರ ಶಿಕ್ಷಣದಲ್ಲಿ ಮಾರ್ಗದರ್ಶಿಗಳಾಗಿರಬೇಕು.

೧೯. ಸರಕಾರೀ ಶಿಕ್ಷಣ ಸಮಿತಿಗಳಲ್ಲದೆ, ಸರಕಾರೇತರ-ಸ್ವತಂತ್ರ ವಾದ ಮಧ್ಯವರ್ತಿ ಹಿಂದೀ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಲು ಸಲಹೆ ಕೊಡುತ್ತೇವೆ. ಈ ಸಂಸ್ಥೆಯು ಆಡಳಿತದ ಜವಾಬುದಾರಿಯಿಂದ ಸ್ವತಂತ್ರ ವಾಗಿರಬೇಕು; ಇದರಲ್ಲಿಯ ಸದಸ್ಯರು ಶಿಕ್ಷಣ ಕ್ಷೇತ್ರದಲ್ಲಿಯೂ, ಸಂಸ್ಕೃತಿ

ಚಟುವಟಿಕೆಗಳಲ್ಲಿಯೂ ವಿಖ್ಯಾತರಾದವರಿಸಬೇಕು. ಈ ಸಂಸ್ಥೆಯ ಉದ್ದೇಶಗಳು ಕೆಳಗಿನಂತಿರಬೇಕು.

೧ ಶಿಕ್ಷಣ ತತ್ವಗಳಿಗೂಆಚರಣೆಗಳಿಗೂ ಸಂಬಂಧಪಟ್ಟ ವಿಷಯಗಳಲ್ಲಿಯೂ ಸಲಹೆ ಕೊಡಬೇಕು.

೨ ಹಿಂದುಸ್ತಾನದಲ್ಲಿಯೂ, ಪರದೇಶಗಳಲ್ಲಿಯೂ ನಡೆಯುವ ಶಿಕ್ಷಣ ಪ್ರಯತ್ನಗಳಿಗೆ ತಳಹದಿಯಾದ ವಿಚಾರ ಹಾಗು ಉದ್ದೇಶಗಳನ್ನೂ ಅಭ್ಯಾಸ ಮಾಡಿ ಚರ್ಚಿಸುವದು; ಹಾಗು ಇದಕ್ಕೆ ಚಿತ್ತಗೊಡುವ ಯಾವತ್ತರಿಗೂ ಇದರ ಫಲವನ್ನು ನೀಡುವದು.

೩ ಪರದೇಶಗಳಲ್ಲಿಯ ಮತ್ತು ಹಿಂದುಸ್ತಾನದಲ್ಲಿಯ ಪ್ರಾಂತ-ಸಂಸ್ಥಾನಗಳಲ್ಲಿಯ ಶಿಕ್ಷಣ ಕೆಲಸದ ಮಾಹಿತಿಯನ್ನು ಮಾಡಿಕೊಳ್ಳುವದು ಹಾಗು ಅದರ ವಿಷಯಕ ಸುದ್ದಿ ಸಂಗತಿಗಳನ್ನು ತಿಳಕೊಳ್ಳುವದು.

೪ ಶಿಕ್ಷಣ ಸಮಸ್ಯೆಗಳಲ್ಲಿ ಸಂಶೋಧನ ನಡಿಸುವದು.

೫ ಶಿಕ್ಷಣ ಕ್ಷೇತ್ರದಲ್ಲಿಯ ಕೆಲಸಗಾರರಿಗಾಗಿ ಸ್ವತಂತ್ರ ಪತ್ರಿಕೆ ಪ್ರಕಟನೆಗಳನ್ನು ಹೊರಡಿಸುವದು.

ಮುಂದಿನ ನಾಗರಿಕಹಿತಗಳನ್ನು ನೋಡಿಕೊಳ್ಳಬೇಕಾದ ದೇಶದಲ್ಲಿಯ ಸಾರ್ವಜನಿಕ ಯೋಗಕ್ಷೇಮದ, ಸಂಸ್ಥಾನಗಳು ಒಂದಕ್ಕೊಂದು ಅನ್ಯೋನ್ಯ ಸಂಬಂಧವಿಲ್ಲದೆ ಕೆಲಸ ಮಾಡುತ್ತಿವೆಯೆಂಬುದು ಎಲ್ಲರಿಗೂ ತಿಳಿದ ಮಾತು.

ಆರೋಗ್ಯ–ಬೇಸಾಯ–ಸಹಕಾರೀ ಸಂಸ್ಥೆ–ಮುನಸಿಪಾಲಿಟಿ-ಲೋಕಲ್ ಬೋರ್ಡ ಮುಂತಾದ ಖಾತೆಗಳ ಸಹಕಾರ ಸಹಾನುಭೂತಿ ದೊರಕಿಸುವಂತಹ ಸ್ಥಿತಿಯಲ್ಲಿ ಶಿಕ್ಷಣ ಖಾತೆಯನ್ನಿಡಬೇಕು; ಅಂದರೆ ಮಾತ್ರ ಆರೋಗ್ಯಕರವಾದ ಸುಖಪ್ರದವಾದ ದಕ್ಷತೆಯುಳ್ಳ ಶಾಲಾಪಂಗಡ ತಯಾರಿಸುವದು ಸಾಧ್ಯವಿದೆಯೆಂದು ನಾವು ಹೃತ್ಪೂರ್ವಕವಾಗಿ ನಂಬಿದ್ದೇವೆ.

## ನೂಲುವ ಹಾಗು ನೇಯುವ ಕೈಗಾರಿಕೆ

ಇದರಲ್ಲಿ ನೂಲುವ ಹಾಗು ನೇಯುವ ಎರಡು ಬೇರೆ ಬೇರೆ ವಿಭಾಗಗಳನ್ನು ಮಾಡಿದೆ. ಮೂಲಭೂತ ಶಿಕ್ಷಣದ ಮೊದಲಿನ ಐದು ವರ್ಷಗಳಲ್ಲಿ

ನೂಲುವದನ್ನೂ ಕಡೆಯ ಎರಡು ವರ್ಷಗಳಲ್ಲಿ ನೇಯುವದನ್ನೂ ಕಲಿಸಲಾಗುವದು. ಹಾಗು ಕಡೆಯ ಎರಡು ವರ್ಷಗಳಲ್ಲಿ ಬಡಿಗತನ ಹಾಗು ಕಮ್ಮಾರಿಕೆಯ ಪ್ರಾರಂಭದ ಶಿಕ್ಷಣವೂ ದೊರೆಯುವದು.

ರೂಢಿಯ ಪಾಠಗಳಿಂದು ಹತ್ತಿ ಅರೆಯುವದನ್ನೂ ಸ್ವಚ್ಛ ಮಾಡುವದನ್ನೂ ಸಾಲೆಯಲ್ಲಿ ಪ್ರಾರಂಭಿಸುವದು ಅವಶ್ಯವು. ಸಾಲೆಯಲ್ಲಿ ಉಪಯೋಗಿಸುವ ಹತ್ತಿಯೆಲ್ಲ ಕೈರಾಟೆಯಿಂದಲೇ ಅರೆದದ್ದಿರಬೇಕು.

ನೂಲುವಾಗ, ನಡುವೆ ನೂಲು ಹರಿದಾಗಲಿ ಅಥವಾ ಮತ್ತೆ ಬೇರೆ ಕಾರಣದಿಂದಾಗಲಿ, ಅರಳೆಯು ಕೆಟ್ಟುಹೋಗಿ ಹಾನಿಯು ಆಗದಂತೆ ನೋಡುವದು ಶಿಕ್ಷಕರ ಕರ್ತವ್ಯ. ನೂರಕ್ಕೆ ಹತ್ತರಷ್ಟು ಒದಗುವ ಹಾನಿಯು ಕ್ಷಮ್ಯವಾದದ್ದು. ಅರಳೆಯ ಬೆಲೆಯನ್ನು ಕಟ್ಟುವಾಗ ಈ ಹಾನಿಯನ್ನು ಕೂಡಿಸಿಯೇ ಲೆಕ್ಕ ಮಾಡುವದರಲ್ಲಿ ಬರುವದು.

ಪ್ರತಿದಿನ ಔದ್ಯೋಗಿಕ ಶಿಕ್ಷಣವನ್ನು ೩ ತಾಸು ೨೦ ನಿಮಿಷ ಕೊಡಲಾಗುವದು. ವರ್ಷದಲ್ಲಿ ಸಾಲೆಯಿರುವ ದಿನಗಳು ೨೮೮.

ಹಿಂಜುವಾಗ ಮೊದಲನೆಯ ವರ್ಷ ಹತ್ತಿಯನ್ನು ಸ್ವಚ್ಛ ಮಾಡುವದು, ಹಂಜಿ ಮಾಡುವದು, ಟಕಳಿಯ ಮೇಲೆ ನೂಲು ತೆಗೆಯುವದು ಇವುಗಳನ್ನು ಕಲಿಸಲಾಗುವದು.

ಎರಡನೆಯ ವರ್ಷ ಕಟ್ಟಿಗೆಯ ಹಲಿಗೆಯ ಮೇಲೆ ಕಬ್ಬಿಣ ಸಲಾಕೆಯಿಂದ ಹತ್ತಿ ಅರೆಯುವದನ್ನು ಕಲಿಸಲಾಗುವದು; ಈ ಬಗೆಯಿಂದ ಅರೆಯುವದು ನೆಟ್ಟಗೆ ಬರಲಿಕ್ಕೆ ಹತ್ತಿದಮೇಲೆ ರಾಟೆಯ ಮೇಲೆ ಅರೆಯುವದು ಪ್ರಾರಂಭಿಸಲ್ಪಡುವದು. ಇಷ್ಟರಲ್ಲಿ ಹೆಚ್ಚು ತೀವ್ರವಾಗಿ ನೂಲುವದು ಬರುತ್ತಿರಬೇಕು. ಮೂರನೆಯ ವರ್ಷ ಬೇರೆ ಬೇರೆ ಬಗೆಯ ಹತ್ತಿಯನ್ನು ಗುರುತಿಸಲು ಕಲಿಸಲ್ಪಡುವದು ವಿದ್ಯಾರ್ಥಿಗಳಿಗೆ ಈ ಸಮಯಕ್ಕೆ ಪ್ರತಿಯೊಂದು 'ಜಾತಿಯ ಹತ್ತಿಯು ಯಾವ ನಂಬರಿನ ನೂಲನ್ನು ತೆಗೆಯಲು ಉಪಯೋಗಿಸಲ್ಪಡಬೇಕೆಂಬದನ್ನು ಕಲಿಸಲಾಗುವದು.

ನಾಲ್ಕನೆಯ ವರ್ಷ ನೂಲಿನ ಗಟ್ಟಿತನವನ್ನು ಅದು ಸಣ್ಣ ಇಲ್ಲವೆ ಗಡುತರ ಆಗದಂತೆ ಕಂಡುಕೊಳ್ಳುವದನ್ನು ಕಲಿಸಲಾಗುವದು. ಹತ್ತಿ ಅರೆಯುವ

ರಾಟಿ ಅಥವಾ ಹಿಂಜುವ ಬಿಲ್ಲು ಕೆಟ್ಟರೆ ಅದನ್ನು ದುರಸ್ತ ಮಾಡಿಕೊಳ್ಳಲಿಕ್ಕೆ ಈಗ ವಿದ್ಯಾರ್ಥಿಯು ಕಲಿಯುತ್ತಾನೆ. ಇವಲ್ಲದೆ ಯರವಡಾದ ರಾಟಿಯ ಬೇರೆ ಬೇರೆ ಭಾಗಗಳ ಜ್ಞಾನವೂ, ಬಿದರಿನ ಟಕಳಿಯನ್ನು ಮಾಡುವದನ್ನೂ ವಿದ್ಯಾರ್ಥಿಯು ಕಲಿಯಬೇಕಾಗುವದು.

ಆಂಧ್ರ ಪದ್ಧತಿಯ ಮೇರೆಗೆ ಹತ್ತಿ ಅರೆಯುವದನ್ನೂ, ಹಿಂಜುವದನ್ನೂ ಐದನೆಯ ವರ್ಷ ಕಲಿಸಲಾಗುವದು. ೬೦ ನಂಬರಿನ ನೂಲನ್ನು ತೆಗೆಯಲು ಶಕ್ತನಾಗುವಷ್ಟು ಶಿಕ್ಷಣವು ಕೊಡಲ್ಪಡುವದು.

ಐದು ವರ್ಷಗಳಲ್ಲಿ ಪ್ರತಿಯೊಬ್ಬ ಹುಡುಗನ ಉತ್ಪನ್ನ

| | | | |
|---|---|---|---|
| ಮೊದಲನೆ ವರ್ಷ | ೩ | ೯ | ೦ |
| ಎರಡನೆಯ ,, | ೯ | ೫ | ೩ |
| ಮೂರನೆಯ ,, | ೧೧ | ೯ | ೯ |
| ನಾಲ್ಕನೆಯ ,, | ೧೫ | ೧೧ | ೩ |
| ಐದನೆಯ ,, | ೧೫ | ೯ | ೯ |
| ಐದು ವರ್ಷಗಳಲ್ಲಿಯ ಒಟ್ಟು ಉತ್ಪನ್ನ | ೫೫ | ೧೩ | ೦ |

ಇದರಲ್ಲಿ ರೂಪಾಯಿಗೆ ನಾಲ್ಕು ಆಣೆಯಂತೆ ಕಡಿಮೆ ಉತ್ಪನ್ನವನ್ನು ಹಿಡಿದರೆ ಅದು ೪೧-೧೩-೯ ಆಗುತ್ತದೆ.

## ನೇಯುವದು

ನೇಯ್ಗೆಯ ಕಲೆಯು ಬಹಳ ದೊಡ್ಡದಿದೆ. ಅದು ಎರಡೇ ವರ್ಷಗಳಲ್ಲಿ ಪೂರಾ ಮುಗಿಯುವ ಶಿಕ್ಷಣವಲ್ಲ. ಈ ಎರಡು ವರ್ಷಗಳಲ್ಲಿ ಕೊಡುವ ನೇಯ್ಗೆಯ ಶಿಕ್ಷಣವು ಕೇವಲ ಪ್ರಾರಂಭದ್ದಿರುತ್ತದೆ. ಈ ವಿದ್ಯೆಯ ಪರಿಪೂರ್ಣ ಜ್ಞಾನವನ್ನು ಸಂಪಾದಿಸುವ ಇಚ್ಛೆಯುಳ್ಳ ವಿದ್ಯಾರ್ಥಿಯು ಈ ಎರಡು ವರ್ಷಗಳ ತರುವಾಯ ಈ ಶಿಕ್ಷಣವನ್ನು ಮುಂದುವರಿಸಬೇಕು.

ಈ ಸ್ಥಿತಿಯಲ್ಲಿ ವಿದ್ಯಾರ್ಥಿಯು ೧೩-೧೪ ವರ್ಷದವನಿರುತ್ತಾನೆ. ಈಗ ಒದಗಿಸಲಾಗುವ ನೇಯ್ಗೆಯ ಶಿಕ್ಷಣವು ಪ್ರಾಥಮಿಕವು.

ಐದು ವರ್ಷಗಳ ಕೊನೆಗೆ ವಿದ್ಯಾರ್ಥಿಗೆ ನೂಲುವ ಜ್ಞಾನವು ತಕ್ಕ ಮಟ್ಟಿಗೆ ಚನ್ನಾಗಿಯೇ ಆಗಿರುತ್ತದೆ. ಇನ್ನು ಮುಂದಿನ ವೇಳಾಪತ್ರಿಕೆಯಲ್ಲಿ ನೂಲಲು ಸಮಯವನ್ನಿತ್ತಿಲ್ಲ; ಆದರೆ ವಿದ್ಯಾರ್ಥಿಗಳು ಮನೆಯಲ್ಲಿ ನೂಲು ತೆಗೆಯುವದು ಯೋಗ್ಯವಾದದ್ದು. ಹಾಗೆ ನೂತ ನೂಲನ್ನು ಕೊಳ್ಳುವದು ಇಲ್ಲವೆ ಅದಕ್ಕೆ ಯೋಗ್ಯವಾದ ಅರಿವೆಯನ್ನು ತಿರುಗಿ ಕೊಡುವ ವ್ಯವಸ್ಥೆಯನ್ನು ಶಾಲೆಯವರು ಮಾಡಬೇಕು.

ನೇಯ್ಗೆಯನ್ನು ಕಲಿಸುವ ಮೊದಲ ವರ್ಷ ಖಂಡಿಕೆ ಮಾಡುವದು, ತುದಿ ಕೂಡಿಸುವದು, ನೂಲನ್ನು ಹಂಚುವದು, ಅಳತೆ ಇಟ್ಟುಕೊಳ್ಳುವದು ಮುಂತಾದ ವಿಷಯಗಳು ಕಲಿಸಲ್ಪಡುವವು. ಈ ವರ್ಷ ವಿದ್ಯಾರ್ಥಿಯು ೧೦೮ ಯಾರ್ಡು (ಗಜ) ಅರಿವೆಯನ್ನು ನೇಯುತ್ತಾನೆ; ಹಾಗು ಆ ಅರಿವೆಯ ಬೆಲೆ ೮—೭—೦ ಆಗುತ್ತದೆ.

ಎರಡನೆಯ ವರ್ಷ ಬೇರೆ ಬೇರೆ ತರದ (Pattern) ನೇಯ್ಗೆಯು ಕಲಿಸಲ್ಪಡುವದು; ಅಂಗವಸ್ತ್ರಗಳನ್ನು, ಬಣ್ಣಬಣ್ಣದ ಕೋಟಿನ ಅರಿವೆಗಳನ್ನು ನೇಯಲು ಕಲಿಯುವದು.

ಎರಡು ವರ್ಷಗಳಲ್ಲಿ ವಿದ್ಯಾರ್ಥಿಯ ನೇಯ್ಗೆಯ ಉತ್ಪನ್ನವು ಕೆಳಗಿನಂತಿದೆ.

| | | | |
|---|---|---|---|
| ಮೊದಲ ವರ್ಷ | ೮ | ೭ | ೦ |
| ಎರಡನೆಯ ವರ್ಷ | ೧೬ | ೧೪ | ೦ |
| ಒಟ್ಟು | ೨೫ | ೫ | ೦ |

ಇದರಲ್ಲಿ ರೂಪಾಯಿಗೆ ನಾಲ್ಕಾಣೆಯಂತೆ ಉತ್ಪನ್ನವನ್ನು ಕಡಿಮೆ ಹಿಡಿದರೆ ಅದು ೧೮—೧೫—೯ ಆಗುವದು.

ಅಲ್ಲದೆ, ಹಗ್ಗ ಮಾಡುವದು, ಬೇರೆ ಬೇರೆ ಚಿತ್ರಗಳುಳ್ಳ ಗುಡಾರಗಳನ್ನು ತಯಾರಿಸುವದು, ಮುಂತಾದವುಗಳನ್ನೂ ಕಲಿಸಲಾಗುವದು.

ಈ ಏಳು ವರ್ಷಗಳ ಶಿಕ್ಷಣದಲ್ಲಿ ವಿದ್ಯಾರ್ಥಿಯು ನೂತ ಹಾಗು ನೇಯ್ದ ಉತ್ಪನ್ನವು ಕೆಳಗಿನಂತಿದೆ.

| | | | |
|---|---|---|---|
| ಸೂತದ್ದು | ೪೧ | ೧೯ | ೩ |
| ನೇದದ್ದು | ೧೮ | ೧೫ | ೯ |
| ಒಟ್ಟು | ೬೦ | ೧೩ | ೬ |

ಕಲಿಸುವ ಶಿಕ್ಷಕರ ಪಗಾರ ತಿಂಗಳಿಗೆ ೨೫ ರೂಪಾಯಿಗಳಂತೆ ಏಳು ವರ್ಷಗಳ ಪಗಾರವು ೨೧೦೦ ರೂಪಾಯಿ ಆಗುತ್ತದೆ.

೩೦ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕನಂತೆ ಏಳು ವರ್ಷಗಳಲ್ಲಿ ವಿದ್ಯಾರ್ಥಿಯ ಉತ್ಪನ್ನ } ೧೮೨೫ ರೂ. ಆಗುತ್ತದೆ.

## ಮಹತ್ವದ ಕೆಲವು ಸೂಚನೆಗಳು

ಮೇಲೆ ತೋರಿಸಿದ ಶಿಕ್ಷಣ ಕ್ರಮವು ನಿಶ್ಚಿತವೆಂದು ನಾವು ತಿಳಿಯಬೇಕಾಗಿಲ್ಲ. ಇದರಲ್ಲಿ ಎಷ್ಟೋ ಸುಧಾರಣೆಗಳು ಅವಶ್ಯವಿರಬಹುದು. ಆದರೂ ಶಿಕ್ಷಕರ ಪಗಾರದ ಸಮಸ್ಯೆಯನ್ನು ಬಹುಮಟ್ಟಿಗೆ ಬಿಡಿಸಬಲ್ಲದು.

ಉದ್ಯೋಗವನ್ನು ಶಿಕ್ಷಣದ ತಳಹದಿಯನ್ನಾಗಿ ಮಾಡಿಕೊಂಡಿರುವದರಿಂದ ಇದನ್ನು ಒಂದು ಉದ್ಯೋಗವೆಂದು ಕಲಿಸುವದಿಷ್ಟೇ ಅಲ್ಲ, ಆದರಲ್ಲಿಯ ಸುಧಾರಣೆ, ಕೆಲಸದ ಗತಿ ಇವುಗಳ ಕಡೆಗೂ ಲಕ್ಷ್ಯ ಪೂರೈಸಲಾಗುವದು.

ವಿದ್ಯಾರ್ಥಿಯು ದೊರಕಿಸುವ ಉತ್ಪನ್ನವು ಮೇಲೆ ಕಾಣಿಸಿದ್ದಕ್ಕಿಂತ ಕಡಿಮೆಯಾದರೆ ಅದು ಶಿಕ್ಷಕರ ದೌರ್ಬಲ್ಯವನ್ನು ವ್ಯಕ್ತಮಾಡುತ್ತದೆ. ಅಲ್ಲದೆ ಉಪಕರಣಗಳು ಅಯೋಗ್ಯವಾದವುಗಳೆಂಬದನ್ನು ತೋರಿಸುತ್ತದೆ.

ಈ ಶಿಕ್ಷಣದಲ್ಲಿ ವಿದ್ಯಾರ್ಥಿಯು ಯೋಗ್ಯವಾಗಿ ತೇರ್ಗಡೆ ಹೊಂದಿದನೆಂಬದನ್ನು ನೋಡಲು ಒಂದು ದಾರಿಯಿದೆ. ಅದೆಂದರೆ ಅವನು ಗಳಿಸುವ ಉತ್ಪನ್ನವು ಅವನು ದಿನಾಲು ೩ ತಾಸಿನಂತೆ ಎರಡು ತಿಂಗಳು ಕೆಲಸ ಮಾಡಿದರೆ ೧೨ ರೂ. ಆಗುವದು. (ದಿನಾಲು ೦–೪–೦ ಯಂತೆ).

ಈ ಶಿಕ್ಷಣ ಪದ್ಧತಿಯು ವಿದ್ಯಾರ್ಥಿಯನ್ನು ತನ್ನ ಕಾಲಮೇಲೆ ತಾನು ನಿಲ್ಲಲು ಯೋಗ್ಯನನ್ನಾಗಿ ಮಾಡುವದು.

ಪ್ರತಿಯೊಂದು ತರಗತಿಯಲ್ಲಿಯೂ ಮೂವತ್ತು ವಿದ್ಯಾರ್ಥಿಗಳಂತೆ ಏಳು ತರಗತಿಗಳುಳ್ಳ ಶಾಲೆಗೆ ನೂಲಲಿಕ್ಕೆ, ಹಿಂಜಲಿಕ್ಕೆ, ನೇಯಲಿಕ್ಕೆ ಹತ್ತುವ ಸಾಮಾನುಗಳ ಪಟ್ಟಿ—

| | | ಪ್ರತಿಯೊಂದರ ಬೆಲೆ: | | | ಒಟ್ಟು ಬೆಲೆ: | | |
|---|---|---|---|---|---|---|---|
| ೧ | ೧೨೫ ಮಡಿಚುವ ರಾಟಿಗಳು | ೨ | ೮ | ೦ | ೩೧೨ | ೮ | ೦ |
| ೨ | ೨೫ ಸೆಟ್ಟು ಹಿಂಜುವ ಸಾಮಗ್ರಿ | ೧ | ೧೧ | ೦ | ೪೨ | ೩ | ೬ |
| ೩ | ೫೦ ಟಕಳಿಗಳು ಮತ್ತು ೫೦ ಹಾಸುಗಳು | ೦ | ೨ | ೯ | ೮ | ೯ | ೦ |
| ೪ | ಕೈಯಿಂದ ಹತ್ತಿ ಅರೆಯುವ ೫ ರಾಟಿಗಳು | ೧ | ೧೦ | ೦ | ೮ | ೨ | ೦ |
| ೫ | ಕಟ್ಟಿಗೆಯ ಹಲಿಗೆಗಳು ಮತ್ತು ಹಿತ್ತಾಳಿಯ ಪಿನ್ನುಗಳು | ೦ | ೫ | ೦ | ೪ | ೧೧ | ೦ |
| ೬ | ಮಗನ್ ಚರಖಾ ಐದು | ೬ | ೦ | ೦ | ೩೦ | ೦ | ೦ |
| ೭ | ಸಾವಳಿ ಚರಖಾ ,, | ೧ | ೪ | ೦ | ೬ | ೪ | ೦ |
| ೮ | ೨೦ ಮಗಗಳು (ಎಲ್ಲ ಸಾಮಾನು ಸಹಿತ) | ೨೫ | ೦ | ೦ | ೫೦೦ | ೦ | ೦ |
| ೯ | ಕಿರುಕುಳ ಸಾಮಾನುಗಳು | | | | ೬೨ | ೧೦ | ೬ |
| | | | | ಒಟ್ಟು ರೂ. | ೧೦೦೦ | ೦ | ೦ |

ಮೇಲೆ ಕಾಣಿಸಿದ್ದು ಅಂದಾಜು ಬೆಲೆ; ಪೇಟೆಯ ಧಾರಣೆಯು ಮೇಲೆ ಹಾಗು ಜಿಲ್ಹೆಯಿಂದ ಜಿಲ್ಹೆಗೆ ಸಾಮಾನುಗಳ ಬೆಲೆ ಹೆಚ್ಚುಕಡಿಮೆಯಾಗುವದು ಸ್ವಾಭಾವಿಕವದೆ.

## ಚಿಲ್ಲರ ಸಾಮಾನುಗಳು

| | | | |
|---|---|---|---|
| ನೂಲಲಿಕ್ಕೆ ಬೇಕಾಗುವ ಟಕಳಿ, ಹಾಸು, ಯರವಡಾ ಚರಖಾ ಮುಂ. ಗಳ ಒಟ್ಟು | ೩ | ೧ | ೦ |
| ಹತ್ತಿ ಅರೆಯಲಿಕ್ಕೆ ಬೇಕಾಗುವ ಹಲಿಗೆ, ಕಬ್ಬಿಣ ಸಳಾಕೆ | ೨ | ೩ | ೦ |

| | | | |
|---|---|---|---|
| ಹಿಂಜಲಿಕ್ಕೆ ಬೇಕಾಗುವ ಬಿಲ್ಲು ಮುಂ. | ೨ | ೦ | ೦ |

**ಬಡಿಗತನದ ಸಾಮಾನುಗಳು**

| | | | |
|---|---|---|---|
| ಸುತ್ತಿಗೆ, ಅಡಗಲ್ಲು, ಸಣ್ಣ ಕರಗಸ, ತೂತು ಕೊರೆಯುವ ಯಂತ್ರ, ಚಾಕು, ಕತ್ತರಿ, ಸ್ಕ್ರೂ ತಿರುಗಿಸುವದು, ತಕ್ಕಡಿ ಮುಂ. ಇತರ ಸಾಮಾನುಗಳಿಗೆ | ೧೨ | ೧೨ | ೦ |
| ನೇಯುವದಕ್ಕೆ ಬೇಕಾಗುವ ಸಾಮಾನುಗಳ ಬೆಲೆ | ೧೯ | ೧೧ | ೦ |

ಇದಕ್ಕೆ ಅವಶ್ಯವಾಗಿ ಬೇಕಾದ ಭಂಡವಲು—

| | |
|---|---|
| ಹತ್ತಿಯ ಸಂಗ್ರಹ | ೩೦೦–೦–೦ |
| ನೂಲುವ ರಾಟಿ ಹಾಗು ಬೇರೆ ಸಾಮಾನುಗಳ ಸಂಗ್ರಹ | ೧೦೦–೦–೦ |
| ನೇಯುವ ಸಾಮಾನುಗಳು ಹಾಗು ಹಂಜಿ | ೧೦೦–೦–೧ |
| ಒಟ್ಟು ರೂ. | ೫೦೦–೦–೦ |

# ಮೂಲ ಉದ್ಯೋಗ; ಒಕ್ಕಲತನ.

ಈ ಅಭ್ಯಾಸ ಕ್ರಮದಲ್ಲಿ ಎರಡು ಭಾಗಗಳಿಗೆ ಮೊದಲಿನ ಭಾಗವು ಒಂದರಿಂದ ಐದು ತರಗತಿಯ ವರೆಗೆ ಸಂಬಂಧಿಸಿದ್ದಿರುತ್ತದೆ. ಈ ಸಮಯದಲ್ಲಿ ಬೇಸಾಯವು ಮುಖ್ಯ ಉದ್ಯಮವೆಂದು ಗಣಿಸಲಾಗುವದಿಲ್ಲ. ಭೂಮಿಯನ್ನು ಹದಮಾಡುವದು, ಸಸಿಗಳ ಬೆಳವಣಿಗೆಯ ವಿಷಯಕವಾದ ಮೂಲ ತತ್ವಗಳನ್ನು ಹೇಳುವದು ಹಾಗು ಅವುಗಳಲ್ಲಿ ಅಭಿರುಚಿ ಹುಟ್ಟುವಂತೆ ಮಾಡುವದು ಇದಕ್ಕನುಗುಣವಾದ ಒಂದು ಪಾಠವಿಷಯವನ್ನು ತಯಾರಿಸಬೇಕು. ಈ ಪಾಠವಿಷಯವು ಸಾಮಾನ್ಯ ವಿಜ್ಞಾನದ ಒಂದು ಭಾಗವಾಗುವದು. ವಿದ್ಯಾರ್ಥಿಗಳು ಒಂದು ಎಕರೆಯಷ್ಟು ಭೂಮಿಯಲ್ಲಿ ಕೆಲಸ ಮಾಡುವರು ಮತ್ತು ತೋಟದಲ್ಲಿ ಮತ್ತೆ ಇತರ ಬೆಳೆಗಳನ್ನು ಬೆಳೆಯುವರು.

ಬೇಸಾಯದ ಎರಡನೇ ಭಾಗವು ಆರು ಮತ್ತು ಏಳನೇ ತರಗತಿಗಳಿಗೆ ಸಂಬಂಧಿಸಿದ್ದಾಗಿದೆ. ಆಗ ವಿದ್ಯಾರ್ಥಿಗಳು ಒಕ್ಕಲತನವನ್ನು ಮೂಲ ಉದ್ಯೋಗವೆಂದು ತಕ್ಕೊಳ್ಳಬಹುದು.

ಮೊದಲನೆಯ ತರಗತಿಯಲ್ಲಿ ಹುಡುಗರು ಏಳು ವರ್ಷದವರಿರುತ್ತಾರೆ. ತೋಟಗಾರಿಕೆಯ ಶಿಕ್ಷಣವು ಅಲ್ಪ ಪ್ರಮಾಣದ ಮೇಲೆ ಮಾದರಿಯ ತೋಟಗಳಲ್ಲಿ ನಡೆಯಬೇಕು. ಹುಡುಗರು ಸಣ್ಣ ಕುರುಚಿಗಳನ್ನೂ, ಬಿಂದಿಗೆಗಳನ್ನೂ ಉಪಯೋಗಿಸಬೇಕು. ಶಾಲೆಗೆ ಪ್ರವೇಶಿಸಿದ ಮೊದಲಿನ ಆರು ತಿಂಗಳಲ್ಲಿ ಹುಡುಗರು ನಿರೀಕ್ಷಣೆ ಮಾಡಬೇಕು. ಅವರ ಕಡೆಯಿಂದ ಕಡೆಯ ಆರು ತಿಂಗಳಲ್ಲಿ ವೃತ್ತಿಶಿಕ್ಷಣದ ಪ್ರತ್ಯಕ್ಷ ಅಭ್ಯಾಸ ಮಾಡಿಸಬೇಕು. ಕೃಷಿಯ ಶಾಸ್ತ್ರಯುಕ್ತ ಅಭ್ಯಾಸವನ್ನು ಮನೋರಂಜಕ ರೀತಿಯಲ್ಲಿ ಮಾಡಿಸಬೇಕು. ಅದರ ರೂಪ-ರೇಷೆಗಳನ್ನಷ್ಟು ಕಲಿಸಬೇಕು. ಅದರ ಸಂಪೂರ್ಣ ಅಭ್ಯಾಸವನ್ನು ಕ್ರಮಶಃ ಹಿಂದುಗಡೆ ಮಾಡಿಸಲಾಗುವದು. ಅದನ್ನು ಸಾರಾಂಶ ರೂಪದಿಂದ ಕೆಳಗೆ ಕೊಟ್ಟಿದೆ.

ಮೊದಲನೇ ತರಗತಿಯಲ್ಲಿ ಮಡಿಗಳಲ್ಲಿ ಬೀಜಹಾಕುವದು, ಅವಕ್ಕೆ ನೀರುಣಿಸುವದು, ಬೀಜ ಮೊಳಕೆಗಳನ್ನು ರಕ್ಷಿಸುವದು, ಕಳೆ ತೆಗೆದು ಗೊಬ್ಬರ ಹಾಕುವದು, ತೋಟದಲ್ಲಿ ಹೂ-ಹಣ್ಣು, ಕಾಯಿ-ಪಲ್ಲೆಗಳ ಜೀಜಗಳನ್ನು ಆರಿಸುವದು, ದನಗಳ ಆರೈಕೆ, ಇವೆಲ್ಲವುಗಳನ್ನು ಕಲಿಯಬೇಕಾಗುವದು. ಅಲ್ಲದೆ ಸಸಿಯು ಯಾತರದೆಂದು ಗುರುತಿಸುವದು, ಅವರ ಬೇರೆ ಬೇರೆ ವಿಭಾಗಗಳನ್ನು ಅಂದರೆ, ಬೇರು-ಬೊಡ್ಡೆ-ಎಲೆ-ಹೂ ಹಣ್ಣುಗಳನ್ನು ಗುರುತಿಸುವದು, ಬೀಜದಿಂದ ಮೊಳಕೆ ಹೇಗೆ ಒಡೆಯುತ್ತದೆಂಬದನ್ನೂ, ಮುಂದೆ ಬೆಳೆಯುತ್ತ ಹೋದ ಹಾಗೆ, ಹೇಗೆ ಫಲ ಬಿಡುತ್ತದೆಯೆಂಬುದನ್ನೂ ಕಲಿಯುವದು ಆ ಸಸಿಯ ಬೆಳವಣಿಗೆಗೆ ಅವಶ್ಯವಾಗಿ ಬೇಕಾಗುವ ಅವಶ್ಯಕತೆಗಳು. ಭೂಮಿ-ನೀರು-ಗೊಬ್ಬರ-ಗಾಳಿ ಬೆಳಕು ಪ್ರಾಣಿ-ಪಕ್ಷಿಗಳಿಂದಾಗುವ ಉಪಯೋಗ, ಇವುಗಳ ಜ್ಞಾನವಲ್ಲದೆ, ಹುಡುಗರನ್ನು ಊರಲ್ಲಿಯ ಹೊಲ ತೋಟಗಳನ್ನು ನಿರೀಕ್ಷಿಸುವ ಉದ್ದೇಶದಿಂದ ಅಲ್ಲಿಗೆ ಕರೆದುಕೊಂಡು ಹೋಗಬೇಕು.

ಎರಡನೆಯ ತರಗತಿಯಲ್ಲಿ ಮೇಲೆ ಹೇಳಿದ ಸಂಗತಿಗಳ ವಿಷಯವಾಗಿ ಹೆಚ್ಚಿಗೆ ಶಿಕ್ಷಣ ಕೊಡಲಾಗುವದು. ಸಸಿಗಳನ್ನು ಹಚ್ಚಲು ಬರಬೇಕು. ಅಳತೆಗೆ ಸರಿಯಾಗಿ ಅವುಗಳನ್ನು ಹಚ್ಚಿಸಬೇಕು. ಗಿಡದ ಭಾಗಕ್ಕೆ ರೋಗ ಹತ್ತಿದ್ದರೆ ಮತ್ತು ಕೆಟ್ಟ ಹುಳ ಹತ್ತಿದ ಎಲೆ ತಿನ್ನುತ್ತಿದ್ದರೆ, ಅವುಗಳನ್ನು ನಿವಾರಿಸಬೇಕು.

ಇದೇ ಸಮಯದಲ್ಲಿ ಕಲಮು ಮಾಡುವದನ್ನು ಕಲಿಸಲಾಗುವದು. ಕಲೆ ಹಾಗು ವೃತ್ತಿ-ಶಿಕ್ಷಣದ ವಿಷಯವಾಗಿ ಹೇಳುವದಾದರೆ, ತೋಟದಲ್ಲಿ ಕ್ಷೇತ್ರಗಣಿತದ ಆಕೃತಿಗಳನ್ನು ತೆಗೆದು ಅಲ್ಲಿ ಮಡಿಗಳನ್ನು ಮಾಡುವದು, ಹೂ-ಸರಗಳನ್ನು ಮಾಲೆಗಳನ್ನು ಮಾಡುವದು, ಜೋತುಬಿಡುವ ಹೂ-ಬಳ್ಳಿಗಳ ಮಡಿಗಳನ್ನು ತಯಾರಿಸುವದು. ಅಲ್ಲದೆ, ಶಾಸ್ತ್ರೀಯವಾಗಿ ಮುಂದಿನ ಸಂಗತಿಗಳು ತಿಳಿಸಲ್ಪಡುವವು ಮಡಿಮಾಡಲು ಯೋಗ್ಯವಾದ ಸ್ಥಳವನ್ನು ಆರಿಸುವದು, ಭೂಮಿಯಗುಣ ಹಾಗು ಅದಕ್ಕೆ ಬೇಕಾಗುವ ಗೊಬ್ಬರ, ಬೀಜಪರೀಕ್ಷೆ, ಮೊಳಕೆ ಒಡೆಯುವದಕ್ಕೂ ಬೀಜದ ಗುಣಕ್ಕೂ ಇರುವ ಸಂಬಂಧ, ಸಸಿಯ ಬೇರೆ ಬೇರೆ ಅಂಗಗಳ ಕಾರ್ಯಕಲಾಪಗಳು, ಎಂದರೆ ಬೇರು ಭೂಮಿಗೆ ಅಂಟಿಕೊಳ್ಳುವಿಕೆ, ತನಗೆ ಬೇಕಾದ ಆಹಾರಸಾಮಗ್ರಿಗಳನ್ನು ಭೂಮಿಯಿಂದ ಹೀರಿಕೊಳ್ಳುವ ಅದರ ಸಾಮರ್ಥ್ಯ ಮುಂತಾದವುಗಳು.

ಮೂರನೆ ತರಗತಿಯಲ್ಲಿ ಹೂ ಮತ್ತು ಕಾಯಿಪಲ್ಲೆ ತೋಟದಲ್ಲಿಯ ಯಾವತ್ತು ಕೆಲಸವನ್ನು ಸಣ್ಣ ಗುದ್ದಲಿ, ಸಲಿಕೆ, ಕೊಡಲೆ, ಮುಂತಾದವುಗಳಿಂದ ಹುಡುಗರೇ ಮಾಡಬೇಕು.

ಹಿಂದಿನ ಎರಡು ತರಗತಿಗಳಲ್ಲಿ ಮಾಡಿದ ಪ್ರತ್ಯಕ್ಷ ಶಿಕ್ಷಣದ ಪುನರಾವೃತ್ತಿ ಮಾಡುವದು, ಕುಂಡೆಯಲ್ಲಿಯೂ ಹೂವಿನ ಮಡಿಕೆಗಳಲ್ಲಿಯೂ ಗಿಡ ಹಚ್ಚುವದು, ಕಲಮುಗಳನ್ನು ನೆಡುವದು; ಗೊಬ್ಬರ ಹಾಕಿದ ಹಾಗು ಹಾಕದಿದ್ದ ಗಡಿಗೆಯಲ್ಲಿ ಆಗೆಗಳ ಬೆಳವಣಿಗೆಯನ್ನು ಪರೀಕ್ಷಿಸುವದು, ಪ್ರಾಣಿಗಳನ್ನು ಸಾಕುವದು ಮುಂತಾದವು.

ಇಲ್ಲಿ ಬೇಸಾಯವನ್ನು ಶಾಸ್ತ್ರೀಯವಾಗಿಯೂ ಅಭ್ಯಾಸ ಮಾಡಬೇಕಾಗುತ್ತದೆ. ಮೊಳಕೆ ಒಡೆದ ಬೀಜಗಳ ಅಭ್ಯಾಸ, ಬೇರು ನೆಲದಲ್ಲಿ ಹೋಗುವದೂ ಮೊಳಕೆ ಮೇಲಕ್ಕೆ ಬೆಳೆಯುವದೂ, ಅದರಂತೆ ಬೇರಿನ ಹಾಗು ಅತಿ ಸೂಕ್ಷ್ಮವಾದ ಬೇರುಗಳ ಪರಿಚಯವೂ ಇದರಲ್ಲಿ ಅಡಕವಾಗಿವೆ.

ಈ ತರಗತಿಯಲ್ಲಿ ಬೆಳೆಗೆ ಸಂಬಂಧಪಟ್ಟ ಕ್ರಿಮಿ-ಕೀಟಗಳ ಅಭ್ಯಾಸವನ್ನೂ ಮಾಡಬೇಕಾಗುವದು. ಉದಾ:— ಪಾತರಗಿತ್ತಿಯ ಹಾಗು ಚಿಟ್ಟೆಯ ಜೀವನದ ಇತಿಹಾಸ, ಅವು ಬೆಳೆಗಳ ಮೇಲೆ ಮಾಡುವ ಪರಿಣಾಮ, ಲಾಭಹಾನಿ,

ಅದರಂತೆ ಬೇರೆ ಬೇರೆ ತರದ ಗೊಬ್ಬರ ಮತ್ತು ಕೃತ್ರಿಮ ಗೊಬ್ಬರಗಳ ಅಭ್ಯಾಸ ವನ್ನೂ ಮಾಡಬೇಕು.

ನಾಲ್ಕನೇ ತರಗತಿಯಲ್ಲಿ ತೋಟದಲ್ಲಿಯ ಮಡಿಗಳಲ್ಲಿ ಮಳೆಗಾಲದಲ್ಲಿ ಬೆಳೆಯುವ ಕಾಯಿ ಪಲ್ಲೆಗಳನ್ನು ಬೆಳಿಸಲಿಕ್ಕೆ ಕಲಿಯುವದು, ಗಿಡಗಳಿಗೆ ರೋಗ ತಗಲದಂತೆ ಅಮೋನಿಯಮ್ ಸಲ್ಫೇಟ್ ಮುಂತಾದವುಗಳಿಂದ ಅವನ್ನು ರಕ್ಷಿಸಲು ಕಲಿಯುವದು, ಬೇರೆ ಬೇರೆ ತರದ ಕಟ್ಟಿಗೆ ಹಾಗು ಕಬ್ಬಿಣ ನೇಗಿಲುಗಳ ಜ್ಞಾನ, ಸಮೀಪದಲ್ಲಿರುವ ಗುಡ್ಡ-ದಿನ್ನೆಗಳಿಗೆ ಹೋಗಿ ಬೇರೆ ಬೇರೆ ತರದ ನೆಲಗಳ ಅಭ್ಯಾಸ ಮಾಡುವದು, ಕೋಳಿ-ಹುಂಜಗಳನ್ನು ಸಾಕುವದು, ತತ್ತಿ ಗಳನ್ನು ಕೂಡಿಸುವದು, ಕೋಳಿಯ ಮರಿಗಳನ್ನು ರಕ್ಷಿಸುವದು ಇವೇ ಮೊದ ಲಾದವುಗಳನ್ನು ಕಲಿಯಬೇಕಾಗುವದು.

ಅಲ್ಲದೆ ಹೊಲದಲ್ಲಿಯ ಬೆಳೆಗಳನ್ನು ಗುರುತಿಸುವುದು ಭೂಮಿಯ ಗುಣ, ಬಂಡೆಗಳು ಸವೆದು ಮಣ್ಣಾಗುವಿಕೆ, ಭೂಮಿಯಲ್ಲಿಯ ಹವೆ, ಗೊಬ್ಬರದ ಆವಶ್ಯಕತೆ, ಕೃತ್ರಿಮ ಗೊಬ್ಬರವನ್ನು ಎಷ್ಟು ಪ್ರಮಾಣದ ಮೇಲೆ ಹಾಕಬೇಕು ಎಂಬ ವಿಷಯಗಳನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಬೇಕು.

ಐದನೇ ತರಗತಿಯಲ್ಲಿ ಹರಗುವದು, ಕಟ್ಟಿಗೆಯ ಹಾಗು ಕಬ್ಬಿಣ ರೆಂಟೆ ಗಳು, ಹೊಲಗಳಲ್ಲಿ ಆ ರೆಂಟೆಗಳು ಉಪಯೋಗದಲ್ಲಿದ್ದಾಗ ಅವುಗಳ ಕೆಲಸ ಕಂಡುಹಿಡಿಯುವದು. ಕಾಯಿಪಲ್ಲೆಗಳನ್ನು ಬೆಳೆಯುವದು, ಮಳೆಗಾಲದ ಕಾಯಿಪಲ್ಲೆಗಳ ಜೊತೆಗೆ ಚಳಿಗಾಲದ ಕಾಯಿಪಲ್ಲೆಗಳನ್ನು, ಎಂದರೆ ಕ್ಯಾಬೀಜ, ನವಿಲುಕೋಲು, ಕಾಲೀಹೂವು, ಚಪ್ಪರಬದನೆ ಮುಂತಾದವುಗಳನ್ನು ಬೆಳೆಸಲಿಕ್ಕೆ ಕಲಿಯುವದು, ಹತ್ತಿ-ಜೋಳ-ಕಡಲೆ ಇವುಗಳ ಬೇರುಗಳ ಕೆಲಸ, ಅವುಗಳ ಅಭ್ಯಾಸ, ತಮ್ಮ ತೋಟಗಳಲ್ಲಿಯ ಮೊಗ್ಗೆಗಳು ಅರಳುವ ವಿಧಾನವನ್ನು ಮತ್ತು ವೇಳೆಯನ್ನು ಕಂಡು ಹಿಡಿಯುವಿಕೆ, ತೋಟದಲ್ಲಿ ಬಿದ್ದ ನಿರುಪಯೋಗಿ ಯಾದ ಎಲೆ ಮುಂತಾದವುಗಳಿಂದ ಮಿಶ್ರಗೊಬ್ಬರವನ್ನು ತಯಾರಿಸುವದು, ಗೊಬ್ಬರ ಹಾಕಿದ ಹಾಗು ಹಾಕದಿದ್ದ ಮಡಿಗಳಲ್ಲಿಯ ಒಂದೇ ಜಾತಿಯ ಬೆಳೆಯ ಪರೀಕ್ಷೆ. ಅದರಂತೆ ಹರಗಿದ ಹಾಗು ಹರಗದಿದ್ದ ಬೆಳೆಗಳಲ್ಲಿ ಕಂಡು ಬರುವ ವ್ಯತ್ಯಾಸ, ಕಳೆತೆಗೆದ ಹಾಗು ಕಳೆ ತೆಗೆಯದಿದ್ದ ಬೆಳೆಗಳು ಮುಂತಾ ದವುಗಳ ಅಭ್ಯಾಸವು ಈ ತರಗತಿಯಲ್ಲಿ ಮಾಡಿಸಲಾಗುವದು. ಮೇಲೆ ಕಾಣಿ

ಸಿದವುಗಳ ಶಾಸ್ತ್ರೀಯ ಅಭ್ಯಾಸವನ್ನು ಮಾಡಿಸಲಾಗುವದು. ಅದರಲ್ಲಿ ತರ ತರದ ಗೊಬ್ಬರ ಮಾಡುವ ವಿಧಾನವನ್ನೂ ಹೂವುಗಳ ಬೇರೆ ಬೇರೆ ವಿಭಾಗಗಳ ಬಣ್ಣ-ವಾಸನೆ ಮತ್ತು ಅರಳುವ ವೇಳೆ ಮುಂತಾದವುಗಳ ಶಾಸ್ತ್ರೀಯ ರೀತಿಯ ಅಭ್ಯಾಸವನ್ನೂ, ಎಡೆ ಹೊಡೆಯುವದು, ಕಬ್ಬಿಣದ ರೆಂಟೆ ಹಾಗು ಸಾದಾ ರೆಂಟೆಗಳಲ್ಲಿಯ ಅಂತರ, ಉಪಯುಕ್ತತೆ, ಮಳೆಯಾದ ಮೇಲೆ ಹಸಿ ಆರದಂತೆ ಹೊಡೆಯುವದರ ಉಪಯುಕ್ತತೆ, ಆದರಿಂದ ಬೆಳೆಗಳು ಬೇರಿನಿಂದ ಹರಿ ಹಿಡಿದು ಕೊಳ್ಳುವವನ್ನೂ ಪದ್ಧತಿಪೂರ್ವಕ ಅಭ್ಯಾಸ ಮಾಡಬೇಕಾಗುವದು. ಮೇಲಿನ ೧ ರಿಂದ ೫ ತರಗತಿಗಳಲ್ಲಿ ಬೇಸಾಯವನ್ನು ಪ್ರತಿ ವಾರದಲ್ಲಿ ಅರ್ಧ ಗಂಟೆ ಕಲಿಸಲಾಗುವದು.

ಆರು ಮತ್ತು ಏಳನೇ ತರಗತಿಗಳಲ್ಲಿ ಮಾತ್ರ ಪ್ರತಿದಿನ ೩ ಗಂಟೆ ೨೦ ನಿಮಿಷಗಳ ವರೆಗೆ ಒಕ್ಕಲುತನವನ್ನು ಕಲಿಸಲಾಗುವದು.

## ಬೇಸಾಯದ ವೃತ್ತಿ ಶಿಕ್ಷಣ

೨ ಸೂ: ಈ ತರಗತಿಯಲ್ಲಿ ವಿದ್ಯಾರ್ಥಿಗಳು ಹೊಲಗಳಲ್ಲಿ ಪ್ರತ್ಯಕ್ಷ ಕೆಲಸ ಮಾಡಬೇಕಾಗುತ್ತದೆ; ಮತ್ತು ಬೆಳೆ ತಕ್ಕೊಳ್ಳಲು ಅವಶ್ಯವಾದ ಎಲ್ಲ ಕೆಲಸಗಳನ್ನು ಮಾಡಬೇಕಾಗುತ್ತದೆ.

## ವ್ಯಾವಹಾರಿಕ ಬೇಸಾಯದ ಅಭ್ಯಾಸ

೧ ಎತ್ತು ಹೂಡುವದು, ರೆಂಟೆ ಕಟ್ಟುವದು, ಸರಳವಾದ ರೀತಿಯಿಂದ ನೆಟ್ಟಗೆ ರೆಂಟೆ ಹೊಡೆಯುವದು.

೨ ಆ ಪ್ರದೇಶಕ್ಕೆ ಅನುಗುಣವಾದ ಬೆಳೆ ತಕ್ಕೊಳ್ಳುವದು, ಭೂಮಿಯನ್ನು ಹದಮಾಡುವಿಕೆ, ಕುಂಟೆ ಹೊಡೆಯುವದರಿಂದ ಮೊದಲುಮಾಡಿ ಕೊಂಡು ಒಕ್ಕುವ ವರೆಗೂ ಕಲಿಯುವದು.

೩ ಹೊಲದಲ್ಲಿ ಹಾಗು ತೋಟಗಳಲ್ಲಿ ಬೆಳೆ ತಕ್ಕೊಳ್ಳುವಾಗ ಸಾಮಾನುಗಳನ್ನು ಉಪಯೋಗಿಸುವ ವಿಧಾನ, ಎಂದರೆ ಜಂತೆಕುಂಟೆ,

ಗೋರೇಹಲ್ಲು, ಬ್ಯಾಕೋಲು, ಭೂಮಿಯಿಂದ ಬೆಳೆ ಕೀಳಲಿಕ್ಕೆ ತೆಗೆಯಲಿಕ್ಕೆ ಬೇಕಾಗುವ ಬೇರೆ ಸಾಧನ, ಬೀಜಗಳನ್ನು ತೆಗೆಯುವದು ಮುಂತಾದವುಗಳ ಜ್ಞಾನ.

೪ ತೋಟದಲ್ಲಿ ಮೆಣಸಿನ ಗಿಡ, ಕಬ್ಬು, ಆಲೂಗಡ್ಡೆ ಮುಂತಾದವುಗಳನ್ನು ಬೆಳಿಸುವದು.

೫ ಸಗಣೆಯನ್ನೂ ದನಕರುಗಳ ಮೂತ್ರವನ್ನೂ ಗೊಬ್ಬರದ ಸಲುವಾಗಿ ನೆಲದಲ್ಲಿ ಸಂಗ್ರಹಿಸಿಡುವುದು.

೬ ಹುಲ್ಲಿನಿಂದ ಗೊಬ್ಬರ ತಯಾರಿಸುವುದು

೭ ದನಕರುಗಳ ಮಲಮೂತ್ರಗಳಿಂದ ಶಾಸ್ತ್ರೀಯವಾಗಿ ತಯಾರಿಸಿದ ಗೊಬ್ಬರವನ್ನು ಹೊಲಗಳಿಗೆ ಹಾಕುವ ವಿಧಾನ.

೮ ಬತ್ತದ ಬೆಳೆಗೂ, ಇನ್ನಿತರ ತೋಟದ ಬೆಳೆಗೂ ಹುಲ್ಲಿನ ಗೊಬ್ಬರವನ್ನು ಹಾಕುವ ವಿಧಾನ.

೯ ಪ್ರವಾಹಿ ಗೊಬ್ಬರಗಳನ್ನು ಉಪಯೋಗಿಸುವ ವಿಧಾನ.

೧೦ ಪುನರಾವೃತ್ತಿ ಬೆಳೆಗಳನ್ನು ತಕ್ಕೊಳ್ಳುವ ವಿಧಾನ.

೧೧ ಹೂಗಳನ್ನು ಕಲೆಹಾಕುವುದು; ಹುಳಗಳ ಭಾಗಗಳಿಂದ ಅವುಗಳನ್ನು ವಿಭಾಗಿಸುವುದು. ಯಾವ ಹುಳಗಳು ಹೂಗಳ ಯಾವ ಭಾಗಕ್ಕೆ ಹತ್ತುತ್ತವೆಂಬುದನ್ನು ಕಂಡುಹಿಡಿಯುವುದು; ಮತ್ತು ಅವು ಅಲ್ಲಿ ಮಾಡುವ ಕಾರ್ಯ.

೧೨ ತೋಟಗಾರಿಕೆ ಹಾಗು ಕಸಿ ಮಾಡುವದು. ಮಾವು, ಕಿತ್ತಳೆ ಹಾಗು ಗುಲಾಬಿ ಹೂಗಳ ಗಿಡಗಳನ್ನು ಕಸಿ ಮಾಡುವದು.

೧೩ ಕಸಿ ಮಾಡಿದವುಗಳನ್ನು ಗುಚ್ಚುವದು, ಅವುಗಳನ್ನು ನೆಡಲಿಕ್ಕೆ ತಗ್ಗು ತೆಗೆಯುವದು, ಅವುಗಳಲ್ಲಿ ಗೊಬ್ಬರ ಹಾಕಿ ಹದಮಾಡುವದು, ಅಳತೆ ಮಾಡಿ ಸಾಲಾಗಿ ಗಿಡಹಚ್ಚುವದು, ನೀರು ಹಾಯಿಸುವದು, ಕಾಯಿ-ಹಣ್ಣಿನ ಗಿಡಗಳ ಹೆಚ್ಚಿನ ಬೆಳವಣಿಗೆಗೆ ಅನುಕೂಲವಾಗುವಂತೆ ಎಲೆಗಳನ್ನು ಕತ್ತರಿಸುವದು.

೧೪. ಹೊಲಗೆಲಸದ ಸಲುವಾಗಿ ತೋಟದಲ್ಲಿಟ್ಟ ಗಡಿಗೆಗಳಲ್ಲಿ ಪ್ರಯೋಗ ಮಾಡುವದು, ಹಾಗು ಆ ಪ್ರಯೋಗಗಳ ಪರಿಣಾಮಗಳನ್ನು ಬರೆದಿಡುವದು.

ಮೇಲೆ ಹೇಳಿದವುಗಳನ್ನಲ್ಲದೆ, ಬೀಜಗಳ ಸಂಗ್ರಹ, ಉತ್ತಮ ಬೀಜಗಳ ಪರೀಕ್ಷೆ ಬೀಜಗಳ ಪ್ರಮಾಣದ ಮೇಲೆ ಮಡಿಗಳನ್ನು ತಯಾರಿಸುವದು, ಬೀಜದ ಪ್ರಮಾಣದ ಮೇಲೆ ಭೂಮಿಯನ್ನು ಹದಮಾಡುವದು, ನೀರು ಹಾಯಿಸುವ ರೀತಿ, ಭೂಮಿಗಳ–ಒಳಗೆಲಸದ ಪರೀಕ್ಷೆ, ರೆಂಟೆ ಹೊಡೆಯುವ ಆವಶ್ಯಕತೆ, ಹೊಲದಲ್ಲಿಯ ಬೆಳೆಗಳ ಅಭ್ಯಾಸ, ರೆಂಟೆ ಕುಂಟೆಗಳ ಸೂಕ್ಷ್ಮ ಅಭ್ಯಾಸ, ಹೂ ಗಿಡಗಳ ಸೂಕ್ಷ್ಮ ಅಭ್ಯಾಸ, ಎರಡೆರಡು, ಮೂರು ಮೂರು ಬೆಳೆಗಳನ್ನು ತಕ್ಕೊಳ್ಳುವ ರೀತಿ, ಅದರ ಉದ್ದೇಶ ಮತ್ತು ಉಪಯೋಗ, ಕಬ್ಬಿನ ಬೆಳೆಯ ಸಂಪೂರ್ಣ ಅಭ್ಯಾಸ, ಗೊಬ್ಬರದಲ್ಲಿಯ ಗುಣ ವಿಶೇಷಗಳು, ನೈಟ್ರೋಜನ್, ಫಾಸ್ಫರಸ್ ಮುಂತಾದವುಗಳು ಅದರಲ್ಲಿರುವಿಕೆ, ಭೂಮಿಯನ್ನು-ಫಲವತ್ತಾಗಿ ಇಡುವ ರೀತಿ, ಚಿಕ್ಕ ಚಿಕ್ಕ ಗುಡಿಸಲುಗಳನ್ನೂ ದನದ ಹಟ್ಟಿಗಳನ್ನೂ ತಯಾರಿಸುವದು. ಬಡಿಗತನ ಹಾಗು ಕಮ್ಮಾರಿಕೆಯ ಪ್ರಾಥಮಿಕ ಶಿಕ್ಷಣ ಮುಂತಾದವುಗಳನ್ನು ಶಾಸ್ತ್ರೀಯವಾಗಿ ಕಲಿಸಲಾಗುವದು.

## ೭ ನೆಯ ತರಗತಿ

ತೆನೆ ಬಡೆಯುವದು,ಕಾಳುಗಳನ್ನು ತೂರಿ ಸ್ವಚ್ಛಗೊಳಿಸುವದು,ತೂರುವ ಯಂತ್ರವನ್ನು ವಿವಿಧ ಧಾನ್ಯಗಳನ್ನು ಸ್ವಚ್ಛ ಮಾಡಲು ಜೋಡಿಸುವದು. ಬೆಳೆಗೆ ಹತ್ತಿದ ರೋಗವನ್ನು ಅಭ್ಯಾಸಿಸುವದು, ಕ್ರಿಮಿನಾಶಕವನ್ನು ತಯಾರಿಸುವದು ಹಾಗು ಸಿಂಪಡಿಸುವದು. ಹೂಗಳ ಅಭ್ಯಾಸವನ್ನು ಮುಂದೆಸಾಗಿಸುವದು, ಹೊಲ, ಗದ್ದೆ, ತೋಟಗಳಲ್ಲಿ ಬೆಳೆಗಳನ್ನು ಪೋಷಿಸಿ ಬೆಳಿಸುವದು. ಸಸಿಗಳು, ಉಸುರಾಡಿಸುವಾಗ ಆಕ್ಸಿಜನ್ ವಾಯುವನ್ನು ಬಿಡುತ್ತವೆಂಬುದನ್ನು ಪ್ರಾಯೋಗಿಕವಾಗಿ ಸಿದ್ಧಪಡಿಸುವದು. ಸಕ್ಕರೆ ಮಾಡುವ ಯಂತ್ರವನ್ನು ಬಿಚ್ಚುವದು ಹಾಗು ಜೋಡಿಸುವದು, ಪ್ರಾಣಿಗಳನ್ನು ಸಾಕುವದು, ಅವುಗಳಿಗಾಗಿ ಒಳ್ಳೇ ಮನೆ, ಸ್ವಚ್ಛತೆ, ವೇಳೆಗೆ ಸರಿಯಾಗಿ ಆಹಾರ ಕೊಡುವದು, ಮುಂತಾದವುಗಳ ಬಗ್ಗೆ ದಕ್ಷತೆವಹಿಸುವದು, ಹಾಲು ಹಿಂಡುವದು' ಹಾಲಿನಿಂದ ಅನ್ಯಪದಾರ್ಥಗಳನ್ನು ತಯಾರಿಸುವದು. ದನಗಳ ರೋಗಗಳನ್ನು

ಅಭ್ಯಾಸಿಸುವದು, ಹುಣ್ಣು, ಸುಟ್ಟಗಾಯ, ಚರ್ಮರೋಗ, ಸುಂಕುರೋಗ ಮೊದಲಾದವುಗಳಿಗೆ ಚಿಕಿತ್ಸೆ ಮಾಡುವದು, ಪ್ರತಿ ಬೆಳೆಯಿಂದ ಲಾಭವೆಷ್ಟು ಹಾನಿಯೆಷ್ಟೆಂಬುದನ್ನು ಅರಿಯುವದಕ್ಕಾಗಿ ಲೆಕ್ಕವಿಡುವದು, ಪ್ರಯೋಗ ಕ್ಕೆಂದು ಸಿದ್ಧಪಡಿಸಿದ ಭೂಮಿಯಲ್ಲಿ ವಿವಿಧ ಪ್ರಯೋಗಗಳನ್ನು ಮಾಡಿ ಅವುಗಳ ಪರಿಣಾಮವನ್ನು ನೋಡುವದು, ಇಂತಹ ಪ್ರಯೋಗಗಳಲ್ಲಿ ಯೋಗ್ಯವಾಗಿ ಬಿತ್ತುವ ಬದಲು ಗಡುಚಾಗಿ ಬಿತ್ತಿದರೆ, ಬೆಳೆಯು ಬಿಸಿಲಿನಲ್ಲಿ ಬೆಳೆದುದಾಗಿ ದ್ದರೆ, ಪ್ರತಿಯಾಗಿ ನೆರಳಿನಲ್ಲಿ ಬೆಳೆದಿದ್ದರೆ, ಆಗುವ ಪರಿಣಾಮವನ್ನು ಲಕ್ಷಿಸು ವದು, ಬೇರೆ ಬೇರೆ ತರದ ಮಣ್ಣುಳ್ಳ ಭೂಮಿಗಳಲ್ಲಿ ಬೆಳೆದ ಬೆಳೆಯನ್ನು ನಿರೀಕ್ಷಿಸುವದು, ಹದಗೊಳಿಸಿದ ಹಸಿಯಾದ ಮತ್ತು ಒಣಗಿದ ಭೂಮಿಯನ್ನು ಗಾಳಿಗೆ ಬಿಟ್ಟರೆ ಆಗುವ ಪರಿಣಾಮವೇ ಮುಂತಾದವು: ಮುಖ್ಯವಾದವುಗಳು.

ಬೀಜವನ್ನು ಸಾಲಾಗಿ ಬಿತ್ತುವ, ತೆನೆಗಳನ್ನು ನುರಿಸುವ, ಹಾಗು ನುರಿತುದನ್ನು ತೂರಿ ಸ್ವಚ್ಛ ಮಾಡುವ ಯಂತ್ರಗಳ ಅಭ್ಯಾಸ, ಬೆಳೆಗಳಿಗೆ ಹತ್ತುವ ರೋಗಗಳು, ಅವುಗಳನ್ನು ನೈಸರ್ಗಿಕವಾಗಿ ಹಾಗು ಕೃತ್ರಿಮವಾಗಿ ತಡೆಯುವ ಉಪಾಯಗಳ ಜ್ಞಾನ, ನಾಶಕಾರಕ ಹಾಗು ಉಪಯೋಗ ಬೀಳುವ ಕ್ರಿಮಿಗಳಾವವು, ಹೂವುಗಳ ಪುಂ ಸ್ತ್ರೀ ಕೇಶರಗಳನ್ನು ತಿಳಿಯುವದು, ಅವು ಗಳ ಕಾರ್ಯವನ್ನು ಅರಿವುದು, ಎಲೆಗಳು ಆಕ್ಸಿಜನ್ನನ್ನು ನಿಶ್ವಾಸಿಸುವದನ್ನು ತಿಳಿಯುವದು, ಕಬ್ಬನ್ನು ಹಿಂಡುವ ಯಂತ್ರ, ಮೇವನ್ನು ಕತ್ತರಿಸುವ ಯಂತ್ರ, ಅವುಗಳಿಗೆ ತಗಲುವ ವೆಚ್ಚ ಮೊದಲಾದವುಗಳನ್ನು ಅಭ್ಯಾಸಿಸುವದು. ವಿವಿಧ ತರದ, ಎಂದರೆ ನಾಗರಮೋತಿಯಂತಹ ಹುಳಗಳನ್ನು ಹೊರದೂಡಲು ಕೈಕೊಳ್ಳಲಾಗುವ ವಿಶೇಷ ರೀತಿಗಳನ್ನು ತಿಳಿವುದು. ಋತುಮಾನ ಮತ್ತು ಭೂಮಿಯುಗುಣಕ್ಕೆ ಅನುಗುಣವಾಗಿ ಬಹಳ ಒಳಸೇರುವಂತೆ ಹಾಗು ಸಾಧಾರಣ ಮಟ್ಟಿಗೆ ರೆಂಟಿಹೊಡೆಯುವದು. ಪ್ರಾಣಿಗಳನ್ನು ಸಾಕುವದು, ಬೀಜದ ಹೋರಿಗಳನ್ನು, ಒಳ್ಳೇ ಆಕಳುಗಳನ್ನು ಆರಿಸುವದು, ದನಗಳ ರೋಗಗಳನ್ನು ತಿಳಿಯುವದು, ರೋಗಿ, ಮತ್ತು ನಿರೋಗಿ ಪ್ರಾಣಿಗಳಲ್ಲಿನ ಭೇದ, ಶಸ್ತ್ರ ಚಿಕಿತ್ಸೆ, ರೋಗಪೀಡಿತ ದನಗಳ ಉಪಚಾರ ಮೊದಲಾದವುಗಳನ್ನು ಅರಿತು ಕೊಳ್ಳುವದು. ಸಹಕಾರಿ ತತ್ವಗಳನ್ನೂ ಅವುಗಳ ಲಾಭವನ್ನೂ ಹಳ್ಳಿಗರಿಗೆ ತಿಳಿ ಹೇಳುವದು. ಹೊಲದ ಲೆಕ್ಕಪತ್ರವನ್ನಿಡುವದು. ಗಾಳಿನ ಸಂಗ್ರಹವೆಷ್ಟು,

ಹತ್ತಿರ : ಇರುವ ಹಣವೆಷ್ಟು ಮೊದಲಾದವುಗಳ ಲೆಕ್ಕವಿಡಬೇಕು. ಖಾತೆ ಕಿರ್ದಿ ಮೊದಲಾದವುಗಳನ್ನಿಟ್ಟು ವರ್ಷದ ಲಾಭಹಾನಿಗಳನ್ನು ಅರಿಯುವದು.

ಹಿಂದಣ ವರ್ಗಗಳಲ್ಲಿ ಕಲಿತ ವಿಷಯಗಳನ್ನು ಮತ್ತೊಮ್ಮೆ ನೆನಪು ಮಾಡಿ ಕೊಳ್ಳಬೇಕು.

೨೦ ಎಕರೆ ಭೂಮಿಯನ್ನು ನಾವು ಸಾಗುಗೊಳಿಸುವದಾದರೆ, ಆ ಹೊಲವನ್ನು ಕೊಳ್ಳಲಿಕ್ಕೆ ತಗಲುವ ವೆಚ್ಚ, ಎರಡು ಎತ್ತುಗಳು, ಎರಡು ಕಪ್ಪಲೆಗಳಿಗೆ ಪೂರೈಸುವಂತಹ ಬಾವಿ, ದನಗಳ ಕೊಟ್ಟಿಗೆ, ಬಂಡಿ ಮೊದಲಾದ ಸಾಗುವಳಿಗೆ ಆವಶ್ಯಕವಾದ ಎಲ್ಲ ಮೂಲ ಸಲಕರಣೆಗಳನ್ನು ಕೊಳ್ಳಲಿಕ್ಕೆ ತಗಲುವ ವೆಚ್ಚ, ಇವೆಲ್ಲವನ್ನೊಳಗೊಂಡು ನಾವು ೫೯೧೦ ರೂಪಾಯಿ ವೆಚ್ಚ ಮಾಡಬೇಕಾಗುವದು. ಹೊಲವನ್ನು ಕೊಳ್ಳುವ ವೆಚ್ಚವನ್ನು ೧ ಎಕರೆಗೆ ೧೦೦ ರೂಪಾಯಿ ಎಂದು ಹಿಡಿದಿದೆ. ಇದಲ್ಲದೆ ಮೊದಲಿನ ವರ್ಷ ಕೈಯಲ್ಲಿ ಎಲ್ಲ ತರದ ವೆಚ್ಚಕ್ಕಾಗಿ (ಹೊಟ್ಟು, ಬೀಜ, ಸಾಗುವಳಿ ಮುಂ.) ೯೦೦ ರೂಪಾಯಿ ಗಳು ಇದ್ದರೆ ಚನ್ನಾಗಿ ಕೆಲಸ ಸಾಗಿಸಬಹುದು.

## ಮೂಲ ಉದ್ಯೋಗ–ಕಾಗದ, ರಟ್ಟು, ಕಟ್ಟಿಗೆ, ಹಾಗು ಧಾತುಗಳಿಂದ ಮಾಡುವ ಕೈಗೆಲಸ

ಒಂದನೇ ಹಾಗು ಎರಡನೇ ತರಗತಿಗಳಲ್ಲಿ ಕಾಗದ ರಟ್ಟುಗಳಿಂದ ಕೈ ಕೆಲಸ ಮಾಡಬೇಕಾಗುವದು ೩ ರಿಂದ ೫ ನೆಯ ತರಗತಿಯ ವರೆಗೆ ಕಟ್ಟಿಗೆ ಯಿಂದ ಕೆಲಸ ಮಾಡಬೇಕು. ೬ ಮತ್ತು ೭ನೆಯ ತರಗತಿಯಲ್ಲಿ ಕಟ್ಟಿಗೆಯ ಇಲ್ಲವೆ ಧಾತುಗಳ (ಎರಡರಲ್ಲಿ ಯಾವದಾದರೊಂದು) ಕೈಗೆಲಸವನ್ನು ಕಲಿಯ ಬೇಕಾಗುವದು. ಅಲ್ಲದೆ ಕಟ್ಟಿಗೆ ಮತ್ತು ಧಾತುಗಳ ಕೈಗಾರಿಕೆಯನ್ನು ೬-೭ ತರಗತಿಗಳಲ್ಲಿ ಐಚ್ಛಿಕ ವಿಷಯವನ್ನಾಗಿಯೂ ಕಾಗದ ರಟ್ಟುಗಳ ೩ ತಿಂಗಳ ಕೈಗೆಲಸವನ್ನು ೬–೭ ತರಗತಿಗಳಲ್ಲಿ ಐಚ್ಛಿಕ ವಿಷಯುವನ್ನಾಗಿಯೂ ಇರಿಸಿದೆ.

**೧ನೆಯ ತರಗತಿಯಲ್ಲಿ:**— ಕಾಗದ ರಟ್ಟುಗಳಿಂದ ಶಾಲೋಪಯೋಗಿ ಹಲಿಗೆ, ಒತ್ತುಕರಡು ನೋಟು ಬುಕ್ಕುಗಳನ್ನು ಬೈಂಡ್ ಮಾಡುವದು, ಫೈಲಿನ ಮುಖಪತ್ರ ಮುಂತಾದವುಗಳನ್ನು ಮಾಡುವದು, ಇಂಚು ಫೂಟುಗಳ ಜ್ಞಾನ, ಕೂಡಿಸುವ ಕಳೆಯುವ ಲೆಕ್ಕಗಳ ಜ್ಞಾನ ಕೊಡಲಾಗುವದು.

**೨ನೆಯ ತರಗತಿಯಲ್ಲಿ:**— ಚಿತ್ರಕಲೆಯ ಮೂಲ ಜ್ಞಾನವಾಗುವದು. ವಿವಿಧ ಬಣ್ಣಗಳ ಚಿತ್ರತೆಗೆಯುವದು, ಕುಂಚ ಪೆನ್ಸಿಲುಗಳನ್ನಿಡುವಂತಹ ಪೆಟ್ಟಿಗೆ ಹಾಗು ಬೇರೆ ಬೇರೆ ಮಾದರಿಯ ಪೆಟ್ಟಿಗೆಗಳು.

**೩ನೆಯ ತರಗತಿಯಲ್ಲಿ:**— ಕಟ್ಟಿಗೆಯ ಚಿಲ್ಲರೆ ಸಾಮಾನುಗಳನ್ನು ಮಾಡುವದು. ಕುರ್ಚಿಯ ಹಿಡಿಕೆ, ನಿಚ್ಚಣಿಕೆ, ಸಾದಾಮಂಚ, ಪೆಟ್ಟಿಗೆ ಮುಂತಾದವುಗಳನ್ನು ಮಾಡುವದು.

**೪ನೆಯ ತರಗತಿಯಲ್ಲಿ:**— ಬಡಿಗತನದ ಕೆಲಸಕ್ಕೆ ಬೇಕಾಗುವ ಜ್ಞಾನ ಮಾಡಿಕೊಡುವದು. ಗಿಡಗಳ ಬೆಳವಣಿಗೆ ಹಾಗೂ ಅವುಗಳನ್ನು ಕಡೆಯುವ ಜ್ಞಾನ ಕಟ್ಟಿಗೆಯ ಅಳತೆಯನ್ನು ತಕ್ಕೊಳ್ಳುವದು. ಅವುಗಳ ಜಾತಿಯನ್ನು ಕಂಡು ಹಿಡಿಯುವದು, ಹಾಗು ಕಟ್ಟಿಗೆಯ ವ್ಯಾಪಾರದ ಬಗ್ಗೆ ಬೇಕಾದ ಜ್ಞಾನ– ಇವೆಲ್ಲವುಗಳನ್ನೂ ಪ್ರತ್ಯಕ್ಷ ಕೆಲಸ ಮಾಡುವಾಗ ತಿಳಿಸಿಹೇಳುವುದು.

**೫ನೆಯ ತರಗತಿಯಲ್ಲಿ:**— ಕಾರ್ಬನ್, ಆಕ್ಸಿಜನ್, ನೈಟ್ರೋಜನ್, ಹೈಡ್ರೋಜನ್, ಸಲ್ಫರ್ (ಗಂಧಕ) ಮತ್ತು ಇದ್ದಲಿ ಇವುಗಳ ಬಗೆಗೆ ತಿಳಿವಳಿಕೆ.

ಕಟ್ಟಿಗೆ ಕೆಲಸ ಮಾಡುವಾಗ ಉಪಯೋಗಿಸುವ ಕಬ್ಬಿಣ, ತಾಮ್ರ, ಹಿತ್ತಾಳಿ, ಸತುವು ಮುಂತಾದವುಗಳ ಬಗೆಗೆ ಸಂಪೂರ್ಣ ಜ್ಞಾನವಮಾಡಿಕೊಡುವದು.

**ಪ್ರತ್ಯಕ್ಷ ಜ್ಞಾನ:**— ಕಟ್ಟಿಗೆಯ ಹತ್ತು ಸಾಮಾನುಗಳನ್ನು ತಯಾರಿಸುವದು. ಅವುಗಳಿಗೆ ಬಣ್ಣ ಕೊಡುವದು, ಮಿಂಚು ಹುಟ್ಟಿಸುವದು.

**೬ನೆಯ ತರಗತಿಯಲ್ಲಿ:**— ಕೊನೆಯ ಎರಡು ತರಗತಿಗಳಲ್ಲಿ ಹುಡುಗರು ತಮ್ಮ ಕೆಲಸದಿಂದ ತಿಂಗಳಿಗೆ ಕನಿಷ್ಟ ಐದು ರೂಪಾಯಿಗಳನ್ನಾದರೂ ಗಳಿಸಲೇಬೇಕು. ಆದ್ದರಿಂದ ಅವರು ಕಟ್ಟಿಗೆ ಅಥವಾ ಧಾತುವಿನಲ್ಲಿ ಕೆಲಸ ಮಾಡಬೇಕು. ಅವರು ಮಾಡಿದ ಸಾಮಾನುಗಳಿಗೆ ಪೇಟೆಯಲ್ಲಿ ಸಾಕಷ್ಟು ಬೇಡಿಕೆ ಇರಬೇಕು.

ಈ ಏಳೂ ತರಗತಿಗಳಲ್ಲಿ ಹುಡುಗರು ದಿನಾಲು ಮೂರುವರೆ ಗಂಟೆ ವ್ಯವಸಾಯ ಕೆಲಸ ಮಾಡಬೇಕು. ಈ ಅವಧಿಯಲ್ಲಿ ಅವರಿಗೆ ೧೦ ನಿಮಿಷ ವಿಶ್ರಾಂತಿ ದೊರೆಯುವದು.

ರಟ್ಟಿನ ಕೈಕೆಲಸ ಕಲಿಯುವ ಹದಿನೈದು ವಿದ್ಯಾರ್ಥಿಗಳ ವರ್ಗಕ್ಕೆ ಬೇಕಾಗುವ ಉಪಕರಣಗಳ ಬೆಲೆ: ೧೨೪—೮—೦

ಏಳನೇ ತರಗತಿಯಲ್ಲಿ ರಟ್ಟಿನ ಕೈಕೆಲಸವು ಐಚ್ಛಿಕ ವಿಷಯವೆಂದು ತಿಳಿದರೆ ೩೦ ವಿದ್ಯಾರ್ಥಿಗಳ ವರ್ಗಕ್ಕೆ ಬೇಕಾಗುವ ಉಪಕರಣಗಳ ಬೆಲೆ: ೨೧೯—೧೨—೦

೬, ೭ನೇ ತರಗತಿಯಲ್ಲಿ ಕಟ್ಟಿಗೆಯ ಕೆಲಸ ಮಾಡುವ ೧೫ ವಿದ್ಯಾರ್ಥಿಗಳಿಗೆ ಬೇಕಾಗುವ ಉಪಕರಣಗಳ ಬೆಲೆ: ೯೧೪—೦—೦

೬, ೭ನೇ ತರಗತಿಯಲ್ಲಿ ಧಾತುಗಳ ಕೆಲಸ ಮಾಡುವ ೧೫ ವಿದ್ಯಾರ್ಥಿಗಳಿಗೆ ಬೇಕಾಗುವ ಉಪಕರಣಗಳ ಬೆಲೆ: ೪೦೦—೦—೦

# ಬೇರೆ ವಿಷಯಗಳು

## ಮಾತೃಭಾಷೆ ಹಾಗು ಹಿಂದುಸ್ತಾನಿ

ಹಿಂದುಸ್ತಾನಿಯು ಕೊನೆಯ ಮೂರು ವರ್ಷಗಳಲ್ಲಿ ಮಾತ್ರ ಕಲಿಸಲ್ಪಡುವದು. ಅಕ್ಷರಜ್ಞಾನ ಮೊದಲುಗೊಂಡು ಚಿಕ್ಕ ನಿಬಂಧ ಬರೆಯಲಿಕ್ಕೆ, ಪತ್ರ ವ್ಯವಹಾರ ಮಾಡಲಿಕ್ಕೆ, ಸಂಭಾಷಣೆ ಮಾಡಲಿಕ್ಕೆ ಬರುವಷ್ಟು ಈ ಭಾಷೆಯ ಜ್ಞಾನಮಾಡಿ ಕೊಡಲ್ಪಡುವದು.

**ಮಾತೃ ಭಾಷೆ:**— ಏಳು ವರ್ಷಗಳಲ್ಲಿ ಸಾಕಷ್ಟು ವ್ಯಾಕರಣ ಜ್ಞಾನ, ಶಬ್ದೋತ್ಪತ್ತಿ ಜ್ಞಾನ, ಕಾವ್ಯ, ಗದ್ಯ ಗ್ರಂಥಗಳನ್ನು ಓದುವದು, ಮಾತೃಭಾಷೆಯಲ್ಲಿ ಭಾಷಣ ಮಾಡುವದು, ವೃತ್ತಪತ್ರಗಳಿಗೆ ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ಬರೆದು ತಿಳಿಸುವದು. ಇದಕ್ಕೆ ಬೇಕಾಗುವ ಎಲ್ಲ ತರದ ಪುಸ್ತಕಗಳನ್ನು ಓದಿಸುವದು.

## ಲೆಕ್ಕ

ಅಂಕೆ ಮಗ್ಗಿ ಮೊದಲುಗೊಂಡು ಕೂಡಿಸುವದು, ಕಳೆಯುವದು, ಗುಣಾಕಾರ, ಭಾಗಾಕಾರ, ತ್ರೈರಾಶಿಕ, ಪಂಚರಾಶಿಕ, ವ್ಯವಹಾರದ ಅಪೂರ್ಣಾಂಕ, ದಶಾಂಶ ಅಪೂರ್ಣಾಂಕ, ವ್ಯವಹಾರದಲ್ಲಿ ಬೇಕಾಗುವ ಕೋಷ್ಟಕಗಳು, ಜಮಾ ಖರ್ಚನ್ನು ಇಡುವ ಪದ್ಧತಿ, ಅಂದಾಜುಪತ್ರಿಕೆ ತಯಾರಿಸುವದು, ವ್ಯವಹಾರಿಕ ಭೂಮಿತಿ ಮುಂತಾದ ವಿಷಯಗಳು ಇದರಲ್ಲಿ ಬರುವವು.

## ಸಾಮಾಜಿಕ ವಿಷಯಗಳ ಅಭ್ಯಾಸ

೧. ಕಾಡುಸ್ಥಿತಿಯಲ್ಲಿದ್ದ ಮನುಷ್ಯನ ಜೀವನ ಚರಿತ್ರೆ. ೨. ಈಜಿಪ್ತ, ಚೀನಾ ಮತ್ತುಪ್ರಾಚೀನ ಹಿಂದೂಸ್ತಾನದಲ್ಲಿನ ಆಗಿನ ಕಾಲದ ಜನರ ವರ್ಣನೆ. ೩. ತೀರ ದೂರವಿರುವ ಅರಬ್, ಬೇಡುಯಿನ್, ಎಸ್ಕಿಮೊ, ರೆಡ್ ಇಂಡಿಯನ್ ಆಫ್ರಿಕನ್ ಜನರ ವರ್ಣನೆ.

## ನಾಗರಿಕತೆಯ ಶಿಕ್ಷಣ

[ಅ] ಶಾಲೆಯಲ್ಲಿ ಹುಡುಗನು ಹೇಗೆ ವರ್ತಿಸಬೇಕು ?

[ಆ] ಸ್ವಚ್ಛತೆ, ಶಿಕ್ಷಕರ ಬಗೆಗೆ ಮತ್ತು ಸಂಗಡಿಗರ ಬಗೆಗೆ ಅವನ ಕರ್ತವ್ಯ.

[ಇ] ವೃತ್ತಿಶಿಕ್ಷಣ ಪಡೆಯುವಾಗ ತನ್ನ ಉಪಕರಣಗಳನ್ನು ಯೋಗ್ಯ ಸ್ಥಳದಲ್ಲಿಡುವದು, ಅವುಗಳನ್ನೇ ಉಪಯೋಗಿಸುವದು, ತನ್ನ ಸರತಿ ಬಂದಾಗ ಮಾತ್ರ ಅವುಗಳನ್ನು ಮುಟ್ಟುವುದು, ಬೇರೆಯವರಿಗೆ ತೊಂದರೆಯಾಗದಂತೆ ಕೆಲಸ ಮಾಡುವದು.

[ಈ] ಆಟನೋಟಗಳು:— ನ್ಯಾಯದಿಂದಾಡುವದು, ಅಶಕ್ತ ಹುಡುಗರ ಲಾಭವನ್ನು ಪಡಕೊಳ್ಳದಿರುವದು, ಆಟದಲ್ಲಿ ವಿಜಯಕ್ಕಿಂತ ಸತ್ಯಕ್ಕೆ ಹೆಚ್ಚು ಮರ್ಯಾದೆ ಕೊಡುವದು.

[ಉ] ತನ್ನ ಹೊಣೆಯನ್ನು ಯೋಗ್ಯ ರೀತಿಯಿಂದ ನೆರವೇರಿಸುವದು.

## ಮನೆಯಲ್ಲಿ ಹುಡುಗರ ಜೀವನಕ್ರಮ

ತಂದೆ ತಾಯಿ, ಅಣ್ಣ ತಮ್ಮ, ಅಕ್ಕ ತಂಗಿ ಇತರ ಬಂಧುಗಳು ಮತ್ತು ಆಳುಗಳ ಕರ್ತವ್ಯಗಳು; ಅವರನ್ನು ಕುರಿತು ಬಾಲಕನ ಕರ್ತವ್ಯಗಳು; ಮನೆಯಲ್ಲಿ ಅವನಿಗೆ ಹೇಳಿದ ಕೆಲಸವನ್ನು ವೇಳೆಗೆ ಸರಿಯಾಗಿ ಮಾಡುವದು ಮುಂತಾದ್ದು

## ೬. ಶಾರೀರಕ ಶಿಕ್ಷಣ

ಹಳ್ಳಿಗಳಲ್ಲಿ ಉಪಕರಣಗಳು ಇಲ್ಲದಂಥ ಆಟಗಳನ್ನಾಡುವುದು. ಆಟದಲ್ಲಿ ಬುದ್ಧಿ ಚಾತುರ್ಯ ತೋರಿಸುವದು. ತಾಳಕ್ಕೆ ಸರಿಯಾಗಿ ವ್ಯಾಯಾಮ ಮಾಡುವದು. ಹಳ್ಳಿಯ ಜನರ ಕುಣಿತಗಳನ್ನು ಕಲಿಯುವದು.

ಇದು ಮೊದಲನೇ ವರ್ಷದ ಕಾರ್ಯಕ್ರಮ. ಮುಂದಿನ ತರಗತಿಗಳಲ್ಲಿ ಇವೇ ವಿಷಯಗಳಲ್ಲಿ ಆಳವಾಗಿ ಅಭ್ಯಸಿಸುವದು ಮತ್ತು ನಾಗರಿಕರ ಎಲ್ಲ ಕರ್ತವ್ಯಗಳನ್ನು ಕುರಿತು ಸಂಪೂರ್ಣ ಜ್ಞಾನಮಾಡಿಕೊಡುವದು.

## ಸಾಮಾನ್ಯ ಶಾಸ್ತ್ರೀಯ ವಿಷಯಗಳು

ನಮಗೆ ಗೊತ್ತಿರುವ ಸಸಿಗಳ ಹಾಗು ಗಿಡಗಳ ಜ್ಞಾನ, ಪ್ರಾಣಿಗಳ ಜ್ಞಾನ, ನಾವು ಉಪಯೋಗಿಸುವ ಹವೆ, ನೀರು ಮತ್ತು ಆಹಾರದ ಬಗೆಗೆ ಸಂಪೂರ್ಣ ಜ್ಞಾನ, ಬೇನೆಯುವರಿಗೆ ಅವಶ್ಯವಾಗಿ ಬೇಕಾಗುವ ಪ್ರಥಮೋಪಚಾರ, ಸಾಮಾನ್ಯ ಬೇನೆಗಳ ತಿಳಿವಳಿಕೆ ಹಾಗು ಅವುಗಳಿಗೆ ಔಷಧಗಳು.

## ನಕ್ಷತ್ರಜ್ಞಾನ

ಪಂಚಾಂಗ ತಿಳಿದುಕೊಳ್ಳುವುದು, ನಕ್ಷತ್ರಗಳ ಸಹಾಯದಿಂದ ಹೊತ್ತು ಹಾಗು ದಿಕ್ಕುಗಳನ್ನು ತಿಳಿದುಕೊಳ್ಳುವದು.

## ಚಿತ್ರಕಲೆ

ಬಣ್ಣದ ಜ್ಞಾನ, ಸುತ್ತುಮುತ್ತಲಿನ ಪದಾರ್ಥಗಳನ್ನು ಬಣ್ಣದಿಂದ ಕಾಗದದ ಮೇಲೆ ಬರೆಯುವದು, ಐತಿಹಾಸಿಕ ಪುರುಷರ ಪಟಗಳನ್ನು ಬರೆಯುವದು, ಸಾಮಾಜಿಕ ಕೆಲಸದ ಸಲುವಾಗಿ ಬೇಕಾಗುವ ಗೋಡೆಪಟಗಳನ್ನು (Posters) ತಯಾರಿಸುವದು, ಮನೆಯ ನಕಾಶವನ್ನು ತೆಗೆಯುವದು ಮುಂತಾದ್ದು.

ನಾವು ಈ ಪುಸ್ತಕದಲ್ಲಿ ಅಭ್ಯಾಸಕ್ರಮವನ್ನು ವಿಸ್ತಾರವಾಗಿ ಕೊಟ್ಟಿಲ್ಲ. ವಾರ್ಧಾ ಶಿಕ್ಷಣಕ್ರಮವನ್ನು ತಯಾರಿಸುವವರು ಅದನ್ನು ಬೇರೆ ಬೇರೆ ತರಗತಿಗೆ ಕಲಿಸುವಷ್ಟು ಸವಿಸ್ತಾರವಾಗಿ ಕೊಟ್ಟಿದ್ದಾರೆ. ಇಲ್ಲಿ ನಾವು ಅದರ ಕಲ್ಪನೆ ಬರುವಷ್ಟು ಮಾತ್ರ ಕೊಟ್ಟಿರುತ್ತೇವೆ.

ಇದಲ್ಲದೆ ಮೂಲ ಇಂಗ್ಲಿಷ್ ಪುಸ್ತಕದಲ್ಲಿ ಈ ವಿಷಯಗಳು ಮುಖ್ಯ ವ್ಯವಸಾಯಕ್ಕೆ ಅನ್ವಯಿಸುವಂತೆ ಹೇಗೆ ಕಲಿಸಬೇಕೆಂಬುದನ್ನು ಹೇಳಿದ್ದಾರೆ. ಅದನ್ನು ಇಲ್ಲಿ ವಿವರಿಸಿಲ್ಲ. ಅದು ಪುಸ್ತಕದಿಂದ ತಿಳಿಯುವಂತಿಲ್ಲ. ಅದರ ಕಲ್ಪನೆ ಅನುಭವಿಕರು ಕಲಿಸುವಾಗ ಪ್ರತ್ಯಕ್ಷ ನೋಡಿದರೆ ಮಾತ್ರ ಬರುವದು.

# ಪುರವಣಿ

ನೂಲುವ ಹಾಗು ನೇಯುವ ಮುಖ್ಯ ಕೈಗಾರಿಕೆಯನ್ನಿಟ್ಟುಕೊಂಡು ಕಲಿಸುವ ಏಳು ತರಗತಿಗಳ ಸಂಪೂರ್ಣ ಶಾಲೆಗೆ ಬೇಕಾಗುವ ಕಟ್ಟಡದ ವಿವರ:—

(೧) ನೂಲುವದಕ್ಕೆ ೫ ಕೋಣೆಗಳು.
೬೦೦ ಚೌ. ಫೂ. × ೫ = ೩೦೦೦ ಚೌ. ಫೂ.

(೨) ೧೫೦ ಹುಡುಗರ ಸಲುವಾಗಿ ಹಿಂಜುವ ಸ್ಥಳ—
ಒಂದೇ ಕಾಲಕ್ಕೆ ೨೦ ವಿದ್ಯಾರ್ಥಿಗಳು ಹಿಂಜುವರು.
೪೦ ಚೌ. ಫೂ. × ೨೦ = ೮೦೦ ಚೌ. ಫೂ.

(೩) ನೇಯುವದು—೬,೭ನೇ ತರಗತಿಗಳಲ್ಲಿ ಮಾತ್ರ. ೬೦ ವಿದ್ಯಾರ್ಥಿಗಳು—೨೦ ಮಗ್ಗಗಳು= ೧೮೦೦ ಚೌ. ಫೂ.

(೪) ಸಂಗ್ರಹಾಲಯಗಳು—
ನೇಯ್ಗೆಯ ಸಾಮಾನುಗಳು —೬೦೦ ಚೌ. ಫೂ.
ಹಂಜಿ—೧೫೦ ಚೌ. ಫೂ.

(೫) ಪಾಠ ಹೇಳುವ ಎರಡು ಕೋಣೆಗಳು

(೬) ಗ್ರಂಥಾಲಯ ಮತ್ತು ಕಚೇರಿಗೂ ಇತರ ಉಪಕರಣಗಳನ್ನು ಇಡುವುದಕ್ಕೂ ಕೋಣೆ— ೬೦೦ ಚೌ ಫೂ.

(೭) ಅಟ್ಟವಾಳಿಗೆ— ೧೧೫೦ ಚೌ. ಫೂ.

(೮) ಗೋಡೆಗಳು— ೧೫೦೦ ಚೌ. ಫೂ.

ಒಟ್ಟು ೧೧,೦೦೦ ಚೌ. ಫೂ. ಕಟ್ಟಡ ಬೇಕಾಗುವದು.

ಇದಕ್ಕೂ ಹೆಚ್ಚಿನ ತಿಳಿವಳಿಕೆ ಬೇಕಾದವರು ಮೂಲ ಇಂಗ್ಲಿಷ್ ಪುಸ್ತಕವನ್ನು ಅಥವಾ ಹಿಂದೀ ಭಾಷಾಂತರವನ್ನು ಅವಶ್ಯವಾಗಿ ಓದಬೇಕು. ವಾರ್ಧಾ ಯೋಜನೆಯ ಜನಕರಲ್ಲೊಬ್ಬರಾದ ಶ್ರೀಮಾನ್ ಆರ್ಯನಾಯ್ಕರು ಮೊನ್ನೆ ಧಾರವಾಡಕ್ಕೆ ಬಂದಿದ್ದರು. ಆಗ ನಗರಸಭೆಯು ಅವರ ಅಧ್ಯಕ್ಷತೆಯಲ್ಲಿ ಒಂದು ಶಿಕ್ಷಣ ಪರಿಷತ್ತನ್ನು ಏರ್ಪಡಿಸಿದ್ದಿತು. ಅವರ ಸಂಪೂರ್ಣ ವರದಿಯನ್ನು ಸ್ಕೂಲ್‌ಬೋರ್ಡಿನ ಅಧ್ಯಕ್ಷರು ಪ್ರಕಟಿಸಿರುವರು. ಅದನ್ನೂ ಕನ್ನಡ ವಾಚಕರು ಅವಶ್ಯವಾಗಿ ಓದಬೇಕು.

## ಕಥಾಸಂಗ್ರಹಗಳು

| | | | |
|---|---|---|---|
| ಸಂಸಾರಚಿತ್ರ — ಆನಂದಕಂದ | ೨ | ೦ | ೦ |
| ಸಂಪಿಗೆ — ಕುಲಕರ್ಣಿ ಶ್ರೀನಿವಾಸ | ೦ | ೧೦ | ೯ |

## ಚರಿತ್ರೆ — ಇತಿಹಾಸ

| | | | |
|---|---|---|---|
| ಭರತಖಂಡದ ಜೀವಜ್ಯೋತಿಗಳು — ಹೊಸಕೆರೆ ಚಿದಂಬರಯ್ಯ | ೧ | ೧೨ | ೦ |
| ಮಕ್ಕಳ ಬಸವಣ್ಣನವರು — ಆನಂದಕಂದ | ೦ | ೮ | ೦ |
| ಮಗಳಿಗೆ ತಂದೆಯ ಓಲೆಗಳು — ಪಂ. ಜವಾಹರಲಾಲ ನೆಹರು | ೧ | ೬ | ೦ |
| ವಿಜಯನಗರ ಸಾಮ್ರಾಜ್ಯ — ಪ್ರ. ಗೋ. ಕುಲಕರ್ಣಿ | ೧ | ೦ | ೦ |
| ಭಾರತೀಯರ ಮೋಕ್ಷ — ನಾರಾಯಣ ಶರ್ಮಾ | ೧ | ೪ | ೦ |
| ಭೀಷ್ಮ ಚರಿತ್ರೆ — ನಾರಾಯಣ ಶರ್ಮಾ | ೦ | ೬ | ೦ |
| ಭಾರತೀಯರ ಇತಿಹಾಸ — ನಾರಾಯಣ ಶರ್ಮಾ | ಅಚ್ಚಿನಲ್ಲಿ | | |
| ಹಾಳುಮನೆ — ರವೀಂದ್ರನಾಥ | ೧ | ೦ | ೦ |
| ಅಕ್ಕತಂಗಿ — ನಾರಾಯಣ ಶರ್ಮಾ | ೨ | ೮ | ೦ |

ಸಾಹಿತ್ಯ ಭಂಡಾರ
ಕೊಪ್ಪೀಕರ ಬೀದಿ, ಹುಬ್ಬಳ್ಳಿ

## ರಾಜಕೀಯ ಜ್ಞಾನಕ್ಕಾಗಿ
## ಓದಲೇ ಬೇಕಾದ ಪುಸ್ತಕಗಳು

—:O:—

**ಜಯಪ್ರಕಾಶ**

| | | | |
|---|---|---|---|
| ಕ್ರಾಂತಿ ಪಥದಲ್ಲಿ | ೩ | ೮ | ೦ |
| ಸಾಮ್ಯವಾದವೇ ಏಕೆ? | ೧ | ೧೦ | ೦ |

**ಗಾಂಧೀಜಿ**

| | | | |
|---|---|---|---|
| ಭಾರತದಿಂದ ತೊಲಗಿರಿ | ೧ | ೪ | ೦ |
| ಸನ್ನ ಆರಂಭ ಜೀವನ | ೨ | ೦ | ೦ |
| ಸ್ತ್ರೀಯರ ಸಮಸ್ಯೆಗಳು | ೧ | ೪ | ೦ |
| ಮಂಗಲ ಪ್ರಭಾತ | ೦ | ೮ | ೦ |
| ನೀತಿಧರ್ಮ | ೦ | ೫ | ೦ |
| ಮಹಾತ್ಮರ ಮನೋರಂಗ | ೪ | ೮ | ೦ |

**ಕಿಶೋರಿಲಾಲ ಮಶ್ರುವಾಲ**

| | | | |
|---|---|---|---|
| ಗಾಂಧೀ ವಿಚಾರದೋಹನ | ೨ | ೮ | ೦ |

**ನಾರಾಯಣ ಶರ್ಮ**

| | | | |
|---|---|---|---|
| ಭಾರತೀಯ ಘಟನಾಸಮಿತಿ | ೧ | ೦ | ೦ |

**ಸಾಹಿತ್ಯ ಭಂಡಾರ**

ಕೊಪ್ಪೀಕರ ಬೀದಿ, ಹುಬ್ಬಳ್ಳಿ